ಶ್ರೀ ಎಲ್. ಎಚ್. ತಿಮ್ಮಾ ಬೋವಿ (ಚಿಕ್ಕಮಗಳೂರು—ಅನುಸೂಚಿತ ಜಾತಿಗಳು).—ಸಭಾಧ್ಯಕ್ಷರೇ, ಮತ್ತು ಸರ್ವಮಾನ್ಯ ಸಭಾ ಸದಸ್ಯರೇ, ಈದಿವಸ ನನ್ನನ್ನು ಈ ವಿಧಾನ ಸಭೆಗೆ ಉಪಾಧ್ಯಕ್ಷನನ್ನಾಗಿ ಬಹುಮತದಿಂದ ಚುನಾಯಿಸಿರುವುದು ನನಗೆ ತುಂಬ ಸಂತೋಷವನ್ನುಂಟುಮಾಡಿದೆ. ಇವೆಲ್ಲವೂ ಮಾನ್ಯ ಸದಸ್ಯರ ಬೆಂಬಲ ಮತ್ತು ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ. ಈ ಸಭೆಯ ಮಾನ್ಯ ಸದಸ್ಯರನೇಕರಿಗೆ ನಾನು ಇದಕ್ಕಾಗಿ ಅಪಾರ ಋಣಿಯಾಗಿದ್ದೇನೆ. ನಾನು ಈ ಸಭೆಯ ಘನತೆ ಗೌರವಗಳನ್ನು ಕಾಪಾಡುವೆನೇ ಅಲ್ಲದೆ, ಈ ಸಭೆಯಲ್ಲಿ ಪಾರ್ಲಿಮೆಂಟರಿ ಸಂಪ್ರದಾಯವನ್ನೂ ಪರಿಪಾಲಿಸಿಕೊಂಡು ಬರುತ್ತೇನೆಂದು ತಮ್ಮೆಲ್ಲರಿಗೂ ಭರವಸೆ ಕೊಡುತ್ತೇನೆ.

BUDGET FOR 1957-58—DEMANDS FOR GRANTS

No 13. General Administration (Except the sub major heads B snd C) and No. 14. General Administration (State Legislature and Election Charges)

(*Debate continued*)

*ಶ್ರೀ ಎಫ್. ಎಚ್. ಮೊಹ್‌ಸಿನ್ (ಹುಬ್ಬಳ್ಳಿ ನಗರ).—ಮಾನ್ಯ ಸಭಾಪತಿಗಳೇ, ಸರ್ಕಾರದವರು ಸಭೆಯ ಮುಂದೆ ಮಂಡಿಸಿರುವ ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟ ಮನವಿಯನ್ನು ಸಮರ್ಥಿಸಲು ನಾನು ನಿಂತಿದ್ದೇನೆ. ಈ ವಿಷಯವನ್ನು ಮಾತನಾಡುತ್ತಾ ವಿರೋಧ ಪಕ್ಷದ ಅನೇಕ ಸದಸ್ಯರು . . . .

ಶ್ರೀ ಕೆ. ಮಂಜಯ್ಯ ಶೆಟ್ಟಿ (ಬೈಂದೂರು).— On a point of order, ಸ್ವಾಮಿ. ಇಲ್ಲಿ ನಾವುಗಳು ಬಹಳ ದೂರದಲ್ಲಿ ಕುಳಿತಿದ್ದೇವೆ. ಈಗ ಆ ಸ್ಥಳಗಳು (ವಿರೋಧಪಕ್ಷದ ಕಡೆಯವು) ಖಾಲಿಯಿದ್ದರೆ ನಾವಾದರೂ ಅಲ್ಲಿ ಕುಳಿತುಕೊಳ್ಳಲು ಅವಕಾಶವಿದೆಯೇ ?

ಅಧ್ಯಕ್ಷರು.—ತಾವು ಆಪಾರ್ಟಿಗೆ ಸೇರುವುದಾದರೆ ಕುಳಿತುಕೊಳ್ಳಬಹುದು.

ಶ್ರೀ ಎಫ್. ಎಚ್. ಮೊಹ್‌ಸಿನ್.—ಸಭಾಪತಿಗಳೇ, ನಿನ್ನೆಯ ದಿವಸ ವಿರೋಧಪಕ್ಷದ ಕೆಲವು ಸದಸ್ಯರು ವಾಡಿಕೆಯಂತೆ ಸರ್ಕಾರವನ್ನು ಕಡುತರವಾಗಿ ಟೀಕಿಸಿದ್ದಾರೆ. ಹಾಗೆ ಟೀಕಿಸುವಾಗ ಒಬ್ಬ ಸದಸ್ಯರು ಹರಿಜನರಿಗೆ ಕೊಡಲಾಗಿದ್ದ ಮಂತ್ರಿಗಳ ಸಂಖ್ಯೆಯನ್ನು ಸಹ ಟೀಕೆ ಮಾಡಿದರು. ಅವರು ಹೇಳುವಾಗ ಮೈಸೂರು ರಾಜ್ಯದಲ್ಲಿ ಹರಿಜನರು 50 ಲಕ್ಷದಷ್ಟಿದ್ದಾರೆ, ಅದಕ್ಕನುಗುಣವಾಗಿ ಮಂತ್ರಿಮಂಡಳದಲ್ಲೂ ಸಹ ನಾಲ್ಕೈದು ಹರಿಜನ ಮಂತ್ರಿಗಳಾದರೂ ಇರುವಂತೆ ಮಾಡಬೇಕಾಗಿತ್ತೆಂದು ಒಂದು ಸೂಚನೆಯನ್ನು ಕೊಟ್ಟರು. ಆದರೆ ವಾಸ್ತವವಾಗಿ ಜನಗಣತಿಯ ಪ್ರಕಾರ ಹರಿಜನರ ಸಂಖ್ಯೆ 15 ಲಕ್ಷದಷ್ಟು ಮಾತ್ರವಿದೆಯೆಂದು ನಾನು ಅವರಿಗೆ ತಿಳಿಯಪಡಿಸಲಿಚ್ಛಿಸುತ್ತೇನೆ. ಆ ಪ್ರಕಾರ ಅವರಿಗೆ ನಾಲ್ಕೈದು ಮಂತ್ರಿಸ್ಥಾನಗಳನ್ನು ಕೊಡುವುದು ಉಚಿತವಾಗಲಾರದು. ಮುಸ್ಲಿಮರ ಸಂಖ್ಯೆ 14 ಲಕ್ಷವೆಂದು ಹೇಳಿದ್ದಾರೆ. ಅದೂ ಸಹ ಸರಿಯಲ್ಲ. ಮುಸ್ಲಿಮರ ಸಂಖ್ಯೆ 20 ಲಕ್ಷದಷ್ಟಿದೆ. ಒಬ್ಬರು ಮಾತ್ರ ಮುಸ್ಲಿಂ ಮಂತ್ರಿಗಳಿದ್ದಾರೆ. ಹೀಗೆ ಹೇಳುತ್ತಿರುವಾಗ ನಾನೇನು ಮಂತ್ರಿಮಂಡಲದಲ್ಲಿ ಮುಸ್ಲಿಮರ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಹೇಳುತ್ತಿಲ್ಲ. ನಮ್ಮ ಜನಸಂಖ್ಯೆಯ ಪ್ರಕಾರ ನಮಗೆ ಒಂದೂಕಾಲು ಮಂತ್ರಿಗಳನ್ನು ಕೊಡಬೇಕೆಂದು ಹೇಳುತ್ತಿಲ್ಲ. ಮುಖ್ಯವಾಗಿ ಮಂತ್ರಿಗಳನ್ನು ನೇಮಕ ಮಾಡುವಾಗ ಜಾತಿಯವಾರು ಮಾಡಬೇಕೆಂದು ಹೇಳುವುದು ಸರಿಯಲ್ಲ. ನಮ್ಮದು ಪ್ರಜಾ ಪ್ರಭುತ್ವ ಸರ್ಕಾರ; ಜಾತ್ಯತೀತ ದೇಶ. ಆದ್ದರಿಂದ ಮಂತ್ರಿಗಳನ್ನು ಆರೀತಿ ಜಾತಿಯ ಆಧಾರದಮೇರೆಗೆ ಆರಿಸಿಲ್ಲ. ಹಾಗೆ ಆರಿಸದಿರುವುದು ನಮಗೆಲ್ಲ ಸಂತೋಷವನ್ನುಂಟುಮಾಡಿದೆ. ಈಗ ನಮ್ಮಲ್ಲಿ ಪ್ರಜಾಪ್ರಭುತ್ವ ಸರ್ಕಾರ ಇನ್ನೂ ಬಾಲ್ಯವಸ್ಥೆಯಲ್ಲಿರುವುದರಿಂದ, ಜನರ ಆಶಾಕಾಂಕ್ಷೆಗಳನ್ನು ಆದಷ್ಟುಮಟ್ಟಿಗೆ ಪೂರೈಸುವ ದೃಷ್ಟಿಯಿಂದ ನಮ್ಮ ಮುಖ್ಯಮಂತ್ರಿಗಳು ಜಾತಿಯ ಕಡೆ ಸ್ವಲ್ಪ ಲಕ್ಷ್ಯಕೊಟ್ಟಿದ್ದರೂ ತಪ್ಪಿಲ್ಲ. ಶ್ರೀಮಾನ್ ಆರ್ಮುಗಂ ಅವರ ಭಾಷಣದಿಂದಲೋ ಏನೋ ಈ ಹೊತ್ತು ಶ್ರೀಮಾನ್ ತಿಮ್ಮಾಬೋವಿಯವರಿಗೆ ಡೆಪ್ಯುಟಿ ಸ್ಪೀಕರ ಸ್ಥಾನವನ್ನು ಕೊಟ್ಟಿದ್ದಾರೆ. ಇದರಿಂದ ಅವರು ಸಂತೃಪ್ತರಾಗುತ್ತಾರೆಂದು ನಂಬಿದ್ದೇನೆ.

ಆ ಮಾನ್ಯ ಸದಸ್ಯರು ಇನ್ನೂ ಮುಂದೆ ಹೋಗುತ್ತಾ, ಹರಿಜನರಿಗೆ ಸಾಮಾನ್ಯವಾಗಿ ಕೇವಲ ಸ್ಥಾನಿಕ ಶಾಖೆಯ ಮಂತ್ರಿಗಳ ಸ್ಥಾನವನ್ನು ಮಾತ್ರ ಕೊಡಲಾಗುತ್ತಿದೆಯೆಂದು ಹೇಳಿದರು. ನಾನು ಇದಕ್ಕೆ ಹೇಳಬಯಸುತ್ತೇನೆ, ಮಂತ್ರಿಗಳಿಗೆ ಕೊಡತಕ್ಕ ಶಾಖೆಗಳಲ್ಲಿ ಹೆಚ್ಚು ಕಡಿಮೆಯೆಂಬುದಿಲ್ಲ. ಏಕೆಂದರೆ ಅವರಲ್ಲಿ ಜಂಟಿ ಜವಾಬ್ದಾರಿ(joint responsibilty) ಯೆಂಬುದಿದೆ. ಯಾವುದೇ ಮಹತ್ವದ ವಿಷಯವನ್ನು ಚರ್ಚಿಸಬೇಕಾದರೂ ಎಲ್ಲರೂ ಕೂಡಿ ಚರ್ಚಿಸಿ ತೀರ್ಮಾನಿಸುತ್ತಾರೆ. ಆದ್ದರಿಂದ ಶಾಖೆಗಳಲ್ಲಿ ಕೀಳು ಮೇಲು ಎಂಬ ಭಾವನೆಗಳಿರಬೇಕಾಗಿಲ್ಲ.

ಇನ್ನೊಬ್ಬ ಸದಸ್ಯರು ಮಾತನಾಡುತ್ತಾ ಈ ವಿಧಾನ ಮಂಡಲವನ್ನೇ ವಿಸರ್ಜಿಸಬೇಕು, ದೇಶಕ್ಕೆಲ್ಲಾ ಒಂದು ಲೋಕಸಭೆಯಿದ್ದರೆ ಸಾಕೆಂದು ಅಭಿಪ್ರಾಯಪಟ್ಟರು. ಅವರು ಹೇಳಿದ್ದು, ಯಾವ ಮರದ ಮೇಲೆ ನಾವು ಕುಳಿತಿದ್ದೇವೋ ಆ ಮರದ ಬುಡಕ್ಕೇ ಕೊಡಲಿ ಪೆಟ್ಟುಹಾಕಿ ಕತ್ತರಿಸಿದಂತಿದೆ. ಮಾನ್ಯ ಸದಸ್ಯರು ಈ ಸಭೆಯಲ್ಲಿದ್ದು ಇದನ್ನೇ ವಿಸರ್ಜಿಸಬೇಕೆಂದು ಹೇಳಿದ್ದು ಬಹಳ ಶೋಚನೀಯ. ಅಲ್ಲದೆ ಹಿಂದೂಸ್ಥಾನ ಬಹಳ ದೊಡ್ಡ ದೇಶ. ಇದನ್ನೊಂದು ಉಪಖಂಡವೆಂತಲೇ ಕರೆಯುತ್ತಾರೆ. ಇದನ್ನು ವಿಭಾಗ ಮಾಡದೆ ಕೇಂದ್ರದಿಂದಲೇ ಆಡಳಿತ ನಡೆಸುವುದು ಬಹಳ ದುಸ್ತರ. ಅದೇ ದೃಷ್ಟಿಯಿಂದ ಪ್ರತಿ ರಾಜ್ಯವನ್ನೂ ವಿಭಾಗ ಮಾಡಿದ್ದಾಗಿದೆ. ದೇಶವನ್ನು ರಾಜ್ಯ ಘಟಕಗಳಿಂದ, ರಾಜ್ಯವನ್ನು ಜಿಲ್ಲಾ ಘಟಕಗಳಿಂದ, ಜಿಲ್ಲೆಯನ್ನು ತಾಲ್ಲೂಕು ಘಟಕಗಳಿಂದ ಆಳುವುದು ಒಂದು ವ್ಯವಸ್ಥಿತ ರೀತಿ. ಅದೇಪ್ರಕಾರ ಕೇಂದ್ರದಲ್ಲಿ ಲೋಕಸಭೆಯಿರುವಂತೆ ರಾಜ್ಯಗಳಲ್ಲಿ ವಿಧಾನಸಭೆ ಇರುವುದು ಅವಶ್ಯಕ. ವಿಧಾನ ಪರಿಷತ್ತಿನ ವಿಷಯವಾಗಿ ಹೇಳುವುದಾದರೆ, ಅದಿನ್ನೂ ವಾಗ್ವಾದದ ವಿಷಯ. ಕೆಲವರು ಬೇಕು ಎನ್ನುತ್ತಾರೆ ಇನ್ನು ಕೆಲವರು ಬೇಡವೆನ್ನುತ್ತಾರೆ. ಆದರೆ, ವಿಧಾನ ಸಭೆಯು ಮಾತ್ರ ಅವಶ್ಯಕವೆಂದು ಹೇಳುತ್ತೇನೆ.

ಅದೇರೀತಿ ಡಿವಿಜನಲ್ ಕಮೀಷನರುಗಳ ಹುದ್ದೆಯನ್ನು ತೆಗೆಯಬೇಕೆಂದು ಸೂಚಿಸಿದರು. ರಾಜ್ಯದ ವಿಧಾನ ಸಭೆಯನ್ನು ಯಾವಕಾರಣದಿಂದ ವಿಸರ್ಜಿಸಬೇಕೆಂದು ಹೇಳಿದರೋ ಅದೇ ಕಾರಣದಮೇಲೆ ಇದೂ ಬೇಡವೆಂದು ಅವರ ವಾದವಾಗಿದೆ.

Mr. SPEAKER.—That is a general question.

Sri C. K. RAJAIAH SETTY.—Is Government aware that 19,500 cubic feet can never irrigate 35,253 acres?

Sri H. K. VEERANNA GOWDH.—It is a matter for technical people to tell us. But as a lay man I can say that if there is an expectation of two fills, that area can be irrigated.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಒಂದು ಪರ್ಸೆಂಟ್ ಕೂಡ yield ಬರುವುದಿಲ್ಲ ಎಂದು ಸರ್ಕಾರದವರು ಅಪ್ಪಣೆ ಕೊಡಿಸಿದರು. ಹಾಗಾದರೆ indirect ಆಗಿ ಇದನ್ನು ತೆಗೆದುಕೊಳ್ಳಕೂಡದು ಎಂದು ಹೇಳಿದ ಹಾಗಾಗಲಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪರ್ಸೆಂಟೇಜ್ ಮೇಲೆ ಸರ್ಕಾರ ತೀರ್ಮಾನ ಮಾಡುವುದಿಲ್ಲ. ಅಗತ್ಯವಾಗಿದ್ದರೆ ಪರ್ಸೆಂಟೇಜ್ ಕಡಮೆಯಾದರೂ ಮಾಡುತ್ತೇವೆ ಎಂದು ಹೇಳಿದನಲ್ಲಾ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—35 ಸಾವಿರ ಎಕರೆ ಅಚ್ಚುಕಟ್ಟು ಆಗುವುದರಲ್ಲಿ, ತುಮಕೂರು ಜಿಲ್ಲೆಯ ಅನೇಕ ಕೆರೆಗಳಿಗೆ ಅಪ್ರತ್ಯಕ್ಷವಾಗಿ ಪ್ರಯೋಜನವಾಗುತ್ತದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಪ್ರಶ್ನೆಗೆ ಬೇಕಾದರೆ ವರ್ತಮಾನ ತರಿಸುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಹೆಚ್ಚು ಪ್ರಯೋಜನವಾಗತಕ್ಕ ಈ ಒಂದು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಅಂತ್ಯವಾಗಿ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳುತ್ತೀರಾ, ಸ್ವಾಮಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತೆಗೆದುಕೊಳ್ಳುವ ವಿಚಾರದಲ್ಲಿ ಯೋಚನೆಮಾಡಿ ನೋಡುತ್ತಾ ಇದ್ದೇವೆ ಎಂದು ಹೇಳಿದೆನಲ್ಲಾ.

ಶ್ರೀ ಬಿ. ಎಚ್. ಬೋರಣ್ಣಗೌಡ.—16 ಸಾವಿರ ಎಕರೆ ಉತ್ಕೃಷ್ಟವಾದ ತರಿ ಜಮೀನು ಮುಳುಗಡೆಗೆ ಬರುತ್ತದೆ ಎಂಬುದು ಗೊತ್ತೆ ?

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದರು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಕಾಡು ಪ್ರದೇಶದಲ್ಲಿರತಕ್ಕ ಎಷ್ಟು ಎಕರೆ ಖುಷ್ಕಿ ಜಮೀನು ತರೀ ಆಗುತ್ತದೆ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಮಾಚಾರ ತರಿಸಬೇಕು.

ಶ್ರೀ ಬಿ. ಎಚ್. ಬೋರಣ್ಣಗೌಡ.—ನಮ್ಮಲ್ಲಿರತಕ್ಕ ಎಷ್ಟೋ ಉತ್ಕೃಷ್ಟವಾಗಿರತಕ್ಕ ತರೀ ಜಮೀನುಗಳು ಮುಳುಗಡೆಯಾಗುವುದರಿಂದ ಈ ಕಟ್ಟೆ ಕಟ್ಟುವುದನ್ನು ಮನ್ನ ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ತಕರಾರಿನಿಂದಲೇ ಸ್ವಲ್ಪ ನಿಧಾನವಾಗಿದೆ.

Allotment of Land to Owners of Submerged Lands.

Q.—126. **Sri D. T. SEETHARAMA RAO** (Bhadravati).—

Will the Government be pleased to state:—

(*a*) which parts of land in the atchkat under the left and the right channels in Bhadravati Taluk would be allotted to those whose lands have been submerged under the Bhadra Project?

(*b*) whether they would grant lands to persons, as in the case of owners of submerged lands, who have lost lands in the territory through which the channel passes;

(*c*) whether they would allot lands to the landless persons of the neighbouring villages of the channel in preference to any other person?

A.—**Sri H. K. VEERANNA GOWDH** (Minister for Public Works).—

(*a*) A recommendation has been received about the reservation of lands up to 10 miles of the Left Bank Low Level Channel of the Bhadra Reservoir Project for grant to the ryots whose lands come under submersion.

(*b*) This will be considered.

(*c*) Preference will be given to the ryots whose lands come under submersion under Tunga, Bhadra and Sharavathy Projects. Separate rules are being issued as regards grant of Government lands to landless persons.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ಭದ್ರಾ ಎಡನಾಲೆಯಲ್ಲಿ ಈಗ ನೀರು ಬಿಟ್ಟಿದೆ ಅಲ್ಲವೇ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಬಿಟ್ಟಿದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ನಾಲೆಯಿಂದ 10 ಮೈಲಿಯವರೆಗೂ ರಿಸರ್ವ್ ಮಾಡಲಾಗಿದೆ ಎಂದು ಇಲ್ಲಿ ಪ್ರಕಟವಾಗಿದೆ. ಇಂಥಿಂಥ ಕಡೆಯಲ್ಲಿ, ಹತ್ತು ಮೈಲಿದೂರದಲ್ಲಿ ಇಂಥಿಂಥಾಪ್ರದೇಶದಲ್ಲಿ ಎಂದು ನಿಗದಿ ಮಾಡಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸರ್ವೇಮಾಡಿ ಇಂಥಿಂಥ ಪ್ರದೇಶ ಯಾವುದು ಎಂಬುದನ್ನು ತಿಳಿಸುತ್ತಾರೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಹಾಗೆ ನಿಗದಿ ಮಾಡಿ ಉಳಿದ ಜಮೀನನ್ನು ಆ ಹತ್ತು ಮೈಲಿ ಪ್ರದೇಶದಲ್ಲಿ ಯಾರುಯಾರಿಗೆ ಜಮೀನಿಲ್ಲವೋ ಅಂತಹವರಿಗೆ ಕೊಡುವ ವ್ಯವಸ್ಥೆ ಇಟ್ಟುಕೊಂಡಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಂತಹವರಿಗೆ ಕೊಡಬೇಕೆಂತಲೇ ತಿರ್ಮಾನವಾಗಿರುವುದು.

ಶ್ರೀ ಡಿ. ಟಿ. ಸೀತಾರಾಮರಾವ್.—ಈಗ ನೀರು ಬಿಟ್ಟಿರುವುದರಿಂದ ಮುಳುಗಡೆಯಾದವರಿಗೆ ಆದಷ್ಟು ಬೇಗ ಜಮೀನು ಕೊಟ್ಟರೆ ಸರ್ಕಾರದವರಿಗೆ ಉತ್ಪನ್ನ ಬರುತ್ತದೆ, ತಡಮಾಡಕೂಡದು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಡಮಾಡಬೇಕೆಂಬ ಅಭಿಪ್ರಾಯ ಸರ್ಕಾರದವರಿಗೆ ಲೇಶಾಂಶವೂ ಇಲ್ಲ.

Sri A. R. BADRINARAYAN.—What is the acreage available within ten miles of the Left Bank?

ಶ್ರೀ ಎಚ್. ಕೆ. ವೀರಣ್ಣಗೌಡ.—ಭದ್ರಾವತಿ, ತರೀಕೆರೆ, ನರಸಿಂಹರಾಜಪುರ ಈ ಮೂರು ಕಡೆಗಳಿಂದ ಹತ್ತು ಸಾವಿರ ಎಕರೆ ಆಗಬಹುದು ಎಂದು ಅಭಿಪ್ರಾಯವಿದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಮುಳುಗಡೆಯಾಗುವ ಪ್ರದೇಶದಲ್ಲಿ ಹತ್ತು ಮೈಲಿ ದೂರದಲ್ಲ ಜಮೀನುಕೊಡಬೇಕೆಂದು ನಿಗದಿಮಾಡಿದ್ದೀರಿ.ಹಾಗೆಯೇ ರಿಸರ್ವಾಯರ್ ಹಿಂಭಾಗದಲ್ಲಿ ಜಮೀನು ಕಳೆದು ಕೊಂಡವರಿಗೂ ಜಮೀನು ಕೊಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಯಾರುಯಾರು ಜಮೀನು ಕಳೆದು ಕೊಂಡು ತೊಂದರೆಗೆ ಒಳಗಾಗಿದ್ದಾರೋ ಅವರಿಗೆ ಮೊದಲು ಪ್ರಿಫರೆನ್ಸ್‌ಕೊಟ್ಟು ಬಾಕಿ ಉಳಿದದ್ದರಲ್ಲಿ ಬೇರೆಯವರಿಗೆ ಕೊಡುತ್ತೇವೆ.

Sri A. R. BADRI NARAYAN.—What is the area that comes under submersion under this project ?

Sri H. K. VEERANNA GOWDH.—That is a diffierent question altogether.

Sri A. R. BADRI NARAYAN.—You say that certain lands have been reserved. May I know what is the area that comes under submersion ?

Sri H. K. VEERANNA GOWDH.—I want notice. That is altogether a different question.

Sri A. R. BADRI NARAYAN.—In reply to clause (b) it is stated 'this will be considered'. Are they also not affected ?

Sri H. K. VEERANNA GOWDH.—What is meant by that is that it would be sympathetically considered.

Contracts rellating to Water Supply scheme for Hosadurga.

Q.—179. **Sri B. S. SHANKARAPPA** (Hosadurga).—

Will the Government be pleased to state:—

(*a*) the name of the contractor to whom the work pertaining to water supply scheme in Hosadurga town has been given ;

(*b*) (i) whether they had called for tenders, (ii) if so, the number of applications, (iii) the reason for rejecting them ?

A.—**Sri H. K. VEERANNA GOWDH** (Minister for Public Works).—

(*a*) Sri S. P. Mariyappa.

(*b*) (i) Yes, twice.

(ii) One each time.

(iii) On account of the Municipality not having credited the amount fully.

ಶ್ರೀ ಬಿ. ಎಸ್. ಶಂಕರಪ್ಪ.—ಹೊಸದುರ್ಗ ಮುನಿಸಿಪಾಲಿಟಿಗೆ ಸರ್ಕಾರದವರು ಮೂರು ಲಕ್ಷ ರೂಪಾಯಿ ಸಾಲಕೊಟ್ಟಿರುವುದು ಗೊತ್ತಿದೆಯೇ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಕೊಟ್ಟಿದ್ದಾರೆ.

ಶ್ರೀ ಬಿ. ಎಸ್. ಶಂಕರಪ್ಪ.—ಸಾಲ ಕೊಟ್ಟು ಎಷ್ಟು ವರ್ಷಗಳಾದವು ಸ್ವಾಮಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—1952ನೇ ಇಸವಿಯಲ್ಲಿ.

ಶ್ರೀ ಬಿ. ಎಸ್. ಶಂಕರಪ್ಪ.—1952ನೆಯ ಇಸವಿಯಲ್ಲಿ ಸಾಲಕೊಟ್ಟು, ಮುನಿಸಿಪಾಲಿಟಿಯವರು ಐದುವರ್ಷಗಳಿಂದ ಸರ್ಕಾರದವರಿಗೆ ಬಡ್ಡಿಕೊಡಬೇಕಾಗಿರುವಾಗ ಈ ನೀರು ಸರಬರಾಯಿ ಯೋಜನೆ ಪೂರ್ತಿಯಾಗದಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎರಡು ಸಾರಿ ಟೆಂಡರ್ ಕರೆದರು. ಕಂಟ್ರಾಕ್ಟರು ಎರಡುಸಾರಿಯೂ ಒಬ್ಬರೇ ಬಂದರು, ಸರಿಯಾದ ರೇಟ್ಸ್ ಕೊಡಲಿಲ್ಲ. ಹೀಗೆಲ್ಲಾ ಅನೇಕ ಕಾರಣಗಳಿಂದ ನಿಧಾನವಾಗಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಈ ಕೆಲಸದ ಸಂಬಂಧದಲ್ಲಿ ಟೆಂಡರುಗಳನ್ನು ಕರೆದರೂ ಬಾರದೆ ಇದ್ದುದರಿಂದ ಈ ಕೆಲಸವನ್ನು ಪೀಸ್‌ವರ್ಕ್ ಸಿಸ್ಟಂ ಪ್ರಕಾರವಾಡಬೇಕೆಂದು ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಸಲಹೆ ಮಾಡಿದ್ದು ನಿಜವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಲಹೆಮಾಡಿದ್ದಾರೆ. ಆದರೆ ಕೆಲಸ ನಿಧಾನವಾಗುವುದಕ್ಕೆ ಇನ್ನೂ ಒಂದು ಕಾರಣವಿದೆ. ಮುನಿಸಿಪಾಲಿಟಿಯವರು ಈ ಕೆಲಸಕ್ಕಾಗಿ ಎಷ್ಟು ಹಣವನ್ನು ಕೊಡಬೇಕಾಗಿತ್ತೋ ಅಷ್ಟನ್ನು ಕೊಡಲಿಲ್ಲ. ಪೀಸ್‌ವರ್ಕ್‌ಮೇಲೆ ಕೊಡಬಹುದೆಂದು ಸಿಫಾರಸು ಮಾಡಿದ್ದಾರೆ. ಅದರಂತೆ ಕೊಡಬೇಕೇ ಬೇಡವೇ ಎಂಬುದನ್ನು ಚೀಫ್ ಇಂಜಿನಿಯರ್ ಅವರು ತೀರ್ಮಾನ ಮಾಡಿದ ಮೇಲೆ ಸರ್ಕಾರದವರು ಕ್ರಮ ತೆಗೆದು ಕೊಳ್ಳುತ್ತಾರೆ.

ಶ್ರೀ ಜಿ. ದುಗ್ಗಪ್ಪ.—ಈ ಪ್ರಾಜೆಕ್ಟಿಗೆ ಈಗಾಗಲೇ ಎಷ್ಟು ಹಣ ಖರ್ಚಾಗಿದೆ ?.

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಸಮಾಚಾರ ನನ್ನ ಹತ್ತಿರವಿಲ್ಲ. ಅದನ್ನು ತರಿಸಬೇಕು.

ಶ್ರೀ ಜಿ. ದುಗ್ಗಪ್ಪ.—ಸರ್ಕಾರದವರು ಸಾಲವಾಗಿ ಕೊಟ್ಟಿರುವ ಹಣ ಮತ್ತು ಮುನಿಸಿಪಾಲಿಟಿಯ ಹಣ ಖರ್ಚಾಗಿದ್ದರೂ ಇನ್ನೂ ಕೆಲಸ ಮುಗಿಯದೆ ಇರುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮುನಿಸಿಪಾಲಿಟಿಯವರು ಎಷ್ಟು ಹಣವನ್ನು ಕೊಡಬೇಕೋ ಅಷ್ಟನ್ನೂ ಕೊಟ್ಟಿಲ್ಲ. ಆ ವಿಷಯವನ್ನು ಹೇಳಿದ್ದೇನೆ.

ಶ್ರೀ ಡಿ. ಟಿ. ಸೀತಾರಾಮರಾವ್.—ನೀರಿನ ಪೂರೈಕೆಗೆ ಸಂಬಂಧಪಟ್ಟಹಾಗೆ ಯಾವ ಯಾವ ಕೆಲಸಗಳು ಪೂರ್ಣವಾಗಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್ ಬೇಕು.

Sri G. DUGGAPPA—Is it not a fact that the overhead R. C. C. tank has been completed ?

Sri H. K. VEERANNA GOWDH.—I want notice for that.

Sri G. DUGGAPPA.—Is it not a fact that the work is held up on account of pipes?

Sri H. K. VEERANNA GOWDH.—I have already answered that question.

ಶ್ರೀ ಬಿ. ಎಸ್. ಶಂಕರಪ್ಪ.—ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಪೀಸ್ ವರ್ಕ್ ಕೊಡಬೇಕೆಂದು ತಿಳಿಸಿದ್ದರೂ ಆಗ ಇದ್ದಂಥ ಮಂತ್ರಿಗಳು ತಮಗೆ ಬೇಕಾದವರಿಗೆ ಈ ಕೆಲಸವನ್ನು ಕೊಡಬೇಕೆಂದು ಹೀಗೆ ಮಾಡಿದ್ದಾರೆ ಎಂದು ಸರ್ಕಾರದವರ ಗಮನಕ್ಕೆ ಬಂದಿದೆಯೋ?

Sri H. K. VEERANNA GOWDH.—I repudiate the insinuation, Sir; ರಿಕಾರ್ಡುಗಳಲ್ಲಿ ಹಾಗೇನೂ ಕಾಣುವುದಿಲ್ಲ. ಆರೀತಿ ಹೇಳತಕ್ಕದ್ದು ಸರಿಯಲ್ಲವೆಂದು ಕಾಣಿಸುತ್ತದೆ.

Bridge at Venkatapur in Bhatkal Petha, North Kanara District.

Q.—125. Sri J. H. SHAMSUDDIN (Honavar).—

Will the Government be pleased to state:—

(*a*) whether they are aware that a bridge at Venkatapur in Bhatkal Petha of North Kanara District was being constructed by the then Bombay Government;

(*b*) if so, the progress made in the construction work;

(*c*) whether the construction work is in progress or at a standstill;

(*d*) if so, whether they will set a time limit for its completion?

A.—Sri H. K. VEERANNA GOWDH (Minister for Public Works).—

(*a*) Yes.

(*b*) Wells for foundations on the Honavar side and Bhatkal side abutments have been sunk to various levels.

(*c*) In progress.

(*d*) The work is expected to be completed by the end of December 1958.

Sri J. H. SHAMSUDDIN.—Is Government aware that the plan and estimates have been revised?

*Sri H. K. VEERANNA GOWDH.—Yes.

Sri J. H. SHAMSUDDIN.—Is work still going on though the plan and estimate have been revised?

Sri H. K. VEERANNA GOWDH.—The work is now under progress. According to the revised estimate, pending the sanction, it is going on.

Sri J. H. SHAMSUDDIN.—Is Government aware that the work has to be sanctioned by Government of India?

Sri H. K. VEERANNA GOWDH.—Formerly, it was sanctioned; there was some money left and the work is going on.

Sri J. H. SHAMSUDDIN.—Will the Government write to the Government of India to give immediate sanction?

Sri H. K. VEERANNA GOWDH.—It is a matter of suggestion; we will write.

Construction of Tirumani Anecut in Bagepalli Taluk.

Q.—157. Sri S. MUNI RAJU (Chikballapur).—

Will the Government be pleased to state:—

(*a*) the date on which the sanction was accorded for the construction of Tirumani Anecut in Bagepalli Taluk;

(*b*) the reasons for not commencing the above work so far;

(*c*) whether they intend taking immediate steps in this regard?

A.—Sri H. K. VEERANNA GOWDH (Minister for Public Works).—

(*a*) The project is not yet sanctioned.

(*b*) Want of concurrence of the Government of Andhra Pradesh to the execution of the Project.

(*c*) The matter is under correspondence with the Government of Andhra Pradesh.

ಶ್ರೀ ಎಸ್. ಮುನಿರಾಜು.—ಈ ಅಣೆಕಟ್ಟನ್ನು ಕಟ್ಟಬೇಕೆಂದು ರಾಮಮೂರ್ತಿ ಸಮಿತಿಯವರು ಶಿಫಾರಸು ಮಾಡಿದ್ದಾರೆ?

*ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್ ಬೇಕು.

ಶ್ರೀ ಎಸ್. ಮುನಿರಾಜು.—ಈ ಅಣೆಕಟ್ಟಿನಿಂದ ಹೊಸ ಅಚ್ಚುಕಟ್ಟು ಏನಾದರೂ ಸಾಗುವಳಿಗೆ ಬರುತ್ತದೆಯೋ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎಂಟು ಕೆರೆಗಳ ಕೆಳಗೆ ಇರತಕ್ಕ ಜಮೀನಿಗೆ ನೀರಿನ ಅನುಕೂಲ ಹೆಚ್ಚಾಗುತ್ತದೆ. ಹೊಸದಾಗಿ ಎಷ್ಟು ಜಮೀನು ಸಾಗುವಳಿಗೆ ಬರುತ್ತದೆ ಎನ್ನುವುದಕ್ಕೆ ನೋಟೀಸ್ ಬೇಕು.

ಶ್ರೀ ಎಸ್. ಮುನಿರಾಜು.—ಏಳೆಂಟು ಕೆರೆಗಳ ಕೆಳಗೆ ಇರತಕ್ಕ ಜಮೀನು ಸಾಗುವಳಿಗೆ ಬರುವುದರಿಂದ ಆಂಧ್ರ ಸರ್ಕಾರದವರ ಅನುಮತಿ, ಈ ಅಣೆಕಟ್ಟನ್ನು ಕಟ್ಟಲು, ಬೇಕಾಗಿಲ್ಲವೆಂಬುದು ಸರ್ಕಾರದ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆಂಧ್ರ ಸರ್ಕಾರದವರ ಅನುಮತಿ ಬೇಕಾಗಿಲ್ಲವೆಂದು ಗೊತ್ತಿದ್ದರೆ, ಸರ್ಕಾರ ನಿಧಾನ ಮಾಡುತ್ತಿರಲಿಲ್ಲ. ಅವರ ಅನುಮತಿ ಬೇಕು ಎಂದು Law Department ನವರು ಅಭಿಪ್ರಾಯ ಕೊಟ್ಟಿದ್ದರಿಂದ ಅವರ ಅನುಮತಿಯನ್ನು ಕೇಳಲಾಗಿದೆ.

Repair of the Breached Bridge near Raravi, Siruguppa Taluk.

Q.—223. Sri B. E. RAMAIAH (Siruguppa).—

Will the Government be pleased to state :—

(*a*) whether they are aware of the fact that the causeway over the Hagari river near Raravi, Siruguppa Taluk, was constructed two years back at an estimated cost of about Rs. 4,25,000 ;

(*b*) whether they are also aware that a portion of it washed off within a fortnight of its opening to public traffic;

(*c*) whether they have taken any action so far to investigate the cause of early breach ;

(*d*) whether they propose to repair the same so as to provide facilities for traffic ?

A.—Sri H. K. VEERANNA GOWDH (Minister for Public Works).—

(*a*) Yes, at a cost of Rs. 3,35,000, in the year 1955.

(*b*) Yes.

(*c*) Yes.

(*d*) Yes.

ಶ್ರೀ ಬಿ. ಇ. ರಾಮಯ್ಯ.—(ಬಿ) ಭಾಗಕ್ಕೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಯಾವ ಕಾರಣದಿಂದ ಕೊಚ್ಚಿಕೊಂಡು ಹೋಯಿತು ಎಂಬುದನ್ನು ತಿಳಿಸುತ್ತೀರಾ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಮಳೆ ಹೆಚ್ಚಾಗಿ ಬಿದ್ದು ನೀರು ಹೆಚ್ಚಿಗೆ ಬಂದುದರಿಂದ ಕೊಚ್ಚಿಕೊಂಡು ಹೋಯಿತು.

ಶ್ರೀ ಬಿ. ಇ. ರಾಮಯ್ಯ.—ಈ ರೀತಿಯಾಗಲು ಕಂಟ್ರಾಕ್ಟರುಗಳದು ತಪ್ಪೋ ಅಥವಾ ಸೂಪರ್‌ವಿಷನ್ ಮಾಡುತ್ತಿದ್ದ ಅಧಿಕಾರಿಗಳ ತಪ್ಪೇ ?

ಶ್ರೀ ಎಸ್. ಕೆ. ವೀರಣ್ಣಗೌಡ.—ಅದನ್ನು ವಿಚಾರ ಮಾಡಿ ತನಿಖೆ ಮಾಡಬೇಕಾಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಇದುವರೆಗೂ ಏನೂ ತನಿಖೆ ಮಾಡಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್ ಕೊಟ್ಟರೆ ನಿರ್ಧರವಾಗಿ ತಿಳಿಸುತ್ತೇನೆ.

ಶ್ರೀ ಬಿ. ಇ. ರಾಮಯ್ಯ.—ಕೊಚ್ಚಿಕೊಂಡು ಹೋಗಿರುವ ಭಾಗವನ್ನು ಸರಿಮಾಡಿಸಲು ಅಂದಾಜು ತಯಾರಾಗಿದೆಯೇ ?

ಶ್ರೀ ಎಂ. ಎಂ. ಪಾಟೀಲ್.—ಇಷ್ಟು ದೊಡ್ಡ ಮೊತ್ತವನ್ನು ಖರ್ಚುಮಾಡಿ ಕಟ್ಟಿರುವ ಕಟ್ಟಡದಲ್ಲಿ ನಷ್ಟವಾಗಬೇಕಾಗಿದ್ದರೆ ಕಟ್ಟಡದಲ್ಲಿ ಏನು ನ್ಯೂನತೆ ಬಂದಿದೆ ಎನ್ನುವುದನ್ನು ಪರೀಕ್ಷೆ ಮಾಡಿಸಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಮಗೆ ಬಂದಿರುವ ರಿಪೋರ್ಟ್ ಪ್ರಕಾರ ಒಂದೇ ದಿನದಲ್ಲಿ ಏಳೂವರೆ ಅಂಗುಲ ಮಳೆಬಂದು ಆಲೂರು ಕೆರೆಯಿಂದ ನೀರು discharge ಆಗಿ, ಹೆಚ್ಚು ನೀರು ಬಂದಿದ್ದರಿಂದ ಕೊಚ್ಚಿಕೊಂಡು ಹೋಯಿತು ಎಂದು ತಿಳಿಯುತ್ತದೆ. ವಿಚಾರಣೆ ಮಾಡಿದ ವಿಚಾರ ಇದರಲ್ಲಿಲ್ಲ. ನೋಟೀಸ್ ಕೊಟ್ಟರೆ ತರಿಸಿ ಹೇಳುತ್ತೇನೆ.

ಶ್ರೀ ಬಿ. ಇ. ರಾಮಯ್ಯ.—ಅಂದಾಜು ಎಷ್ಟಕ್ಕೆ ತಯಾರಾಗಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಬಗ್ಗೆ 45 ಸಾವಿರ ರೂಪಾಯಿಗೆ ತಯಾರಾಗಿದೆ.

ಶ್ರೀ ಬಿ. ಇ. ರಾಮಯ್ಯ.—ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ಅಂದಾಜು ಮಂಜೂರಾಗಬೇಕು.

ಶ್ರೀ ಬಿ. ಇ. ರಾಮಯ್ಯ.—ಇದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಚೀಫ್ ಇಂಜಿನಿಯರ್ ಪರ್ಯಾಲೋಚನೆ ಮಾಡುತ್ತಿದ್ದಾರೆ. ಅವರಿಂದ ರಿಪೋರ್ಟ್ ಬಂದ ಮೇಲೆ ತಕ್ಕ ಏರ್ಪಾಡನ್ನು ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ಕಂಟ್ರಾಕ್ಟರಿಗೆ ಹಣವೆಲ್ಲ ಪಾವತಿಯಾಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್ ಬೇಕು.

ಶ್ರೀ ಟಿ. ತಾರೇಗೌಡ.—ಈ ಸೇತುವೆಯನ್ನು ಕಟ್ಟುತ್ತ ಇರುವಾಗ ಆ ಪ್ರದೇಶ ಮದರಾಸು ಪ್ರಾಂತಕ್ಕೆ ಸೇರಿತ್ತಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಳ್ಳಾರಿ ಜಿಲ್ಲೆ ಯಾವಾಗ ಮೈಸೂರಿಗೆ ಸೇರಿತ್ತೆಂಬುದು ಸದಸ್ಯರಿಗೆ ಗೊತ್ತಿದೆ.

Excavation of a Channel to irrigate Lands under Gayathri Tank, Hiriyur Taluk.

Q.—219. Sri K. KENCHAPPA (Hiriyur).—

Will the Government be pleased to state :—

(*a*) whether it is a fact that only one sluice is constructed to the left bank of Gayathri Tank (Reservoir) constructed near Kariala in Javagondanahalli Hobli of Hiriyur Taluk, without excavating

channel as in the case of right bank sluice ;

(*b*) whether it is a fact that the level of the land to the left bank side is more favourable and less costly for excavating channel to irrigate lands ;

(*c*) whether it is a fact that the nature of the soil in lands situated at the left bank where the channel margin or alignment can be taken more easily, is more fertile, better suited and can be more useful as compared to lands expected to be irrigated by the right bank channel ?

A.—Sri H. K. VEERANNA GOWDH (Minister for Public Works).—

(*a*) Yes.

(*b*) Except for one major halla (Ganada Hunse Halla) crossing on the Right Bank, the nature of land with respect to levels of side slopes (general topography) is the same on both sides.

(*c*) As no soil surveys have been conducted in the area, no definite information on this point is available.

ಶ್ರೀ ಕೆ. ಕೆಂಚಪ್ಪ.—ಗಾಯತ್ರಿ ಕೆರೆಯನ್ನು ಕಟ್ಟುವಾಗ ಎಡಗಡೆ ಬರೀ ತೂಬನ್ನು (sluice) ಇಟ್ಟು ನಾಲೆಯನ್ನು ಕೊಡದೆ ಇರುವುದಕ್ಕೆ ಕಾರಣವೇನು ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಬಲಗಡೆ ನಾಲೆಗೆ ನೀರು ಬಿಟ್ಟು, ವ್ಯವಸಾಯವಾಗಿ ಆ ನೀರು ಅಷ್ಟಕ್ಕೆ ಸಾಗುತ್ತದೆಯೇ ಅಥವಾ ಉಳಿಯುತ್ತದೆಯೇ ಎಂದು ನೋಡಿಕೊಂಡ ಮೇಲೆ ಎಡಗಡೆ ಭಾಗದಲ್ಲಿ ನಾಲೆಯನ್ನು ತೆಗೆಯಬೇಕೆಂಬ ಯೋಚನೆ ಇದೆ. ಎಡಗಡೆ ಭಾಗದಲ್ಲಿಯೂ ನಾಲೆಯನ್ನು ತೆಗೆಯಬೇಕೆಂದು ಅರಿಕೆಗಳೂ, ಒತ್ತಾಯಗಳೂ ಇವೆ. ಆದರೆ ಒತ್ತಾಯ ಬಂದಾಕ್ಷಣವೇ ಆ ರೀತಿ ಮಾಡುವುದಕ್ಕಾಗುವುದಿಲ್ಲ. ನೀರು ಸಾಕಾಗುತ್ತದೆ ಎಂದು ಸರ್ಕಾರಕ್ಕೆ ನಿರ್ಧರವಾದರೆ ಮುಂದಿನ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಕೆಂಚಪ್ಪ.—ಬಲಗಡೆಗೆ ಹಳ್ಳ ಇದೆ, ಎಡಗಡೆಗೆ ಹಳ್ಳವಿಲ್ಲವೆಂದು ಉತ್ತರದಲ್ಲಿ ಹೇಳಿದೆ. ಹಾಗಾದರೆ ಎಡಭಾಗದಲ್ಲಿ ಚಾನೆಲ್ ತೆಗೆಯುವುದನ್ನು ಬಿಟ್ಟು ಬಲಗಡೆಗೆ ಯಾಕೆ ತೆಗೆಯಲಾಯಿತು?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಅಗತ್ಯವಿದ್ದರೆ, ಮಾಹಿತಿ ತರಿಸಿ ಹೇಳುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಎಸ್ಟಿಮೇಟು ಪ್ರಕಾರ ಬಲಗಡೆಗೆ ಚಾನೆಲ್ ಪೂರ್ಣಮಾಡಿ ಎಡಗಡೆಗೆ ಯಾಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಒರಿಜಿನಲ್ ಪ್ರೊಜೆಕ್ಟು ಹೇಗೆ ಇತ್ತೋ ಹಾಗೆ ಮಾಡಿದೆ.

ಶ್ರೀ ಕೆ. ಕೆಂಚಪ್ಪ.—ಬಲಗಡೆಗೆ ತೆಗೆದು ಕೊಳ್ಳುವದಕ್ಕೆ ಕಾರಣ ಏನು, ಸ್ವಾಮಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲು ಬಲಗಡೆ ತೆಗೆದುಕೊಳ್ಳಬೇಕೆಂದು ಎಸ್ಟಿಮೇಟು ಆಯಿತು.

Sri C. K. RAJAIAH SETTY.—Is the Government aware that only technical people can give the information about the extent of atchakut that can be irrigated in the tank ?

Mr. SPEAKER.—That is too general a question.

Sri C. K. RAJAIAH SETTY.—I am speaking about this particular tank, Sir.

Mr. SPEAKER.—In view of the reply given by the Minister that it was only the right bank canal that was contemplated first, the Hon'ble Member need not ask this question.

Sri C. K. RAJAIAH SETTY.—What is the extent that is irrigable in the right bank ?

ಶ್ರೀ ಎಚ್. ಕೆ. ವೀರಣ್ಣಗೌಡ.—2020 ಎಕರೆಗಳು.

Sri C. K. RAJAIAH SETTY.—What is the capacity of the tank, Sir ?

ಶ್ರೀ ಎಚ್. ಕೆ. ವೀರಣ್ಣಗೌಡ.—2074 ಯುನಿಟ್.

ಶ್ರೀ ಕೆ. ಕೆಂಚಪ್ಪ.—ಎಡಗಡೆಗೆ ತೆಗೆದುಕೊಳ್ಳಬಾರದು ಬಲಗಡೆಗೆ ತೆಗೆದುಕೊಳ್ಳಬೇಕು ಎಂಬುದಕ್ಕೆ ಇರುವ ಕಾರಣವು ಏನು ಸ್ವಾಮಿ ?

ಅಧ್ಯಕ್ಷರು.—ಎಡಗಡೆಗೆ ಆಗಬೇಕೆಂದು ಕೇಳಲಿಲ್ಲವೆಂದು ಕಾಣುತ್ತದೆ. ಬಹುಶಃ ಬಲಗಡೆಗೆ ಆಗಬೇಕೆಂದು ಕೇಳಿರಬಹುದು.

Supply of Water to the Nalas from Suvarnamukhi Project.

Q.—32. Sri S. KARIAPPA (Virupakshipura).—

Will the Government be pleased to state :—

(*a*) whether the nalas of Suvarnamukhi project are completed ;

(*b*) whether they are going to supply water for irrigation during the current year ;

(*c*) if so, whether it is for the entire atchkat ;

(*d*) if not, to what extent ?

A.—Sri H. K. VEERANNA GOWDH (Minister for Public Works).—

(*a*) The right bank channel has been completed for a length of 4 miles against the total length of 5 miles, and the left bank channel has been executed for a length of 4 miles against the total length of $5\frac{1}{2}$ miles (except for the cross drainage works such as aqueduct and relieving weirs., etc., which are under progress).

(SRI H. K. VEERANNA GOWDH.)

(*b*), (*c*) and (*d*) Water supply was given last season for an area of about 100 acres in both the channels in the first reaches. As and when the cross drainage works are completed, water will be supplied to lands in the further reaches.

ಶ್ರೀ ಎಸ್. ಕರಿಯಪ್ಪ.—ಈ ಅಣೆಕಟ್ಟು ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿದುದಲ್ಲವೇ ಸ್ವಾಮಿ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಇದು 1951ನೇ ಇಸವಿಗೆ ಸಂಬಂಧಪಟ್ಟದ್ದು. ಆದುದರಿಂದ ಮೊದಲನೆ ಪಂಚವಾರ್ಷಿಕ ಯೋಜನೆಗೆ ಸೇರಿದೆ.

ಶ್ರೀ ಎಸ್. ಕರಿಯಪ್ಪ.—ಮೊದಲನೆ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಕೆಲಸ ಮುಗಿಯದೇ ಇರಲು ಏನು ಸಂಕಷ್ಟಗಳು ಬಂದವು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಕೆಲಸ ಮುಗಿದು ಹೋಗಿದೆ, ಸ್ವಾಮಿ.

ಶ್ರೀ ಎಸ್. ಕರಿಯಪ್ಪ.—ನೂರು ಎಕರೆಗೆ ನೀರು ಕೊಟ್ಟಿದೆ ಎಂದು ಉತ್ತರದಲ್ಲಿ ಹೇಳಿದೆ. ಈ ಅವಧಿಯಲ್ಲಿ ಒಂದುಸಾವಿರ ಎಕರೆಗೆ ನೀರು ಯಾಕೆ ಕೊಡಲಿಲ್ಲ ಸ್ವಾಮಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸುಮಾರು 850 ಎಕರೆಗೆ ನೀರು ಕೊಟ್ಟಿದೆ. ಇನ್ನು ಹೆಚ್ಚಿಗೆ ಕೊಡಲಾಗುವುದು.

ಶ್ರೀ ಎಂ. ಲಿಂಗೇಗೌಡ.—ಈ ಅಣೆಕಟ್ಟನ್ನು ಇನ್ನು ಎರಡು ಅಥವಾ ಮೂರು ಅಡಿ ಎತ್ತರಿಸಿದರೆ 2,500 ಎಕರೆ ಭೂಮಿಗೆ ನೀರು ದೊರೆಯುತ್ತಿತ್ತು ಎಂಬ ಬಗ್ಗೆ ರಿಪೋರ್ಟು ಏನಾದರೂ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸರ್ಕಾರಕ್ಕೆ ರಿಪೋರ್ಟು ಏನೂ ಬಂದಿಲ್ಲ.

ಶ್ರೀ ಎಂ. ಲಿಂಗೇಗೌಡ.—ರಿಪೋರ್ಟು ತರಿಸುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಅಭಿಪ್ರಾಯದ ಮಾತು.

Inconvenience caused to ryots in selling their produce in Davangere Regulated Market.

Q.—236. Sri M. RAMAPPA (Harihar).—

Will the Government be pleased to state :—

(*a*) whether it has come to their notice that the ryots who come to sell their produce in the Davangere Regulated Market have to wait for months ;

(*b*) the action taken for the representation made by the public of Davangere to the Chief Minister ;

(*c*) whether they propose to provide warehouse and banking facilities to the ryots ?

A.—Sri S. NIJALINGAPPA (Chief Minister).—

(*a*) No.

(*b*) The following action has been taken :—

(i) The auction time has been increased by one hour, *i.e.*, from 11 A.M. to 4 P.M. instead of from 11 A.M. to 3 P.M.

(ii) The grace time allowed to the purchasers to participate in auctions has been reduced from 1 hour 15 minutes to 30 minutes.

(iii) One hour has been fixed as the maximum period for auction in any Mandy.

(*c*) Yes.

ಶ್ರೀ ಎಂ. ರಾಮಪ್ಪ. –ಮೂರನೆಯ ಪ್ರಶ್ನೆಗೆ ಉತ್ತರದಲ್ಲಿ ಹೌದು ಎಂದು ಹೇಳಿದೆ. ರೈತರಿಗೆ ಅನುಕೂಲತೆಗಳನ್ನು ಒದಗಿಸಿಕೊಡಲು ಏನು ಕ್ರಮ ತೆಗೆದುಕೊಂಡಿದ್ದೀರಿ ಸ್ವಾಮಿ ?

*ಶ್ರೀ ಎಸ್. ನಿಜಲಿಂಗಪ್ಪ.—ದಾವಣಗೆರೆ ಸೆಂಟರದಲ್ಲಿ ಮಳಿಗೆ ಒಂದನ್ನು ಮಾಡಬೇಕೆಂದು ಇದೆ. ಕೇಂದ್ರ ಸರ್ಕಾರದೊಡನೆ ಈ ಬಗ್ಗೆ ಪತ್ರ ವ್ಯವಹಾರ ನಡೆದಿದೆ. ಮೈಸೂರು ರಾಜ್ಯಕ್ಕೆ 12 ಕೇಂದ್ರ ಮಳಿಗೆಗಳನ್ನು ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೇಳಲಾಗಿದೆ. 12 ಮಳಿಗೆಗಳನ್ನು ಸ್ಥಾಪಿಸಲಾಗುವ ಸ್ಥಳಗಳಲ್ಲಿ ದಾವಣಗೆರೆಯು ಒಂದು ಆಗಿದೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ರೆಗ್ಯುಲೇಟೆಡ್ ಮಾರ್ಕೆಟ್ ಪ್ರಾರಂಭ ಮಾಡುವ ಮುಂಚೆ ಮಳಿಗೆಗಳ ಹಾಗೂ ಬ್ಯಾಂಕಿಂಗ್ ಅನುಕೂಲತೆಗಳನ್ನು ಒದಗಿಸಿಕೊಡದೆ ಇದ್ದರೆ ರೈತರಿಗೆ ತುಂಬ ತೊಂದರೆಯಾಗುತ್ತದಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಮಾಡಿ ಬಿಟ್ಟಿದ್ದಾರೆ.

Sri K. P. GADAG.—May I know whether any agricultural produce meant for auction remained unsold on any day ?

Sri S. NIJALINGAPPA.—It rarely remains unsold.

Dr. A. R. KARISIDDAPPA.—May I know when the regulated market started in Davangere ?

Sri S. NIJALINGAPPA.—It was started roundabout 1954. I cannot give the exact date.

Dr. A. R. KARISIDDAPPA.—Is there a regulated market yard at Davangere ?

Sri S. NIJALINGAPPA.—There is. A particular place is set apart for the regulated market. It is a well developed market.

Sri K. P. GADAG.—Are unsold stocks left open without any protection ?

Sri S. NIJALINGAPPA.—I want notice. I visited the place recently and I must say things have much improved.

ಶ್ರೀ ಡಿ. ಹೆಚ್. ರುದ್ರಪ್ಪ.—ಮೊದಲನೇ ಪ್ರಶ್ನೆಗೆ ಉತ್ತರದಲ್ಲಿ ಗಮನಕ್ಕೆ ಬಂದಿಲ್ಲ ಎಂದು ಹೇಳಿದೆ. ಎರಡನೆಯ ಪ್ರಶ್ನೆಯಲ್ಲಿ ದಾವಣಗೆರೆಯ ಸಾರ್ವಜನಿಕರು ಮುಖ್ಯಮಂತ್ರಿಗಳ ಕಡೆಗೆ ಮಾಡಿಕೊಂಡ ಮನವಿಯ ಸಂಬಂಧದಲ್ಲಿ ಕೈಕೊಂಡ ಕ್ರಮಗಳೇನು ಎಂದು ಇದೆ. ಹಾಗಾದರೆ ದಾವಣಗೆರೆಯಲ್ಲಿಯ ರೆಗ್ಯುಲೇಟೆಡ್ ಮಾರ್ಕೆಟಿನಲ್ಲಿ ರೈತರು ತಿಂಗಳು ಗಟ್ಟಲೆ ಕಾಯಬೇಕಾಗುತ್ತದೆಂಬ ಸಂಗತಿಯು ಸರ್ಕಾರದವರ ಲಕ್ಷ್ಯಕ್ಕೆ ಬಂದಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಹೋದಸಲ ರೈತರು ಮನವಿಯನ್ನು ಕೊಡಲು ಬಂದಾಗ ಹೇಳಿದರು. ಎರಡು ಮೂರು ತಿಂಗಳುಗಳವರೆಗೆ ಕಾಯಬೇಕಾಗುತ್ತದೆ ಎಂದು ಹೇಳಿದ್ದಾರೆ. ಸೂಕ್ತ ಏರ್ಪಾಡು ಆಗಿದೆ. ಈಗ ತೊಂದರೆ ಇಲ್ಲ.

1 P.M.

ಶ್ರೀ ಜಿ. ದುಗ್ಗಪ್ಪ.—ಸೀಸನ್ ಟೈಮಿನಲ್ಲಿ ರೈತರಿಗೆ ತೊಂದರೆಯಾಗಿದೆ ; ಕಾರ್ಯಕ್ರಮ ತೆಗೆದುಕೊಂಡಿರುವುದು ನಿಜವಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಬಹುಶಃ ಅವರು ಪ್ರಶ್ನೆಯನ್ನು ನೋಡಿಲ್ಲ ಉತ್ತರವನ್ನೂ ನೋಡಿಲ್ಲ ಎಂದು ಕಾಣುತ್ತದೆ. ಇಲ್ಲಿರತಕ್ಕದ್ದು ಮಾಲುಗಳನ್ನು ಮಾರುವುದಕ್ಕೆ ರೈತರು ತಿಂಗಳುಗಟ್ಟಲೆ ಕಾಯಬೇಕಾಗುತ್ತದೆಯೇ ? ಎಂಬುದು. ಅದಕ್ಕೆ ಇಲ್ಲ ಎಂದು ಜವಾಬು ಕೊಟ್ಟಿದೆ. ಒಂದೆರಡು ವಾರ ತಡವಾಗುತ್ತದೆ. ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದೆ.

ಶ್ರೀ ಡಿ. ಎಚ್. ರುದ್ರಪ್ಪ.—ರೈತರಿಗೆ ಅಂಗಡಿ, ಗೋಡೌನ್ಸ್ ಸರ್ಕಾರದವರು ಕೊಡುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದೇ ಕೆಲಸದಲ್ಲಿದ್ದೇವೆ. ಜಾಗ್ರತೆ ಮಾಡಿಸಿಕೊಡುತ್ತೇವೆ.

ಶ್ರೀ ಡಿ. ಎಚ್. ರುದ್ರಪ್ಪ.—ರೈತರ ವಿಚಾರ ಕೇಳುತ್ತಾ ಇದ್ದೇನೆ.

ಅಧ್ಯಕ್ಷರು.—ರೈತರ ಪ್ರತಿನಿಧಿಗಳು ಇದ್ದಾರೆ, ವ್ಯಾಪಾರಸ್ಥರ ಪ್ರತಿನಿಧಿಗಳು ಇದ್ದಾರೆ, ಮತ್ತು ಕೆಲಸಗಾರರ ಪ್ರತಿನಿಧಿಗಳೂ ಇದ್ದಾರೆ. ರೈತರ ಪ್ರತಿನಿಧಿಯಾಗಿ ಬೇಕಾದರೆ ಪ್ರಶ್ನೆ ಕೇಳಿ.

ಶ್ರೀ ಡಿ. ಎಚ್. ರುದ್ರಪ್ಪ.—ಒಂದು ಘಂಟೆ ಜಾಸ್ತಿ ಮಾಡಿದರೆ ರೈತರಿಗೆ ತೃಪ್ತಿಯಾಗುವುದಿಲ್ಲ, ಅನ್ಯಾಯವಾಗುತ್ತಿದೆ. ಮುಂಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

Sri S. NIJALINGAPPA.—It is a representation.

ಶ್ರೀ ಎಂ. ರಾಮಪ್ಪ.—ಈಗಾಗಲೇ ದಾವಣಗೆರೆ ರೈತರ ಉಪಯೋಗಕ್ಕೋಸ್ಕರ ಒಂದು ಗೋಡೌನ್ ಇದೆ. ಅದು ರೈತರ ಸಂಘದ ವಶದಲ್ಲಿದೆ. ಅವರು ಬಾಡಿಗೆಗೆ ಕೊಟ್ಟಿದ್ದಾರೆ. ರೈತರ ಉಪಯೋಗಕ್ಕೆ ಕೊಡುತ್ತಾ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ರಾಮಪ್ಪ.—ವಿಚಾರ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ವಿಚಾರ ಮಾಡುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ.—ರೆಗ್ಯುಲೇಟೆಡ್ ಮಾರ್ಕೆಟಿಂಗ್ ಸ್ಥಾಪನೆ ಆಗುವುದಕ್ಕೆ ಮುಂಚೆ ರೆಗ್ಯುಲೇಟೆಡ್ ನಿಯಮಕ್ಕೆ ಅನುಸಾರವಾಗಿ ರೆಗ್ಯುಲೇಟೆಡ್ ಮಾರ್ಕೆಟ್ ಇದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ದಾವಣಗೆರೆಯಲ್ಲಿ ಇದೆ.

ಶ್ರೀ ಕೆ. ವಿ. ಬೈರೇಗೌಡ.—ವೇರ್ ಹೌಸ್ ಎಲ್ಲಿದೆಯೋ ಅಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಇರುವುದು ಸೂಕ್ತವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಸೂಕ್ತವೆಂದು ತಿಳಿದು ಅದನ್ನು ಏರ್ಪಾಡು ಮಾಡಲು ಪ್ರಯತ್ನ ನಡೆದಿದೆ.

ಶ್ರೀ ಡಿ. ಎಚ್. ರುದ್ರಪ್ಪ.—ರೈತ 500 ರೂಪಾಯಿ ಮಾಲನ್ನು ಕೊಟ್ಟರೆ ಶೇಕಡ 2 ರೂಪಾಯಿಗಳಂತೆ ಹತ್ತು ರೂಪಾಯಿ ದಳ್ಳಾಳಿ ತೆಗೆದು ಕೊಳ್ಳುತ್ತಾರೆ. ಹತ್ತು ರೂಪಾಯಿ ತೆಗೆದುಕೊಂಡರೂ ಆತನಿಗೆ ಅನುಕೂಲ ಮಾಡಿಕೊಡ ಬೇಡವೇ ?

ಅಧ್ಯಕ್ಷರು.—ಈ ಉಪ ಪ್ರಶ್ನೆಗೆ ನಾನು ಅವಕಾಶ ಕೊಡುವುದಿಲ್ಲ. ಪ್ರಶ್ನೆ ಇರುವುದು ಒಂದು, ತಾವು ಕೇಳುತ್ತಿರುವುದು ಮತ್ತೊಂದು.

ಶ್ರೀ ಜಿ. ದುಗ್ಗಪ್ಪ.—ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಸರ್ಕಾರದವರು ಗೋಡೌನ್ ಕಟ್ಟಿಸುತ್ತಾರೆಯೇ ?

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಇಲ್ಲಿ ರೈತರ ಸಂಘಕ್ಕೆ ಗೋಡೌನ್ ಕಟ್ಟುವುದಕ್ಕೆ ಸರ್ಕಾರದವರು ಹಣ ಒದಗಿಸಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ವಿಚಾರಿಸುತ್ತೇನೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಬ್ಯಾಂಕಿಂಗ್ ಫಿಸಿಲಿಟೀಸ್ ಯಾವ ತರಹ ಮಾಡಿಕೊಡುತ್ತೀರಿ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಬ್ಯಾಂಕಿಂಗ್ ಆಗುವ ರೀತಿಯಲ್ಲಿ ಆಗುತ್ತದೆ, ಕೆಲಸ ನಡೆಯುತ್ತದೆ.

Dr. R. NAGAN GOWDA.—May I know in the meanwhile when they are making arrangements to build godowns, whether they will be pleased to ask the Regulated marketing co-operative societies to provide both banking facilities and also godown which they possess now ?

Sri S. NIJALINGAPPA.—It is under contemplation. It is a suggestion for action.

Mr. SPEAKER.—Question time is over.

———

QUESTION FOR ANSWER ON THE DAY.

(but not taken up)

Supply of Electric Power to Puttur and *en route* Villages in South Kanara District.

Q.—192. Sri K. VENKATARAMANA GOWDA (Puttur).—

Will the Government be pleased to state :—

(*a*) whether they have proposed to take up the scheme for extension of supply of electricity from Mangalore to Puttur and surrounding villages ;

(*b*) if so, the probable date when power will be made available in Puttur ?

A.—Sri H. K. VEERANNA GOWDH (Minister for Public Works).—

(*a*) Yes.

(*b*) December 1958, subject to availability of line materials, etc.

Election to Board of Industries

Mr. SPEAKER.—I have to make an announcement. The election to the Industries Board has been postponed. I will fix the programme later on.

Member's representation

Sri V. P. DEENADAYALU NAIDU (Cubbonpet).—Sir, you were good enough to tell us some time ago that we were trying an experiment in this question hour. At the right and appropriate time when we are about to follow up any question, the procedure that we have adopted prevents us from getting our ideas completely cleared or getting full information, even though the Governmentis in a position to furnish us the best of information. If one is allowed to exhaust his questions, we will be able to get all the information and perhaps that will reduce the number of supplementaries. At the same time, we will make up for the loss of time resulting from our getting up, putting the question and sitting down. The purpose of the question Hour, if I understand it correctly, is to get the best of information. I was just watching a few members putting questions and when we were about to get the best of information, we were shut out from it because immediately the next man has been given an opportunity to put the supplementary. I only place this before you to consider or reconsider whether it would not be appropriate for us to go back on the procedure so that when one desires to have an interpellation, he may exhaust it fully. By that, we will have continuity as well as complete information about these questions.

Mr. SPEAKER.—What I am, at present, doing is, I am following the Lok Sabha practice. In Lok Sabha, in fact, on very important questions not more than five supplementaries are allowed, and on any other question, one or two supplementaries are allowed. I have gone thoroughly into the question and I find that I am allowing not less than 11 supplementaries to each question on an average. You will thus find that I have been more liberal. Suppose I allow the Hon'ble Member who tables a question to exhaust his supplementaries and then proceed to give chance to other members, then probably the number of supplementaries will increase to 20 to 25. Of course, if it is an important question, I do allow more supplementaries and an important question in this House has taken not less than 10 or 15 minutes and sometimes even half an hour. This being so, I am not in a position to accept the proposition of my friend Sri Deenadayalu Naidu. But I agree with him in this respect that I must give the person who tables a question a fair chance of putting the supplementaries. I have been doing that and if the supplementaries in the case of a person who tables the questions are about 20 or 25, it will be quite impossible for me to allow such a large number of supplementaries. After all, if the Hon'ble Members want to know exactly what is being done in the Lok Sabha, I can quote from the

ವರೂ ಹೇಳಿದ್ದಾರೆ. ಅಲ್ಲದೆ ಇದೇನೂ ಹೊಸದಲ್ಲ. ಇಂಗ್ಲೆಂಡಿನಲ್ಲಿ ಹೆರಾಲ್ಡ್ ಲಾಸ್ಕಿಯವರ ನೇತೃತ್ವದಲ್ಲಿ ಒಂದು Administrative Tribunal ಬಹಳ ಕಾಲ ಕೆಲಸ ಮಾಡಿತು. ಅಧಿಕಾರಿಗಳ ಸಂಬಳಸಾರಿಗೆ ಮತ್ತು ಇತರ ವಿಷಯಗಳನ್ನು ಈ ಟ್ರಿಬ್ಯುನಲ್ ಪರಿಶೀಲಿಸುತ್ತಿತ್ತು. ಅದೇ ರೀತಿ ಇಲ್ಲಿಯೂ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ. ಮಂತ್ರಿಗಳ ಸಂಬಳಸಾರಿಗೆಯ ವಿಷಯವಾಗಿ ನಾನು ಒಂದು ಕಟ್‌ಮೋಷನ್ ಕಳುಹಿಸಿಕೊಟ್ಟಿದ್ದೇನೆ. ಇದರಲ್ಲಿ ನನ್ನ ಉದ್ದೇಶ ವಿಷ್ಟೆ: ಅವರ ಸಂಬಳಸಾರಿಗೆಗಳಲ್ಲಿ ಸಾವಿರಾರು ರೂಪಾಯಿಗಳನ್ನು ಕಡಮೆ ಮಾಡಿದರೆ ಇದರಿಂದ ನಮ್ಮ ದೇಶದ ಖೋತಾ ತುಂಬುತ್ತದೆಂದು ನನ್ನ ಅಭಿಪ್ರಾಯವಲ್ಲ. ಆದರೆ ಇವರು ಹೀಗೆ ಮಾಡಿ ಇತರರಿಗೆ ಮಾದರಿಯಾಗಲೆಂಬ ಉದ್ದೇಶದಿಂದ ಈ ಖೋತಾ ಸೂಚನೆಯನ್ನು ಕಳುಹಿಸಿದ್ದೇನೆ. ಇನ್ನೂ ಬೇಕಾದರೆ ಇದರಿಂದ ಉಳಿತಾಯವಾಗುವ ಐದಾರು ಸಾವಿರ ರೂಪಾಯಿಗಳಲ್ಲಿ ಇನ್ನೂ ಮಂತ್ರಿಗಳ ಸಂಖ್ಯೆ ಜಾಸ್ತಿಯಾಗಲಿ, ಚಿಂತೆಯಿಲ್ಲ. ಆದರೆ ಬಾಕಿ ಅಧಿಕಾರಿಗಳ ಮೇಲೆ ಆಗುವ ಪರಿಣಾಮ ಮುಖ್ಯ. ಮಂತ್ರಿಗಳೇ ಮುಂದೆ ಬಂದು ತಮ್ಮ ಸಂಬಳಗಳನ್ನು ಕಡಮೆ ಮಾಡಿಕೊಂಡಿರುವಾಗ ನಾವೂ ಮಾಡೋಣ ಎಂಬ ಭಾವನೆ ಬರಲೆಂಬ ದೃಷ್ಟಿಯಿಂದ ಇದನ್ನು ಸೂಚಿಸಿದ್ದೇನೆ. ನಾನು ಕೇರಳದ ಉದಾಹರಣೆಯನ್ನು ಹೇಳುವುದಿಲ್ಲ. ಏಕೆಂದರೆ, ಕೈಗಾರಿಕೆ ಮಂತ್ರಿಗಳಿಗೆ ಏನೋ ಒಂದು colour complex ಇದೆಯೆಂದು ಕಾಣುತ್ತದೆ. ನಾವೇನಾದರೂ ಹೇಳಿದರೆ ಅಪಾರ್ಥ ಮಾಡಿಕೊಳ್ಳುತ್ತಾರೆ, ಅದನ್ನೇ ಕಾಂಗ್ರೆಸ್ ಪಾರ್ಟಿ ಕಡೆ ಬೇರೆಯವರು ಹೇಳಿದರೆ ಸರಿಯಾಗಿ ತಿಳಿದುಕೊಳ್ಳುತ್ತಾರೆ. ನಾವು ಒಳ್ಳೆಯ ಸಂಪ್ರದಾಯದ ವಿಷಯ ಹೇಳಿದರೂ ಅಪಾರ್ಥ ಮಾಡುತ್ತಿದ್ದಾರೆ. ಅವರಲ್ಲಿ ಇಂಥ colour complex ಇರುವಾಗ ನಾನು ಕೇರಳದ ವಿಚಾರ ಮಾತನಾಡುವುದಿಲ್ಲ; ಇಲ್ಲಿನ ಪರಿಸ್ಥಿತಿಯನ್ನು ನೋಡಿ ಹೇಳುತ್ತಿದ್ದೇನೆ.

3 P.M.

ಇನ್ನು ಒಂದೇ ಸಣ್ಣ ವಿಷಯ. ಪ್ಯಾಲೇಸ್ ಇಲ್ಯೂಮಿನೇಷನ್‌ಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡಬೇಕು, ದಸರ ಹಬ್ಬಕೆ ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕು ಎಂಬ ಸೂಚನೆಯಿದೆ. ಒಂದು ಸ್ಥಳದಲ್ಲಿ ಈ ಸೂಚನೆಯಿದ್ದರೆ ಇನ್ನೊಂದು ಕಡೆ ರಾಜ್ಯಪಾಲರ ಬಂಗಲೆ ಮೈಂಟೆನೆನ್ಸ್ ವಗೈರೆ ವಿಚಾರದ ಸೂಚನೆಯಿದೆ. ಹೀಗೆ ಎರಡು ಜಾಗಗಳಲ್ಲಿ ಅಲೋಯನ್ಸಸ್ ಕೊಡಬೇಕೆಂಬ ಸೂಚನೆಯಿರುವುದು ಸರಿಯೆ ಎಂಬುದು ಅನುಮಾನಾಸ್ಪದವಾಗಿದೆ. ಬಡ್ಜೆಟ್ ಮೆಮೊರ್‍ಯಾಂಡಂನಲ್ಲಿ 25 ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿನಲ್ಲಿ 4·19 ಲಕ್ಷ ರೂಪಾಯಿಗಳ ಖರ್ಚು ಹೆಚ್ಚಾಗಿದೆ ಎಂದು ತೋರಿಸಲ್ಪಟ್ಟಿದೆ. ಹೀಗೆ ಖರ್ಚು ಹೆಚ್ಚಾಗಿರುವಂತೆ ಎಂಟನೆಯ ಪುಟದಲ್ಲಿ ನಮೂದಾಗಿದೆ. ಬಡ್ಜೆಟ್ ಎಸ್ಟಿಮೇಟಿನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿರಲಿಲ್ಲ. ಈಗ ನಾಲ್ಕು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಫೈನಲ್ ಎಸ್ಟಿಮೇಟಿನಲ್ಲಿ ಒದಗಿಸಿದ್ದಾರೆ. ಬಡ್ಜೆಟ್ ಎಸ್ಟಿಮೇಟಿನಲ್ಲಿ ಪ್ಯಾಲೇಸ್ ಇಲ್ಯೂಮಿನೇಷನ್ ಮತ್ತು ದಸರಾ ಫೆಸ್ಟಿವಿಟೀಸ್‌ಗೆ ಅವಕಾಶಮಾಡದೆ ಅನಂತರ ಒಂದು ತೀರ್ಮಾನಮಾಡಿ ಈಗ ಫೈನಲ್ ಎಸ್ಟಿಮೇಟಿನಲ್ಲೇಕೆ ಒದಗಿಸಿದ್ದಾರೆಂಬುದನ್ನು ತಿಳಿಸಬೇಕಾಗಿದೆ. ಫೈನಾನ್ಸ್ ಎಕ್ಸ್‌ಪೈರಿ ಕಮಿಟಿಯವರು ದಸರ ಫೆಸ್ಟಿವಿಟೀಸ್ ಮೂರು ವರ್ಷಗಳಿಗೊಂದು ಸಲ ನಡೆಸಬೇಕೆಂದು ಅಭಿಪ್ರಾಯ ಪಟ್ಟಿದ್ದರೂ ಕೂಡ ಹೀಗೆ ಪ್ರತಿವರ್ಷವೂ ಹಣ ಒದಗಿಸುವುದು ಸರಿಯೇ? ಖರ್ಚು ಕಡಮೆಮಾಡುವ ಉದ್ದೇಶದಿಂದ ಇದನ್ನು ಕೈಬಿಡುವುದ ಕಾಗುವುದಿಲ್ಲವೆ ಎಂದು ಮಾನ್ಯಸದಸ್ಯರು ಹೇಳಿದ ಹಾಗೆ ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಲು).—ಸಭಾಧ್ಯಕ್ಷರೆ, ಇಂದು ಬಹಳ ಅವಶ್ಯಕವಾಗಿರುವ ಮಿತವ್ಯಯ, ಕಾರ್ಯನೀತಿ ಮತ್ತು ದಕ್ಷತೆ ಇವುಗಳ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಮಾತ್ರ ಹೇಳಲಿಚ್ಛಿಸುತ್ತೇನೆ. ಬಡ್ಜೆಟ್ ಬಹಳ ಖೋತಾ ಆಗಿರುವ ವಿಚಾರ ಎಲ್ಲರಿಗೂ ಗೊತ್ತೇಇದೆ. ಆದರೆ ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಖರ್ಚನ್ನು ಯಾವರೀತಿಯಲ್ಲಿ ಕಡಮೆ ಮಾಡಬಹುದು, ಎಷ್ಟುಮಟ್ಟಿಗೆ ಉಳಿತಾಯ ಮಾಡಬಹುದು ಎಂಬುದನ್ನು ಯೋಚನೆಮಾಡುವುದು ಬಹಳ ಮುಖ್ಯವಾದ ವಿಚಾರ. ನಮ್ಮ ಹಳೆಯ ಮೈಸೂರಿನಲ್ಲಿ ಹತ್ತು ಜಿಲ್ಲೆಗಳಿವೆ, ಅನೇಕ ಮಂದಿ ಸ್ಟೇಟ್ ಆಫೀಸರುಗಳು ನಮ್ಮ ದೇಶದಲ್ಲಿದ್ದಾರೆ. ಅವರಿಗೆ ಐ.ಎ.ಎಸ್. ಐ.ಪಿ.ಎಸ್. ಗ್ರೇಡ್ ಕೊಟ್ಟು ಸಂಬಳ ಜಾಸ್ತಿ ಮಾಡಿದ್ದಾರೆ. ಆದರೆ ಕಾರ್ಯಕ್ಷೇತ್ರ ವಿಸ್ತಾರವಾಗಿಲ್ಲ ಮತ್ತು ಅವರಿಗೆ ಜವಾಬ್ದಾರಿ ಹೆಚ್ಚಾಗಿಲ್ಲ, ಇರುವಷ್ಟೇ ಮಿತಿಯಲ್ಲಿದೆ. ಇಂಟೆಗ್ರೇಟೆಡ್, ಏರಿಯಾದಿಂದ ಬರಿದಿರುವ ಕೆಲವು ಜಿಲ್ಲೆಗಳನ್ನು ಮತ್ತು ನಮ್ಮ ನೆರೆಹೊರೆಯ ಸಂಸ್ಥಾನಗಳಲ್ಲಿರುವ ಜಿಲ್ಲೆಗಳನ್ನು ನೋಡಿ ಅವುಗಳಿಗೆ ನಮ್ಮ ಹಳೆಯ ಮೈಸೂರಿನ ಜಿಲ್ಲೆಗಳನ್ನು ಹೋಲಿಕೆ ಮಾಡಿದರೆ ಹಳೆಯ ಮೈಸೂರಿನ ಹತ್ತು ಜಿಲ್ಲೆಗಳನ್ನು ಮೂರು ಜಿಲ್ಲೆಗಳಾಗಿ ಮಾಡಬಹುದು. ಇತರ ಕಡೆ ನಮ್ಮ ಮೂರು ಜಿಲ್ಲೆಗಳಿಗೆ ಒಂದು ಜಿಲ್ಲೆಯಾಗುತ್ತದೆ. ಹಾಗೆ ಇಲ್ಲಿ ಹತ್ತು ಜಿಲ್ಲೆಗಳನ್ನು ಮೂರು ಜಿಲ್ಲೆಗಳಿಗೆ ಇಳಿಸಿದರೆ ಖರ್ಚೂಸಹ ಉಳಿಯುತ್ತದೆ, ರೆವೆನ್ಯೂ, ವಿದ್ಯಾಭ್ಯಾಸ, ಪೋಲೀಸು, ಹೆಲ್ತ್, ವ್ಯವಸಾಯ ಮೊದಲಾದುವುಗಳಿಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಲ್ಲೂ ಮಿತವ್ಯಯ ಮಾಡಬಹುದಾಗಿದೆ. ಈ ರೀತಿ ಮಾಡೋಣದರಿಂದ ಸಾರ್ವಜನಿಕರಿಗೆ ಯಾವವಿಧವಾದ ತೊಂದರೆಯೂ ಆಗುವುದಿಲ್ಲ. ಇದರಲ್ಲಿ ಮುಖ್ಯವಾಗಿರುವ ಒಂದಂಶ ಅಧಿಕಾರದ ವಿಕೇಂದ್ರೀಕರಣ. ಈಗಿರುವ ಪರಿಸ್ಥಿತಿಯಲ್ಲಿ ಅಧಿಕಾರ ಬಹಳ ಮಟ್ಟಿಗೆ ಕೇಂದ್ರೀಕೃತವಾಗಿರುವುದರಿಂದ ಒಂದೊಂದು ಆಫೀಸೂ ಸೂಪರ್ ಫ್ಲೂಯಸ್ ಆಫೀಸು ಎಂದು ಹೇಳಬಹುದು. ಆ ರೀತಿಯಾಗಿರುವುದರಿಂದ ಪ್ರಜೆಗಳಿಗೆ ತೊಂದರೆಯಾಗಿದೆ. ನಾನು ಸಲಹೆ ಮಾಡುವಹಾಗೆ ಮಾಡಿದರೆ ಪ್ರಜೆಗಳಿಗೆ ಯಾವವಿಧವಾದ ತೊಂದರೆಯೂ ಆಗುವುದಿಲ್ಲ. ಆಡಳಿತ ಅಧಿಕಾರ ವಿಕೇಂದ್ರೀಕರಣವಾಗುವುದರಿಂದ ಪ್ರಜೆಗಳಿಗೂ ಹೆಚ್ಚು ಸೌಕರ್ಯವಾಗುತ್ತದೆ. ಇದಕ್ಕಾಗಿ ಈಗಿರುವ ಮೂರು ತಾಲ್ಲೂಕುಗಳನ್ನು ಒಂದು ತಾಲ್ಲೂಕನ್ನಾಗಿ ಮಾಡಬಹುದು. ಉದಾಹರಣೆಗೆ ನಮ್ಮ ನೆರೆಹೊರೆಯ ಪ್ರಾಂತಗಳ ತಾಲ್ಲೂಕನ್ನು ನೋಡಿದರೆ ಅಲ್ಲಿ ಹೇಗಿದೆಯೆಂಬುದು ವ್ಯಕ್ತವಾಗುತ್ತದೆ. ಆ ರೀತಿ ಮಾಡುವುದರಿಂದ ರೆವೆನ್ಯೂ, ಪೋಲೀಸು ಹೀಗೆ ಎಲ್ಲಾ ಎಲಾಖೆಗಳಿಗೂ ಸಂಬಂಧವಿರುವುದರಿಂದ ಬಹಳಮಟ್ಟಿಗೆ ಖರ್ಚು ಕಡಮೆಯಾಗುತ್ತದೆ, ಆ ರೀತಿ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಎರಡನೆಯದು ಕಾರ್ಯದಕ್ಷತೆ. ಆ ವಿಚಾರದಲ್ಲಿ ಹೇಳಬೇಕಾದರೆ ಮೊದಲು ಸಿಬ್ಬಂದಿಯ ಮನಸ್ಸಿನಲ್ಲಿರುವ ಅಸಂತೃಪ್ತಿಯನ್ನು ಹೊಗಲಾಡಿಸಬೇಕಾಗಿದೆ. ರೆಕ್ರೂಟ್‌ಮೆಂಟಿನಲ್ಲಿರುವ ದೋಷವೇ ಮುಖ್ಯವಾಗಿ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ.)

ಅಸಂತೃಪ್ತಿಗೆ ಕಾರಣವಾಗಿರುವುದು. ಅನೇಕಮಂದಿ ವಿದ್ಯಾರ್ಹತೆಯುಳ್ಳವರು ಸಣ್ಣ ಸರ್ವಿಸ್ಸಿನಲ್ಲಿದ್ದಾರೆ. ಮೇಲಿನ ಹುದ್ದೆಗಳಿಗೆ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡುವುದರಿಂದ ಅನೇಕ ದಿವಸಗಳಿಂದ ಇಲಾಖೆಗಳಲ್ಲಿರುವವರಿಗೆ ಅವಕಾಶವಿಲ್ಲದೆ ಹೋಗಿ ನಿಜವಾಗಿಯೂ ಕೂಡ ಕೊರತೆಗೆ ಕಾರಣವಾಗಿದೆ. ಹೀಗೆ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಿ ಇಲಾಖೆಯಲ್ಲಿರುವ ಸರ್ವಿಸ್ ದಾರರಿಗೆ, ಅನುಭವಿಗಳಿಗೆ ಅವಕಾಶಕೊಡದಿದ್ದರೆ ಖಂಡಿತ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಎರಡನೆಯದು ಇಂಟೆಗ್ರೇಷನ್ ಆದಮೇಲೆ ಒದಗಿರುವ ಪರಿಸ್ಥಿತಿ. ಅದನ್ನು ಮಾನ್ಯ ಮಿತ್ರರನೇಕರು ಚೆನ್ನಾಗಿ ಹೇಳಿದ್ದಾರೆ. ಬೊಂಬಾಯಿ ಮತ್ತು ಇತರ ಕರ್ಣಾಟಕ ಪ್ರದೇಶಗಳಲ್ಲಿ ಸಂಬಳ ಸಾರಿಗೆ ಹೆಚ್ಚಾಗಿದೆ. ನಮ್ಮ ಹಳೆಯ ಮೈಸೂರಿನಲ್ಲಿ ಕಡಮೆಯಿದೆ, ಈ ದಿವಸ ನಮ್ಮ ದೇಶದಲ್ಲಿ ಸ್ವಲ್ಪ ಮಾರ್ಪಾಟುಮಾಡಿದ್ದರೂ ಮೊದಲು ಈ ದೇಶದಲ್ಲಿದ್ದವರಿಗೆ ಲಾಭವಾಗಿಲ್ಲ, ವಿದ್ಯಾರ್ಹತೆ ಹೊಸದಾಗಿ ಮೈಸೂರಿಗೆ ಬಂದಿರುವವರಿಗೆ ಕಡಮೆಯಿದ್ದರೂಕೂಡ ಅವರ ಸ್ಕೇಲುಗಳು ಮೊದಲಿನಿಂದ ಜಾಸ್ತಿಯಾಗಿರುವುದರಿಂದ ಅವರಿಗಿರುವಷ್ಟು ಅನಕೂಲ ಇಲ್ಲಿನವರಿಗಿಲ್ಲ, ಇದು ಕೊರತೆಗೆ ಕಾರಣವಾಗಿದೆ ಎಂದು ಹೇಳಿದ್ದಾರೆ. ಇದಕ್ಕೆ ಆದಷ್ಟು ಬೇಗ ಅವಕಾಶವಿಲ್ಲದಂತೆ ಮಾಡಬೇಕು. ಇದು ಬಹಳ ಕಷ್ಟತರವಾದ ಕೆಲಸವೆಂಬುದನ್ನು ಒಪ್ಪುತ್ತೇನೆ. ಅದರೆ ಅಸಂತೃಪ್ತಿ ನೌಕರರಲ್ಲಿ ಬಹಳವಾಗಿರಬಾರದು-ಅನೇಕ ಸಂದರ್ಭಗಳಲ್ಲಿ ಬಿ.ಎ. ಪಾಸು ಮಾಡಿರುವವರು ಕಾರಣಾಂತರದಿಂದ ಎರಡನೆಯ ದರ್ಜೆಯ ಗುಮಾಸ್ತರಾಗಿಯೇ ಬಹಳ ದಿವಸದಿಂದ ಕೆಲಸಮಾಡುತ್ತಿದ್ದಾರೆ, ಅವರಿಗೆ ಫಸ್ಟ್ ಗ್ರೇಡ್ ಸಿಕ್ಕಿಲ್ಲ. ಈ ರೀತಿ ಸೆಕ್ರೆಟೇರಿಯಟ್‌ನಲ್ಲಿರುವ ಕೊರತೆ ಸರ್ಕಾರಕ್ಕೆ ಮನವರಿಕೆಯಾಗಿರಬಹುದು. ಅದಕ್ಕೆ ಅವಕಾಶವಿಲ್ಲದಂತೆ ಮಾಡಬೇಕು.

ಆ ಮೇಲೆ ಆಫೀಸುಗಳಲ್ಲಿ ಕೆಲಸಮಾಡುವ ವಿಧಾನ. ಉದಾಹರಣೆಗೆ ಹೇಳುವುದಾದರೆ ನಮ್ಮ ಸಂಸ್ಥಾನದಲ್ಲಿ ಯಾವುದಾದರೂ ಒಂದು ಆಫೀಸಿಗೆ ಟಪಾಲು ಬಂದರೆ ಕಾಗದಗಳು ಸಂಬಂಧಪಟ್ಟ ಗುಮಾಸ್ತೆಯ ಕೈಗೆ ಸೇರಬೇಕಾದರೆ ಟಪಾಲು ಸ್ಟೇಜ್ ಐದು ದಿವಸ, ಸಂಬಂಧಪಟ್ಟವರ ಕೈಗೆ ಹೋಗಲು ಐದು ದಿವಸ ಬೇಕಾಗುತ್ತದೆ. ಈ ರೀತಿ ಒಂದು ಕಾಗದ ಸಂಬಂಧಪಟ್ಟವರ ಕೈಸೇರಬೇಕಾದರೆ ಹತ್ತು ದಿನಗಳಾದರೆ ಕಾರ್ಯ ಎಷ್ಟು ಸುಲಲಿತವಾಗಿ ಆಗುತ್ತದೆ, ಪ್ರಜೆಗಳಿಗೆಷ್ಟು ಸಂತೋಷವಾಗುತ್ತದೆ ಎಂಬುದನ್ನು ವಿಚಾರ ಮಾಡಿ ನೋಡಬೇಕು. ಅದೇ ನೆರೆ ರಾಷ್ಟ್ರಗಳಲ್ಲಿ ಯಾವುದಾದರೂ ಕಾಗದ ಬರೆದರೆ ಐದು ದಿವಸಗಳಲ್ಲಿ ಉತ್ತರ ಬಂದಿರುತ್ತದೆ. ಇಲ್ಲ ಲೋಪವೆಲ್ಲದೆಯೆಂದು ಅದನ್ನು ಸರಿಪಡಿಸಿ ಸುಲಭವಾಗಿರುವ ಮತ್ತು ಸುಲಲಿತವಾಗಿರುವ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಸೂಚಿಸುತ್ತೇನೆ.

ಅನೇಕ ಸಂದರ್ಭಗಳಲ್ಲಿ ಸಿಬ್ಬಂದಿಗೆ ಒಂದು ದೊಡ್ಡ ಕೊರತೆಯಿದೆ. ನೌಕರರು ತಾವು ಸೇವೆಸಲ್ಲಿಸುತ್ತಿರುವ ಆಫೀಸುಗಳಲ್ಲಿ ಮೇಲ್ಪಟ್ಟ ಅಧಿಕಾರಿಗಳು ಹೇಳಿದಂತೆ ನಡೆದುಕೊಳ್ಳಬೇಕು. ಅವರ ನೀತಿಗನುಸಾರವಾಗಿ ವರ್ತಿಸಬೇಕು, ತಾವು ಸ್ವತಂತ್ರಿಸಿ ತಮಗೆ ಸರಿಯೆಂದು ತೋರುವುದನ್ನು ಮಾಡುವಂತಿಲ್ಲ. ಪ್ರಜಾಪ್ರಭುತ್ವದಲ್ಲಿ ಇದೊಂದು ದೊಡ್ಡ ಲೋಪ. ತಾಬೇದಾರರು ತಮ್ಮ ಮೇಲ್ಪಟ್ಟ ಅಧಿಕಾರಿಗಳು ಮೆಚ್ಚುವಂತೆ ಕೆಲಸ ಮಾಡಬೇಕು. ಯಾರೊಬ್ಬರಿಗೂ ಅಸಮಾಧಾನವಾಗದಂತೆ ಕೆಲಸ ನಿರ್ವಹಿಸಬೇಕು. ಇಲ್ಲದಿದ್ದರೆ ವರ್ಗಾಯಿಸುತ್ತಾರೆ. ಇದು ಬಹಳ ಅನ್ಯಾಯ. ಇದಕ್ಕೆ ಅವಕಾಶವಿಲ್ಲದಂತೆ ಮಾನ್ಯ ಸಚಿವರು ತಕ್ಕವ್ಯವಸ್ಥೆ ಮಾಡಬೇಕು, ಈ ಕಡೆ ಹೆಚ್ಚು ಗಮನ ಕೊಡಬೇಕು ಎಂದು ಸೂಚನೆ ಮಾಡುತ್ತೇನೆ.

ಮಂತ್ರಿ ಮಂಡಲದಲ್ಲಿ ಒಂಬೇ ಒಂದು ವಿಷಯ ಹೇಳಬೇಕೆಂದಿದ್ದೇನೆ. ದೇಶದಲ್ಲಿ ಮಿತವ್ಯಯ ಮಾಡಬೇಕೆಂದು ನಾನಾರೀತಿಯಲ್ಲಿ ಹೇಳುತ್ತಿದ್ದೇವೆ. ಮೊನ್ನೆ ಆರ್ಥಿಕ ಮಂತ್ರಿಗಳು ಕನಿಷ್ಟ ದರ್ಜೆ ಮತ್ತು ಪರಮಾವಧಿ ದರ್ಜೆ ಸಂಬಳಗಳ ಅಂತರ 1 : 30 ದಾಮಾಷಾದಲ್ಲಿದೆಯೆಂದು ಹೇಳಿದರು. ಪ್ರಜಾಪ್ರಭುತ್ವದಲ್ಲಿ ಸಮತಾವಾದ ಸಮಾಜರಚನೆ ಮಾಡಬೇಕೆಂದಿರುವಾಗ ಇಷ್ಟು ಅಂತರವಿರುವುದು ಸೂಕ್ತವಲ್ಲ, ಸಂಬಳ ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಯಾರಿಗೂ ಇರಬಾರದೆಂದು ಹಿಂದೆಯೇ ನಿರ್ಧಾರಮಾಡಿದೆ. ಅಧಿಕಾರಿಗಳು ಯಾರೂ ಕೂಡ ಅದಕ್ಕೆ ಅಸಮಾಧಾನ ಪಡಲಾರರು. ನಮ್ಮ ಆರ್ಥಿಕಮಟ್ಟ ಹೇಗಿದೆ, ಬಡವರ ಉದ್ಧಾರವಾಗಿ ದೇಶದ ಬೆಳವಣಿಗೆಯಾಗಬೇಕು ಎಂಬುದು ಎಲ್ಲರಿಗೂ ತಿಳಿದೇಇದೆ. ಹಾಗಿರುವ ಸಮಯದಲ್ಲಿ ಆಫೀಸರುಗಳು ಈ ಸಲಹೆಯನ್ನು ಸ್ವಾಗತ ಮಾಡಿಯೇ ಮಾಡುತ್ತಾರೆ, ಇದರಲ್ಲಿ ಕೊರತೆಯಿಲ್ಲ. ಇದನ್ನು ಮಾನ್ಯ ಮಂತ್ರಿಗಳು ಯೋಚನೆಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ನನಗೂ ಸಹ ಈಗಿರುವ ಮಂತ್ರಿಗಳಲ್ಲಿ ಪ್ರೀತಿಯಿದೆ, ಗೌರವವಿದೆ, ವಿಶ್ವಾಸವಿದೆ, ಅವರು ಬಹಳ ದಕ್ಷರೆಂಬುದು ಗೊತ್ತಿದೆ.

ಈಗ ಮಂತ್ರಿಮಂಡಲದಲ್ಲಿ ಮಂತ್ರಿಗಳ ಸಂಖ್ಯೆ ಜಾಸ್ತಿ ಇದೆ. ಹನ್ನೊಂದು ಜನ ಮಂತ್ರಿಗಳ ಬದಲಾಗಿ ಐದು ಜನ ಮಂತ್ರಿಗಳಿದ್ದರೂ ನಿಜವಾಗಿ ಸರ್ಕಾರದ ಕೆಲಸವನ್ನು ಹೆಚ್ಚು ದಕ್ಷತೆಯಿಂದ ಮತ್ತು ಸಾಮರ್ಥ್ಯದಿಂದ ಮಾಡಬಹುದು. ಕೆಲವು ಮಂತ್ರಿಗಳ ಪೋರ್ಟ್‌ಫೋಲಿಯೋ ಬಹಳ ಕಡಮೆ ಇದೆ. ಐದು ಜನ ಮಾಡುವ ಕೆಲಸಕ್ಕೆ ಹನ್ನೊಂದು ಜನರೇಕೆ ? ಅವರು ಮೇಲ್ಪಂಕ್ತಿ ಹಾಕಿ ದೇಶಕ್ಕೆ ತೋರಿಸಬೇಕು. ಮಂತ್ರಿಗಳ ಸಂಖ್ಯೆಯನ್ನು ದಯಮಾಡಿ ಕಡಮೆಮಾಡಬೇಕು. ಒಬ್ಬೊಬ್ಬ ಮಂತ್ರಿಗೂ ಪೋರ್ಟ್‌ಫೋಲಿಯೋಗಳನ್ನು ಜಾಸ್ತಿ ಕೊಡಬೇಕು. ನನ್ನ ಮಿತ್ರರು ಅರಿಕೆ ಮಾಡಿಕೊಂಡಂತೆ ಮಂತ್ರಿಮಂಡಲದಲ್ಲಿ ಮೂರು-ನಾಲ್ಕು ಜಾತಿಗಳಿಗೆ ಮಾತ್ರ ಅವಕಾಶವನ್ನು ಮಾಡಿಕೊಟ್ಟಿದ್ದಾರೆ ಎಂಬುದು ನಿಜ. ಪ್ರಜಾಪ್ರಭುತ್ವದಲ್ಲಿ ಅದರಲ್ಲೂ ಗಾಂಧೀ ಯುಗದಲ್ಲಿ ಈ ರೀತಿಯಾದ ಜಾತೀಯ ಭಾವನೆಯ ಮೇಲೆ ಮಂತ್ರಿಗಳನ್ನು ನೇಮಿಸುವುದು ಉಚಿತವಲ್ಲ. ಮಂತ್ರಿ ಮಂಡಲದಲ್ಲಿ ಹರಿಜನರಿಗೆ ನಾಲ್ಕು ಸ್ಥಾನಗಳನ್ನು ಕೊಡಬೇಕೆಂದು ಹೇಳಿದರು. ಮಂತ್ರಿಗಳ ನೇಮಕದ ವಿಚಾರದಲ್ಲಿ ಈಗ ಅನುಸರಿಸುತ್ತಿರುವ ನೀತಿಯನ್ನು ಸಮರ್ಥಿಸಿ ಜಾತೀಯ ವಾದವನ್ನು ಎತ್ತಿ ಹಿಡಿದ ಹಾಗಾಯಿತು. ಆದರೆ ನಮ್ಮಲ್ಲಿ ಅನೇಕ ಮೈನಾರಿಟಿ ಪಂಗಡಗಳಿವೆ. ನಮ್ಮ ಪಂಗಡಕ್ಕೋಸ್ಕರವಾಗಿ ಯಾರಾದರೂ ಇದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲರೂ ನಮ್ಮವರೇ ಎಂಬ ಭಾವನೆ ಬರಬೇಕು. ಯಾರಲ್ಲಿ ಹೆಚ್ಚು ದಕ್ಷತೆ, ಅರ್ಹತೆ, ಇದೆಯೋ, ಅಂತಹವರನ್ನು ಮಂತ್ರಿಗಳನ್ನಾಗಿ ಮಾಡಬೇಕು. ಮಂತ್ರಿಮಂಡಲದಲ್ಲಿ ಐವರು ಮಂತ್ರಿಗಳು ಇರಬೇಕು. ಆಗ ಸರ್ಕಾರದ ಕಾರ್ಯನೀತಿ ಬಹಳ ಮಟ್ಟಿಗೆ ಉನ್ನತ ಮಟ್ಟಕ್ಕೆ ಬರುತ್ತದೆ. ಜನತೆಗೆ ಒಂದನೆಯದು ದೇವರು, ಎರಡನೆಯದು ನಾಡಿನ ಸರ್ಕಾರ. ಹೀಗಿರುವುದರಿಂದ ನಮ್ಮ ಸರ್ಕಾರದವರು ಹೆಚ್ಚಿನ ಜವಾಬ್ದಾರಿಯುಳ್ಳ ನೀತಿಯಿಂದ ಗಾಂಧೀಜಿಯು

ಉಪದೇಶಗಳನ್ನು ಅನುಸರಿಸಿ ಕರ್ತವ್ಯನಿರ್ವಹಣೆಮಾಡ ಬೇಕೆಂದು ಸಲಹೆ ಕೊಡುತ್ತೇನೆ.

Sri F. X. DENNIS PINTO (Kaup).—Mr. Speaker, I rise to support the Demand. At the same time I wish to make a few observations regarding certain items in the Budget, which will throw some light and enable the Ministry to find out how best economy could be effected in certain departments and at the same time to devise ways and means to increase efficiency in the departments of General Administration.

Coming to page 52, the expenditure is classified under four Divisions, namely, Bangalore Division, Mysore Division, Gulbarga Division and Belgaum Division. Belgaum Division consists of only four districts. If we compare the expenditure incurred on the office and establishment in these four Divisions, we find a great disparity in the pay of officers when compared with the pay of establishment. In the Bangalore Division for every three rupees spent on the subordinate staff we spend one rupee on the officer. In the Mysore Division for every two rupees spent on the subordinate staff we spend rupee one on the Officer staff; In Gulbarga it is 1·3 to 1 and in Belgaum it is : 1·5 to 1. This goes to show that either the subordinate staff is depleted or we have got more number of officers. I would like to state that the ratio of officers to subordinate staff in respect of Belgaum is, 1 : 1.5, Mysore 1 : 2, Gulbarga 1 : 1½, and Bangalore 1:3. I would like the Ministry to go into this matter and find out whether there are more officers in Belgaum. Coming to the Allowances and T.A. we find an enormous amount of Rs. 3,34,000 being spent in Belgaum as T.A., while for Bangalore it is Rs. 1,25,000, for Mysore Rs. 1,65,000 and Gulbarga Rs. 72,000. Then again if you come to page 53, General Establishment, the ratio is: Belgaum 1 : 9, Gulbarga 1 : 4, Mysore 1 : 8·5 and in Bangalore 1:12. It clearly shows that in Bangalore Division there is a lot of subordinate staff and it is better to go into this matter and see the staff is either transferred or sufficient work is given to them.

Again in page 56, under Sub-Divisional Establishments, a figure of Rs. 8,89,000 is shown under establishment for Belgaum Division and T.A. and other allowance as Rs. 6,78,900. This is a big amount when compared to other Divisions. I would like the Ministry to go into this question. For Taluk Administration the ratio is maintained in all the four Divisions. All the four Divisions stand on the same ratio both in respect of the subordinate staff and officers.

In page 57, the pay of officers for Belgaum is not given.

Now, coming to the other point of Divisional Commissioners, I would suggest—and it is suggested by many of my friends—that it is better to abolish these posts of Divisional Commissioners. This will give a saving of nearly Rs. 11·5 lakhs. I find that much of the work is being delayed and a lot of time is wasted and on account of this there is a great discontentment among the people of the State. In Madras there has been the system of Board of Revenue. They had arranged to have Divisional Commissioners but after a great thought they changed the idea and they are having the Board of Revenue. That was the case also in the old Mysore State. I do not know why there was a change here. I request the Ministry to go into this question.

Regarding the Hospitality Organisation, a sum of Rs. 6,32,900 is provided. I would like the Ministry to bring down this figure.

Again in page 44, under Elections, in the Budget for the last five months a sum of Rs.31,28,000 has been shown. But again for 1957-58 a sum of Rs.14,07,700 is shown. I do not know why they have provided this amount as the elections have been over. I would like to have a clarification on this point.

Sir, under Civil Secretariat the Budget demand for the year 1957-58 is Rs. 59,25,400. If we analyse the figure, the pay of establishment is: 20,50,400, pay of Officers 6,21,700, T.A. etc 8,64,300 Total, 35,36,400. Apart from the Department of Information and Publicity, a sum of Rs. 35,36,400 is provided for pay of Establishment of officers and T.A. I am unable to find out whether we get

(SRI F. X. DENNIS PINTO)

enough return for this large sum spent on the Civil Secretariat. I am told that many files are not attended to; grievances are coming from nook and corner of the State that cases are not being attended to. In fact if one were to come from the District to the capital his work is done immediately and for poor people who cannot incur expenses it is not possible to get their grievances redressed. Therefore, I would like to give a tip to the Ministry that the Ministers should spare one or two hours while they are on tour to look to the needs of the people and to dispose off the files. If this is done, I am sure their hardship will be mitigated to a certain extent. I would like to make another suggestion. The Government should appoint Economic Units in each District to find out how best we can effect economy specially on the side of establishment. We should find out whether there is enough work for the staff and try to co-ordinate the work of the staff. Of course I do realise the difficulties of the Ministry because five diffierent regions have been integrated and they are trying their best to evolve uniform pattern of laws and system. We should give them some time to change the system.

The Hon'ble the Finance Minister has stressed in his speech that there is every necessity to have economy in the public expenditure and I hope that as soon as consolidation and integration is completed the Chief Minister and the Finance Minister will go into every detail in cutting down the expenditure.

Coming to the elections, there have, been certain remarks by the Opposition that our officers have interfered or have helped the Congress Party. I should say it is the reverse of it. I have been elected from my constituency about 40 miles away from the home town. The Officers belonging to the sect of the candidate opposing me actually worked against the Congress. It is a matter for great pride that in a constituency which consists of 95 per cent Hindus and only about five per cent Christians, the public had full faith in the Congress and a Christian, one belonging to a minority, has been elected by an overwhelming majority in the whole district in spite of the overwhelming population of the Hindus in that constituency. I may point out in this connection that many of the officers worked against the Congress. Therefore I do not find any reason for the Opposition to say that the officers actually worked for the Congress.

Regarding the Inter-State Seniority List, a provisional list has been prepared and I would appeal to the Ministry to see that in the matter of promotions no other consideration comes in and that promotions are made as per the Inter-State Seniority list prepared by the Government.

Regarding non-gazetted officers from South Kanara, there has been a memorandum presented to the Chief Minister some months back. I would appeal to the Chief Minister to go into the grievances because, just as the Home Minister said if pies are taken care of, rupees will take care of themselves; if we have got a contented staff the state will take care of itself. It is the non-gazetted officers and the police constabulary that are very poorly paid. We have to see that their emoluments are increased and they are given enough emoluments and made a contented lot. Thereby we can expect a lot of co-operation. In fact, as we know, the Centre has been contemplating to improve the lot of the postal and railway staff. They now and then threaten with strike and the Central Government give in. They have been pampered. If they had struck work for one day in the British days we could have got Swaraj 20 years ago. We now find now and then demands from the members of this association or that union of the Central Government staff. But the non-gazetted officers are very peaceful and they only represent their grievances to the Ministers. I would like the Chief Minister to go into this matter.

With these few words I resume my seat.

SRI H. C. LINGA REDDY (Malur).—Mr. Speaker, I rise to support the two Demands under discussion. While so

doing, I wish to make a few observations.

First of all I refer to the Upper House. It has been time and again urged on the floor of this House that there is no necessity for the Upper House in the State. We hear from all sides that there should be economy. We also hear of voluntary cuts in the salaries of Officers, Ministers and Governors. Under these circumstances, I submit that there is absolutely no necessity for an Upper House in the State. It is a superfluity; it is an ornament and a white elephant as it were inasmuch as the Upper House does not serve any definite purpose. It is only a delaying body. And after all it is this House . . . .

Sri C. J. MUCKANNAPPA (Gubbi).—On a point of order, Sir. The other day when it was suggested that the Public Service Commission is a white elephant, the Hon'ble Minister for Home requested the Chair to have those words expunged. My friend is now making use of those words "white elephant." I request the Chair to have those words expunged.

Mr. DEPUTY SPEAKER.—The Hon'ble Member does not say that when a request was made by the Home Minister, the Speaker ordered the expunging of the words. I do not think it has been done. No ruling has been given so far.

Sri H. C. LINGA REDDY.—Therefore I submit that the Gevernment may do away with the Upper House and save a good deal of money for the State.

Next about taluk administration. In the taluks we do not have the Advisory Committees we once had. The Government have posted Amildars some of whom are raw recruits. I think the last batch of Amildars posted to the various taluks does not know the work at all. Many of them are under the guidance of clerks. Except the revenue collections in the several taluks, no other developmental activity is attended to at all. Government of course contemplate the setting up of a State Advisory Committee and Taluk Advisory Committees for planning and development and for that they have set apart about Rs. 50,000. I request the Government to set up these Planning Advisory Boards very early in the taluks and at the same time I would like to make a suggestion that District Advisory Committes also may be devised so that the plans of the several taluks may be co-ordinated at the district levels and the work may be attended to. In the taluks, as I submitted, except in the N.E.S. taluks in the other taluks no developmental activity is being carried on at present for one reason or the other. No funds are made available by the Government and at times the funds made available will not reach the taluks in time. For example, I remember that some amount was set apart about a year ago for communications and by the time it was communicated to the districts and the taluks, rainy season was over and the year completed and the funds lapsed.

There is a remark made by several friends on the floor of this House that there is a good deal of delay even here at the Secretariat level. We pass the Budget and by the time the provision is made available to the districts and the several taluks it will be about three or four months, sometimes six months. This year we are meeting in the months of June and July and it will be all the more late. Therefore I request the Government, as soon as we pass the Budget, to provide funds very early to the districts and taluks so that the developmental works may be taken up immediately and the funds not allowed to lapse at all.

With these few words I support the Demands.

3-30 P.M.

ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, 13 ಮತ್ತು 14ನೆಯ ಡಿಮ್ಯಾಂಡಿನ ಮೇಲೆ, ಸಾಮಾನ್ಯ ಆಡಳಿತದ ಸಂಬಂಧವಾಗಿ ಮಾತನಾಡುತ್ತ ಅನೇಕ ಮಾನ್ಯ ಸದಸ್ಯರು ಆಡಳಿತ ವೆಚ್ಚವನ್ನು ಕಡಮೆ ಮಾಡಬೇಕೆಂದು ಸಲಹೆಮಾಡಿದ್ದಾರೆ. ಅದನ್ನು ಯಾವರೀತಿ ಕಡಮೆ ಮಾಡಬೇಕೆಂಬ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟರೆ ನಾವು ವಿರೋಧಪಕ್ಷದ ಜನರಾಗಿ ತಮ್ಮನ್ನು ಟೀಕಿಸುತ್ತಾರೆನ್ನುವುದು ವಾಡಿಕೆಯಾಗಿದೆ. ಅದಕ್ಕೆ ಬದಲು, ಸರ್ಕಾರದವರು ರಾಷ್ಟ್ರ ನಿರ್ಮಾಣಕಾರ್ಯಕ್ಕಾಗಿ ದಿನಚರಿ ವಸ್ತುಗಳಮೇಲೆ ಹಾಕಿರುವ ಸುಂಕವನ್ನಾದರೂ ಕೊಟ್ಟು ಜನರು ನೆರವಾಗಬೇಕು ಎಂದು ಪ್ರಚಾರ ಮಾಡುತ್ತಿರುವಾಗ, ತಾವು ಮೊದಲು ತಮ್ಮ ಆಡಳಿತ ವೆಚ್ಚವನ್ನು ಕಡಮೆಮಾಡಿಕೊಂಡು ದೇಶಕ್ಕೆ ಮಾರ್ಗ

(ಶ್ರೀ ಬಿ. ಎಸ್. ಶಂಕರಪ್ಪ.)

ದರ್ಶನ ಮಾಡುವುದು ನ್ಯಾಯ. ಹಾಗಿಲ್ಲದೆ, ಆಡಳಿತ ದಲ್ಲಿ ದಿನದಿನಕ್ಕೆ ವೆಚ್ಚವನ್ನು ಹೆಚ್ಚಿಸುತ್ತಾ ಆಡಳಿತ ದಲ್ಲಿ ಬಿಗಿ ತೋರದೆ ಜನರು ಏನು ಅಪೇಕ್ಷೆ ಮಾಡು ತ್ತಿದ್ದಾರೋ ಅದನ್ನು ಸಂಪೂರ್ಣಗೊಳಿಸುವುದಕ್ಕೆ ಸಾಧ್ಯವಿಲ್ಲದ ಸ್ಥಿತಿಯಲ್ಲಿರುವುದನ್ನು ನೋಡಿ ನನಗೆ ವ್ಯಸನವಾಗುತ್ತದೆ. ನಿದರ್ಶನವಾಗಿ ಹೇಳುವುದಾದರೆ, ಈ ಹೊತ್ತು ಸೆಕ್ರೆಟೇರಿಯಟ್ಟಿನಲ್ಲಿ, ಕೆಲವು ಮುನಿಸಿ ಪಾಲಟಿಗಳ ಮತ್ತು ಕೆಲವು ಜಿಲ್ಲಾ ಬೋರ್ಡುಗಳ ನಾನ್‌ಗೆಜೆಟೆಡ್ ನೌಕರರ ಬಾಬತು ಕೊಡಬೇಕಾದ incrementಗಳು ಮತ್ತು confirmationಗಳು 1948ರಿಂದ ಇಲ್ಲಿಯವರೆಗೂ ಫೈಸಲಾಗದೆ ಉಳಿದಿವೆ. ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಎಸ್ಟಿಮೇಟುಗಳು ಬಂದು ಎಂಟು ಒಂಭತ್ತು ತಿಂಗಳುಗಳಾದರೂ ಫೈಸಲಾಗದೇ ಕೊಳೆಯುತ್ತಿರುವ ನಿದರ್ಶನಗಳು ಎಷ್ಟಿಲ್ಲ ! ಉದಾರಣೆಗೆ ಹೊಸದುರ್ಗ ಮುನಿಸಿ ಪಾಲಟಿಗೆ ಸಂಬಂಧಪಟ್ಟ ಒಂದು ಎಸ್ಟಿಮೇಟು ಎಲ್ಲಾ ತಯಾರಾಗಿ ಒಪ್ಪಿಗೆಯಾಗಿದ್ದರೂ, ಕೊನೆಯದಾಗಿ administrative sanction ಗಾಗಿ ಸರ್ಕಾರಕ್ಕೆ ಕಳುಹಿಸಿ ಎಷ್ಟೋ ದಿವಸಗಳಾದರೂ ಸ್ಯಾಂಕ್ಷನ್ ಆಗಿಲ್ಲ. ದುಡ್ಡು ಕೊಡುವವರು ಮುನಿಸಿಪಾಲಟಿ ಯವರು, ಕೆಲಸ ಮಾಡಿಸುವವರು ಮುನಿಸಿಪಾಲಟಿ ಯವರು, ಅಂಥದರಲ್ಲಿ administrative sanction ಕೊಡುವುದಕ್ಕೆ ಇಷ್ಟು ನಿಧಾನವಾದಮೇಲೆ ಏನುಮಾಡುವುದು ? ಹಾಗೆಯೇ ಸಾರ್ವಜನಿಕರಿಗೆ ಸಂಬಂಧಪಟ್ಟ ಒಂದು ಫೈಲು ಎಷ್ಟು ದಿವಸಗಳಾದರೂ ಡಿವಿಜನಲ್ ಕಮೀಷನರ ಆಫೀಸಿನಿಂದ ಬಂದದು ಎಲ್ಲಿದೆಯೋ ಪತ್ತೆಯಿಲ್ಲ. ಸೆಕ್ರೆಟೇರಿಯಟ್ಟಿನಲ್ಲಿ ಕೇಳಿ ದರೆ ಇಲ್ಲವೆಂದು ಹೇಳುತ್ತಾರೆ, ಡಿವಿಜನಲ್ ಕಮೀಷ ನರ್ ಆಫೀಸಿನಲ್ಲಿ ನೋಡಿದರೆ ಅಲ್ಲಿಲ್ಲ.

ಸರ್ಕಾರ ಸಾರ್ವಜನಿಕರ ಹಣವನ್ನು ಎಷ್ಟುಮಟ್ಟಿಗೆ ದುಂದು ವೆಚ್ಚಮಾಡುತ್ತಿದೆ ಎಂಬುದನ್ನು ಹೇಳುತ್ತೇನೆ. ಆಡಳಿತ ನಡೆಸತಕ್ಕ ಮಂತ್ರಿಮಂಡಲದಲ್ಲಿ ದಕ್ಷರೂ, ಜನರ ಕಷ್ಟಸುಖಗಳನ್ನು ಅನುಭವಿಸಿದವರೂ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಅವರಿಗಿರುವ ಕಷ್ಟ ವೆಂದರೆ, ಅವರ ಪಕ್ಷದಲ್ಲಿ ಶಿಸ್ತು, ಒಗ್ಗಟ್ಟು ಇಲ್ಲ. ಒಮ್ಮೆ ಆಚಾರ್ಯ ಕೃಪಲಾನಿಯವರು ಹೇಳಿದ್ದಾರೆ: ಶಿಸ್ತು ಮತ್ತು ಒಗ್ಗಟ್ಟಿಲ್ಲದೆ ಇದ್ದರೆ, ಪಕ್ಷದ ಜೊತೆಗೆ ನಾಯಕತ್ವ ಮತ್ತು ಹಣ ಪೋಲಾಗುತ್ತದೆಯೆಂದು ಪಾರ್ಲಿಮೆಂಟರಿ Proceedings ನಲ್ಲಿರುವುದನ್ನು ನಾನು ಹೇಳುತ್ತೇನೆ. ಈಗ ಇಲ್ಲಿನ ಆಡಳಿತಪಕ್ಷ ದಲ್ಲಿಯೂ ಅದೇರೀತಿ ಶಿಸ್ತು ಮತ್ತು ಒಗ್ಗಟ್ಟಿನ ಅಭಾವ ವಾಗಿ ಬಿಕ್ಕಟ್ಟು ತಲೆದೋರುತ್ತಿದೆ. ಇದರಿಂದಾಗಿಯೇ ಇಂದು ಈಗಿರುವ 11 ಮಂತ್ರಿಗಳು ಮತ್ತು ಡೆಪ್ಯುಟಿ ಮಂತ್ರಿಗಳ ಜೊತೆಗೆ ಇನ್ನೂ ನಾಲ್ಕು ಡೆಪ್ಯುಟಿ ಮಂತ್ರಿ ಗಳನ್ನು ತೆಗೆದುಕೊಳ್ಳುವುದಾಗಿ ತಿಳಿಯುತ್ತದೆ. ಹಾಗಾಗುವುದಾದರೆ, ನಿಮ್ಮ ಪಾರ್ಟಿ ಜನರ ಅಧಿಕಾರ ಲಾಲಸೆಯನ್ನು ಪೂರೈಸಬೇಕೆಂದೆಣಿಸಿ ಸಾರ್ವಜನಿಕ ರಿಂದ ಎತ್ತಿದ ಹಣವನ್ನು ದುರ್ವ್ಯಯ ಮಾಡಬೇಕೆಂದು ಬಯಸಿದ್ದೀರಿ. ಈರೀತಿ ಮಂತ್ರಿಮಂಡಲವನ್ನು ವಿಸ್ತರಣೆ ಮಾಡುವುದಾದರೆ, ನಿಮ್ಮ ಪಕ್ಷದ ಅನಾಯಕತ್ವವನ್ನು ಸರಿಪಡಿಸುವುದಕ್ಕೆ ರಾಷ್ಟ್ರದ ಹಣವನ್ನು ವಿನಿಯೋಗ ಮಾಡುವುದಾದರೆ, ಅದು ಸರ್ಕಾರದ ಹಣದ ದುರುಪ ಯೋಗವೇ ವಿನಾ ಬೇರೆಯಲ್ಲ. ಇಂಥ ದುರುಪಯೋಗ ಮಾಡುವುದಕ್ಕಿಂತ, ಸರ್ಕಾರದ ಆಡಳಿತವನ್ನು ಬೇರೆ ಯವರಿಗೆ ವಹಿಸುವುದು ಪ್ರಜಾಪ್ರಭುತ್ವ ನೀತಿ.

ಇದಕ್ಕಿಂತ ಮಿಗಿಲಾಗಿ ಅತಿಥಿ ಅಭ್ಯಾಗತರಿಗೆ ಸತ್ಕಾರ ಕೊಡುವುದಕ್ಕೆ 2,78,000 ಚಿಲ್ಲರೆಯಷ್ಟು ಹಣವನ್ನು ಬಡ್ಜೆಟ್ಟಿನಲ್ಲಿ ತೋರಿಸಿದ್ದೀರಿ. ಜನರು ನಿಮ್ಮನ್ನು ಆರಿಸಿ ಇಲ್ಲಿಗೆ ಕಳುಹಿಸಿದ್ದು ಅತಿಥಿ ಅಭ್ಯಾಗ ತರಿಗಾಗಿ ಹೀಗೆ ಹಣವನ್ನು ಖರ್ಚುಮಾಡುವುದಕ್ಕಲ್ಲ. ಹಳ್ಳಿಗಾಡಿನವರಿಗೆ ಊಟಮಾಡುವುದಕ್ಕೆ ಅನ್ನವಿಲ್ಲ. ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸ್ಕೂಲುಗಳಿಲ್ಲ. ಅವರು ಕಟ್ಟಿರತಕ್ಕ ಈ ಸರ್ಕಾರ ಈಗ ಅವರನ್ನೇ ಅಲಕ್ಷ್ಯಕ್ಕೀಡುಮಾಡಿ, ಇಂಗ್ಲೀಷರು ಹಾಕುತ್ತಿದ್ದ ಅಂಕಿಗಳನ್ನೇ ಭರ್ತಿಮಾಡಿಕೊಂಡು ಹೋಗುತ್ತಿದೆ. ಎರಡುಲಕ್ಷದ ಎಪ್ಪತ್ತೆಂಟು ಸಾವಿರ ರೂಪಾಯಿಗಳನ್ನು ಬರೀ ಗೆಸ್ಟ್ ಹೌಸ್‌ಗಳಿಗಾಗಿ ಖರ್ಚುಮಾಡುತ್ತಿದ್ದೀ ರಲ್ಲಾ! ನಾನೊಂದು ಗೆಸ್ಟ್‌ಹೌಸ್ ನೋಡಿದೆ. ಅಲ್ಲಿ 39 ಫ್ಯಾನ್‌ಗಳಿದ್ದುವು. ಜೂನ್ ತಿಂಗಳ ಶೀತಕಾಲ ದಲ್ಲಿಯೂ ಆ ಫ್ಯಾನ್‌ಗಳು ಕೆಲಸಮಾಡುತ್ತಿದ್ದುವು. ತಿಂಗ ಳೊಂದಕ್ಕೆ 30 ರೂಪಾಯ ಬಾಡಿಗೆಕೊಟ್ಟು ಇದನ್ನು ಏರ್ಪಡಿಸಿದ್ದರು. ಹೀಗೆ ರೈತರ ಹಣ ಪೋಲಾಗು ತ್ತಿದೆಯೆಂದು ಹೇಳಿದರೆ ತಪ್ಪಿಲ್ಲ. ಇಂಥವನ್ನೆಲ್ಲಾ ನೋಡಿ ಸರ್ಕಾರದವರು ತಮ್ಮ ಆಡಳಿತ ವೆಚ್ಚವನ್ನು ಕಡಮೆ ಮಾಡಿಕೊಳ್ಳಲು ಮೊದಲು ಕಲಿಯಬೇಕೆಂದು ಹೇಳುತ್ತೇನೆ.

ಆಮೇಲೆ, ಬಡ್ಜೆಟ್ಟಿನ "25 General Administration. B. Parliament. C. Elections" ಭಾಗವನ್ನು ನೋಡಿ. ಮರಾಮತ್ತು ಇಲಾಖಾ ಮಂತ್ರಿಗಳಾದ ಶ್ರೀ ವೀರಣ್ಣಗೌಡರು ಬಡ್ಜೆಟ್ಟಿನ ಮೇಲೆ ಮಾತನಾಡುವಾಗ ಚುನಾವಣೆಗಳ ಸಂದರ್ಭದಲ್ಲಿ ಯಾರಾದರೂ ಮಂತ್ರಿಗಳು ಸರ್ಕಾರದವರು ಕೊಂಡಂಥ ವಾಹನಗಳನ್ನು ಉಪಯೋಗಿಸಿದ್ದಾರೆಂದು ರುಜುವಾತು ಮಾಡುವುದಾದರೆ, ಆ ಮಂತ್ರಿಗಳು ತಮ್ಮ ಮೆಂಬರು ತನವನ್ನೇ ಅಲ್ಲದೆ ಮಂತ್ರಿತನವನ್ನೂ ಕಳೆದುಕೊಳ್ಳುತ್ತಾರೆ, ಆದ್ದರಿಂದ ವಿಷಯದಲ್ಲಿ Legal ಆಗಿ ಕೋರ್ಟಿಗೆ ಹೋಗಬೇಕೆಂದು ತಿಳಿಸಿದರು. A. General Admnistration C. Ministers ಎಂಬ ಬಡ್ಜೆಟ್ ಭಾಗದಲ್ಲಿ ಮೋಟಾರ್ ಕಾರ್ ಮತ್ತು ಕಾರಿಯೇಜ್‌ಗಳನ್ನು ಕೊಳ್ಳುವುದಕ್ಕೆಂದು 1,07,000 ರೂಪಾಯಿಗಳನ್ನು provide ಮಾಡಿಕೊಂಡು, ಈ ಹಣದಿಂದ ಕೊಂಡಂಥ ಸರ್ಕಾರದ ಕಾರುಗಳನ್ನು ಹೊಸದುರ್ಗ ತಾಲ್ಲೂಕಿನಲ್ಲಿ ಹೋದ ಚುನಾವಣೆಯಲ್ಲಿ ಆಗಿದ್ದ ಮಂತ್ರಿಗಳು ನನ್ನಂಥ ಉಮೇದುವಾರನಿದ್ದೂ ಉಪಯೋಗಿಸಿದ್ದಾರೆ. ಇದು ಸರ್ಕಾರದ ಹಣದ ದುರುಪಯೋಗವಲ್ಲವೇ? ಈರೀತಿ ಜನರಿಂದ ಎತ್ತಿದಂಥ ಕಂದಾಯದ ಹಣವನ್ನು ತಮ್ಮ ಪಕ್ಷದ ಅಭ್ಯರ್ಥಿಗಳ ಉಳಿವಿಗಾಗಿ ಅಭ್ಯುದಯಕ್ಕಾಗಿ ಉಪಯೋಗಿಸುವುದು ತಪ್ಪು, ಈ ಬಗ್ಗೆ ನಾನು ಈಗಾಗಲೇ ನಮ್ಮ ಸಂಸ್ಥಾನದ ಎಲೆಕ್ಷನ್ ಕಮೀಷನ ರಿಗೂ ಡೆಲ್ಲಿ ಎಲೆಕ್ಷನ್ ಕಮೀಷನರಿಗೂ ದೂರುಕೊಟ್ಟಿ ದ್ದೇನೆ. ಆ ಬಗ್ಗೆ ಇನ್ನೂ ಪತ್ರವ್ಯವಹಾರಗಳು ನಡೆಯು ತ್ತಿವೆ, ಆದ್ದರಿಂದ ನಾನು ಕೇಳಿಕೊಳ್ಳುವುದು ಅದಷ್ಟು ಮಟ್ಟಿಗೆ ಖರ್ಚು ಕಡಮೆಮಾಡುವುದನ್ನು ನೀವು ಕಲಿತು ಕೊಳ್ಳಬೇಕು, ಮತ್ತು ಸರ್ಕಾರದ ಹಣ ಈರೀತಿ ಪಕ್ಷದ ಏಳಿಗೆಗಾಗಿ ಖರ್ಚಾಗುತ್ತಿದೆಯೆಂಬ ಭಾವನೆಯನ್ನು ಹೋಗಲಾಡಿಸಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ನಮ್ಮ ಶ್ರೀಮನ್ಮಹಾರಾಜರವರು ಈಗ ಗವರ್ನರ್ ಆಗಿರುವವರು ದೇಶದ ಖರ್ಚು ವೆಚ್ಚ ಗಳನ್ನೂ, ಸರ್ಕಾರದ ಕಷ್ಟವನ್ನೂ ಮನಗಂಡು ತಮಗೆ ಸಲ್ಲುತ್ತಿದ್ದ ಮೂರು ಲಕ್ಷದ 40 ಸಾವಿರ ರೂಪಾಯಿ ಗಳನ್ನು ದೇಶಕ್ಕಾಗಿ ಬಿಟ್ಟುಕೊಟ್ಟಿದ್ದಾರೆ. ಈ

ಸಂದರ್ಭದಲ್ಲಿ ನಾವು ಅವರನ್ನು ಬಹಳವಾಗಿ ವಂದಿಸಬೇಕು. ಹೀಗೆ ಸರ್ಕಾರ ಖೋತಾ ಬಡ್ಜೆಟ್ಟಿನಲ್ಲಿ ಒದ್ದಾಡುತ್ತಿರುವಾಗ ಶ್ರೀಮನ್ಮಹಾರಾಜರವರು ದಾನರೂಪವಾಗಿ ಬಿಟ್ಟಿರುವಂಥ ಸ್ವತ್ತನ್ನು ಹಳ್ಳಿಗಾಡಿನಕಡೆ ಸ್ಕೂಲುಗಳನ್ನೇರ್ಪಡಿಸಲು ವಿನಿಯೋಗಿಸಿ. ಈ ಹಳ್ಳಿಗಳಲ್ಲಿ ಹುಡುಗರು ಸ್ಕೂಲಿಗೆ ಹೋಗಬೇಕೆಂದರೆ ಎರಡು ಮೂರು ಮೈಲಿ ಹೋಗಬೇಕು. ಅಂಥವರು ಸ್ಕೂಲು ಬೇಕೆಂದರೆ, ಒಂದು ಕೊಠಡಿಗೆ ಅರ್ಧಭಾಗದ 750 ರೂಪಾಯಿಗಳನ್ನುಕೊಟ್ಟರೆ ಇನ್ನರ್ಧ 750 ರೂಪಾಯಿಗಳನ್ನು ಸರ್ಕಾರದವರು ಕೊಡುತ್ತಾರೆಂದು ಹೇಳುತ್ತೀರಿ. ಆದ್ದರಿಂದ ಈಗ ಐದು ವರ್ಷಗಳಲ್ಲಿ ದಾನರೂಪದಲ್ಲಿ ಬಂದಂಥ ಈ ಹಣವನ್ನು ಇಂಥ ಹಳ್ಳಿಗಳ ಮಕ್ಕಳಿಗೆ ಪ್ರೈಮರಿ ಪಾಠಶಾಲೆಗಳನ್ನು ಕಟ್ಟಿಸಿಕೊಟ್ಟು, ಆ ಪುಣ್ಯಕ್ಕೆ ಭಾಗಿಗಳಾಗಿ, ಇದರಿಂದ ಶ್ರೀಮನ್ಮಹಾರಾಜರಿಗೆ ಕೀರ್ತಿ ತನ್ನಿ ಎಂದು ಸಲಹೆ ಮಾಡಿ, ಅಧ್ಯಕ್ಷರಿಗೂ ವಂದನೆಗಳನ್ನರ್ಪಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಶಾಖೆಯ ಮಂತ್ರಿಗಳು).—ಅವರು ಬಿಟ್ಟುಕೊಟ್ಟಿರುವ ಹಣ ಕೇಂದ್ರ ಸರ್ಕಾರದ ಹಣ; ಈ ಸರ್ಕಾರದ್ದಲ್ಲ.

*ಶ್ರೀ ಎಸ್. ಮುನಿರಾಜು (ಚಿಕ್ಕಬಳ್ಳಾಪುರ).—ಅಧ್ಯಕ್ಷರೇ, ಸಾಮಾನ್ಯಾಡಳಿತದ ವಿಷಯದಲ್ಲಿ ಸರ್ಕಾರದವರು ಸೂಚಿಸಿರುವ ಡಿಮ್ಯಾಂಡನ್ನು ಸಮರ್ಥಿಸುತ್ತಾ ನಾಲ್ಕಾರು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಮಾನ್ಯ ಸದಸ್ಯರನೇಕರು ಕಟುವಾದ ಟೀಕೆಗಳನ್ನು ಮಾಡಿ ಯಾವ ರೀತಿ ಅನಾಯಕತ್ವ ನಡೆಯುತ್ತಿದೆಯೆಂದು ಬಹಳ ಉತ್ಪ್ರೇಕ್ಷೆಯಿಂದ ಹೇಳಿದ್ದಾರೆ. ಈಗತಾನೆ ಮಾತನಾಡಿದ ಶ್ರೀ ಶಂಕರಪ್ಪನವರೂ ಸಹ ಸರ್ಕಾರದವರು ತಮ್ಮ ಅತಿಥಿ ಸತ್ಕಾರಗಳಿಂದ ದುಂದುವೆಚ್ಚ ಮಾಡುತ್ತಿರುವುದನ್ನು ಸೂಚಿಸಿ ಅದನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆ.

ಸರ್ಕಾರದವರು ಆರು ಲಕ್ಷದ 36 ಸಾವಿರ ರೂಪಾಯಿಗಳನ್ನು ಅತಿಥಿ ಸತ್ಕಾರಗಳಿಗಾಗಿ ಸೂಚಿಸಿದ್ದಾರೆ. ಇದನ್ನು ಕಡಮೆಮಾಡುವುದು ಸೂಕ್ತವೂ ಅಹುದು, ಆದರೆ ಅವರು ಇದನ್ನು ಕಡಮೆಮಾಡಿಕೊಂಡು ಹಾಗೆ ಉಳಿಸಿದ ಹಣದಿಂದ ಸ್ಕೂಲುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಹೇಳಿದ್ದಾರೆ. ಸರ್ಕಾರದವರು 1947ನೆಯ ಇಸವಿಯಲ್ಲಿ ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಪ್ರೈಮರಿ ವಿದ್ಯಾಶಾಲೆ, ಮಾಧ್ಯಮಿಕ ಶಾಲೆಗಳನ್ನೂ ಹಾಗೂ ಪ್ರೌಢ ಮತ್ತು ಕಾಲೇಜು ವಿದ್ಯಾಲಯಗಳನ್ನೂ ಏರ್ಪಡಿಸಿದ್ದಾರೆಂಬುದರ ಕಡೆಗೆ ಮಾನ್ಯ ಸದಸ್ಯರುಗಳು ಗಮನಕೊಡಬೇಕೆಂದು ಹೇಳುತ್ತೇನೆ. ಹೀಗೆ ಸುಮಾರು ಒಂದಕ್ಕೆ ಮೂರರಷ್ಟು ಪ್ರಾಥಮಿಕ ಶಾಲೆಗಳನ್ನು ಜಾಸ್ತಿ ಮಾಡಿದ್ದಾರೆ. ಅನೇಕ ಇಂಟರ್ ಕಾಲೇಜುಗಳನ್ನು ಫಸ್ಟ್‌ಗ್ರೇಡ್ ಕಾಲೇಜುಗಳನ್ನಾಗಿ ಪರಿವರ್ತನೆ ಮಾಡಿದ್ದಾರೆ. ನಮ್ಮ ದೇಶದ ಆದಾಯವೆಚ್ಚಕ್ಕೆ ಅನುಗುಣವಾಗಿ ದೇಶದಲ್ಲಿ ಜನಾಭ್ಯುದಯದ ಮತ್ತು ಸಂಪದಭಿವೃದ್ಧಿಯ ಕಾರ್ಯಗಳಿಗೋಸ್ಕರವಾಗಿ ದೇಶದಲ್ಲಿ ಅನೇಕ ಖರ್ಚುಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಈಗ ಸರ್ಕಾರದವರು ಅನುಸರಿಸುತ್ತಿರುವ ಮಿತವ್ಯಯದ ಜೊತೆಗೆ ಸಾಧ್ಯವಾದರೆ ಮತ್ತಷ್ಟು ಮಿತವ್ಯಯ ಮಾಡಬೇಕಾದದ್ದು ಅತ್ಯವಶ್ಯಕ. ಈಗ ನಾನು ಈ ಎಲ್ಲ ವಿಚಾರಗಳ ಬಗ್ಗೆ ಕೆಲವು ರಚನಾತ್ಮಕ ಸಲಹೆಗಳನ್ನು ನೀಡಬೇಕೆಂದಿರುತ್ತೇನೆ. ದೇಶದಲ್ಲಿ ಮುಖ್ಯವಾಗಿ ಈ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವಾಗ ರೆವಿನ್ಯೂ ಇಲಾಖೆ ಬಹಳ ಪ್ರಾಮುಖ್ಯವಾದದ್ದು; ಎರಡನೆಯದು ಪೋಲೀಸ್ ಇಲಾಖೆ. ಈ ರೆವಿನ್ಯೂ ಇಲಾಖೆಯೊಂದು ದಕ್ಷತೆಯಿಂದ ನಿಸ್ಪೃಹತೆಯಿಂದ ಕೆಲಸಮಾಡಿದ್ದೇ ಆದರೆ ದೇಶದಲ್ಲಿರತಕ್ಕ ಜನರಿಗೆಲ್ಲ ಈ ಸರ್ಕಾರದ ಬಗ್ಗೆ ಹೆಚ್ಚು ನಂಬಿಕೆ—ವಿಶ್ವಾಸ–ಗೌರವ ಉಂಟಾಗುತ್ತದೆಂದು ನಾನು ಹೇಳುತ್ತೇನೆ. ಈ ದಿವಸ ಶೇಕಡ 95ರಷ್ಟು ಜನಾಂಗ ಹಳ್ಳಿಗಳಲ್ಲಿದ್ದಾರೆ. ಅವರು ನಿಮ್ಮ ಸರ್ಕಾರದಿಂದ ಏನನ್ನೂ ಅಪೇಕ್ಷಿಸುವುದಿಲ್ಲ. ಅವರು ಅಪೇಕ್ಷಿಸಬಹುದಾದಂಥ ಎರಡು ವಿಚಾರಗಳೇನೆಂದರೆ ಈ ರೆವಿನ್ಯೂ ಮತ್ತು ಪೋಲೀಸ್ ಇಲಾಖೆಗಳೆರಡೂ ದಕ್ಷತೆಯಿಂದ ನಿಸ್ಪೃಹತೆಯಿಂದ ಕೆಲಸ ನಡೆಸುವಂತೆ ಮಾಡಿದರೆ ಅವರು ತುಂಬ ತೃಪ್ತರಾಗುತ್ತಾರೆ. ಅವರಿಗೆ ಈ ಸರ್ಕಾರದಿಂದ ಮತ್ತೇನೂ ಆಗಬೇಕಾದ್ದಿಲ್ಲ. ಇನ್ನುಳಿದ ಸರ್ಕಾರವೆಲ್ಲ ಕೇವಲ ಶೇಕಡ ಐದರಷ್ಟು ಜನರಿಗಾಗಿ ಇರುತ್ತದೆ. ಆದುದರಿಂದ ಈ ದಿವಸ ಆ ಹಳ್ಳಿ ಜನರೆಲ್ಲ ಈ ರೆವಿನ್ಯೂ ಮತ್ತು ಪೋಲೀಸ್ ಎರಡು ಇಲಾಖೆಗಳನ್ನು ಬಿಗಿಯಾಗಿಟ್ಟುಕೊಂಡು ಅವುಗಳನ್ನು ಸರಿಯಾದ ರೀತಿಯಲ್ಲಿ ಕೆಲಸ ಮಾಡಿಸುವಂಥ ದಕ್ಷತೆಯ ಸರ್ಕಾರ ಯಾವಾಗ ಬರುವುದೋ ಎಂದು ಕಾದು ಎದುರುನೋಡುತ್ತಾ ಇದ್ದಾರೆ. ಆದರೆ ಅಂಥ ಪ್ರಜಾಭಿಮಾನದ ಇಲಾಖೆಯೆಂದು ಹೆಸರಾದ ರೆವಿನ್ಯೂ ಇಲಾಖೆಯಲ್ಲಿ ದಕ್ಷತೆ ಇತ್ತೀಚೆಗೆ ಬಹಳ ಕಡಮೆಯಾಗುತ್ತಿದೆ. ಇದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ಕೂಲಂಕಷವಾಗಿ ಬೇಗ ವಿಮರ್ಶೆ ಮಾಡಬೇಕೆಂದು ನಾನು ಅವರನ್ನು ಬೇಡಿಕೊಳ್ಳುತ್ತೇನೆ. ಹಿಂದೆ ನಮ್ಮ ಮೈಸೂರಿನಲ್ಲಿ ಸಿವಿಲ್ ಸರ್ವೀಸ್ ಬಹಳ ಪ್ರಖ್ಯಾತಿಯನ್ನು ಪಡೆದಿತ್ತು. ನಮ್ಮ ದೇಶದ ಜನರ ಏಳಿಗೆಗೆ ಅದೇಕಾರಣ. ಹೊರದೇಶಗಳವರೂ ಸಹ ನಮ್ಮ ಮೈಸೂರು ಸಿವಿಲ್ ಸರ್ವೀಸ್ ಅಧಿಕಾರಿಗಳ ಕಡೆಗೆ ಎದುರುನೋಡುತ್ತಿದ್ದಂಥ ಕಾಲ ಹಿಂದೆ ಇತ್ತು. ಆದರೆ ಅಂಥ ಇಲಾಖೆ ಈ ದಿವಸ ಆ ಒಳ್ಳೆಯ ಹೆಸರನ್ನು ದಿನೇ ದಿನೇ ಕಳೆದುಕೊಳ್ಳುತ್ತಿದೆ. ತಾಲ್ಲೂಕ್ ಕಛೇರಿಗಳಲ್ಲಿ ಹೇಗೆ ಆ ನೌಕರರ ದಕ್ಷತೆ ಕ್ಷೀಣವಾಗುತ್ತಿದೆಯೋ ಹಾಗೆಯೇ ಈ ಸೆಕ್ರೆಟೇರಿಯಟ್ ಲೆವೆಲ್‌ನಲ್ಲಿ ಸಹ ಈ ಸೆಕ್ರೆಟರಿಗಳ ದಕ್ಷತೆ ಬಹಳ ಕುಗ್ಗುತ್ತಿದೆ. ಇದಕ್ಕೆ ನಮ್ಮಲ್ಲಿರತಕ್ಕ ಪೇ-ಸ್ಟ್ರಕ್ಚರೇ ಕಾರಣವೆಂಬುದಾಗಿ ಈಗಾಗಲೇ ಅನೇಕರು ಹೇಳಿದ್ದಾರೆ. ಇದು ಈಗ 1:-30ರ ಅಂತರದಲ್ಲಿದೆ. ಇದನ್ನು ಸಾಧ್ಯವಾದ ಹಾಗೆ ನಮ್ಮ ಸರ್ಕಾರ ಕಡಮೆ ಮಾಡುತ್ತಾಬರುತ್ತಿದೆ. ದೇಶದಲ್ಲಿ ಎಲ್ಲರಿಗೂ ಅನುಕೂಲವಾದಂಥ ಸಮತಾವಾದ ಸಮಾಜವನ್ನು ರಚಿಸಬೇಕೆಂಬುದೇ ನಮ್ಮ ಸರ್ಕಾರದ ಮುಖ್ಯಗುರಿ. ಇದರಿಂದ ಮುಂದಕ್ಕೆ ನಮ್ಮ ಅಧಿಕಾರಿಗಳಲ್ಲೂ ಮತ್ತು ಇತರ ನೌಕರರುಗಳಲ್ಲೂ ದಕ್ಷತೆ ವೃದ್ಧಿಹೊಂದಲು ಅವಕಾಶವಿರುತ್ತದೆಂದು ನನ್ನ ಭಾವನೆ. ಆದರೆ ಈಗ ಈ I.A.S. ಮತ್ತು I.P.S. ಅಧಿಕಾರಿಗಳು ಹೇಗೆ ಕೆಲಸ ನಡೆಸುತ್ತಿದ್ದಾರೆಂಬ ಬಗ್ಗೆ ಎರಡು ಮಾತನ್ನು ಹೇಳಬೇಕಾಗಿದೆ. ಈ ಗ್ರೇಡುಗಳು ಬಂದ ಮೇಲೆ ಕೆಲಸ ಕಾರ್ಯಗಳು ಚುರುಕಾಗಿ ನಡೆಯುವುದಕ್ಕೆ ಬದಲಾಗಿ ಜನರಲ್ಲಿ ಅತೃಪ್ತಿ ಜಾಸ್ತಿಯಾಗಿ ಕೆಲಸಗಳು ನಿಧಾನವಾಗಲು ಇದೇ ಒಂದು ಕಾರಣವೆಂದು ಅನೇಕರು ಹೇಳುತ್ತಿದ್ದಾರೆ. ಹಿಂದೆ ಇಲ್ಲಿ ಕೆಲಸಮಾಡುತ್ತಿದ್ದ ಸೆಕ್ರೆಟರಿಗಳಲ್ಲಿ ಕೆಲವರು I.A.S. ಎಂದು ಮಾಡಿದ್ದರಿಂದ ಅವರಿಗೆ 500 ರೂಪಾಯಿಗಳ ಸಂಬಳ ಜಾಸ್ತಿ ಆಯಿತು. ಆ ರೀತಿ ಯಾರಾರಿಗೆ ಆ I.A.S. ಗ್ರೇಡ್ ದೊರೆಯಲಿಲ್ಲವೋ ಅವರಿಗೆ ಕಡಮೆ ಸಂಬಳವೇ ನಿಂತಿತು. ಇದರಿಂದ ಅವರಲ್ಲಿ ಅತೃಪ್ತಿಯುಂಟಾಗಿ ದಕ್ಷತೆಗೆ ಕುಂದುಕ

(ಶ್ರೀ ಎಸ್. ಮುನಿರಾಜು.)

ಉಂಟಾಗಿದೆ. ಆ ಕೇಂದ್ರ ಸರ್ಕಾರದವರು ಇತ್ತೀಚಿಗೆ ಈ I.A.S. ಮತ್ತು I.P.S. ಗ್ರೇಡುಗಳನ್ನು ಜಾರಿಗೆ ತಂದರು. ಈ ಗ್ರೇಡುಗಳ ಅಗತ್ಯ ನಮಗೆ ಎಷ್ಟರ ಮಟ್ಟಿಗಿದೆ ಎಂಬ ವಿಚಾರದಲ್ಲಿ ಈಗಲೂ ನಮ್ಮ ಸರ್ಕಾರದವರು ಕೂಲಂಕಷವಾಗಿ ಮತ್ತು ತೀವ್ರವಾಗಿ ಪರಿಶೀಲನೆ ಮಾಡಿ ಸಾಧ್ಯವಾದಮಟ್ಟಿಗೂ ಇವು ಗಳನ್ನು ತೆಗೆದುಹಾಕಿ ಈ ಹಿಂದೆ ನಮ್ಮಲ್ಲಿದ್ದಂಥ ಆ ಮೈಸೂರ್ ಸಿವಿಲ್ ಸರ್ವಿಸ್ ಪದ್ಧತಿಯನ್ನೇ ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ. ಇದರಿಂದ ನಮಗೆ ಒಂದು ರೀತಿಯಲ್ಲಿ ಮಿತವ್ಯಯವೂ ಆಗುತ್ತದೆ. ಖರ್ಚೂ ಕಡಮೆ ಆಗುತ್ತದೆ.

ಇನ್ನು ಅಧಿಕಾರಿಗಳವರ್ಗಾವಣೆ ವಿಚಾರದಲ್ಲಿ ಬಹಳ ದೂರುಗಳು ಬರುತ್ತಿವೆ. ಇನ್ನೊಂದು ಕಡೆ 10–12 ವರ್ಷಗಳಾದರೂ ಕನ್‌ಫರ್‌ಮೇಷನ್‌ಗಳು ಆಗುತ್ತಿಲ್ಲ ವೆಂದೂ—ನೌಕರರುಗಳಿಗೆ ದೊರೆಯಬೇಕಾದ ಭಡ್ತಿ ಗಳು—ಇನ್‌ಕ್ರಿಮೆಂಟುಗಳು ದೊರೆಯದೆ ತೊಂದರೆ ಪಡುತ್ತಿದ್ದಾರೆಂದು ದೂರುಗಳು ಬೇರೆ ಕೇಳಿಬರುತ್ತಿವೆ. ಸರ್ಕಾರದವರು ಯಾವುದಾದರೆ ಒಂದು ನೀತಿ ನಿಯಮ ವನ್ನು ಹಾಕಿದಮೇಲೆ ಅದರಂತೆ ಖಚಿತವಾಗಿ ಆಚರಣೆಗೆ ತರಬೇಕಾದದ್ದು ಅವರ ಕರ್ತವ್ಯ. ಯಾವುದೇಒಂದು ವಿಚಾರದಲ್ಲಾಗಲಿ Pay-structure, transfer ಇತ್ಯಾದಿ ಪ್ರತಿಯೊಂದು ವಿಚಾರದಲ್ಲೂ ಒಂದು ನೀತಿ ಯನ್ನು ಅನುಸರಿಸಬೇಕಾದದ್ದು ಅತ್ಯಗತ್ಯ. ಇಲ್ಲದಿ ದ್ದರೆ ನಮ್ಮ ಸರ್ಕಾರದ ಹಾಗೂ ನೌಕರರ ಕೀರ್ತಿಗೆ ಕಳಂಕ ಬರಬಹುದು. ಒಂದು ನಿರ್ಧಾರವಾದ ಪಾಲಸಿಯ ಮೇಲೆ ಕೆಲಸ ನಡೆಸುವುದಾದರೆ ಅದರಿಂದ ಎಲ್ಲರಿಗೂ ಅನುಕೂಲವಿದೆ. ಆದರೆ ಈಗತಾನೆ ಮಾತನಾಡಿದ ಶ್ರೀ ಪಿಂಟೋ ಅವರು ಒಂದು ವಿಷಯ ಹೇಳಿದರು—ಈ ಚುನಾವಣೆಗಳ ಬಗ್ಗೆ 13 ಲಕ್ಷ ರೂಪಾಯಿಗಳ ಖರ್ಚನ್ನು ತೋರಿಸಲು ಕಾರಣವೇನೆಂಬುದಕ್ಕೆ ವಿಮರ್ಶೆಮಾಡಬೇಕಾದದ್ದು ಅಗತ್ಯ ಎಂದು. ಇದನ್ನು ನಾನೂ ಒಪ್ಪುತ್ತೇನೆ. ಮಂತ್ರಿಗಳು ಇದನ್ನು ವಿಮರ್ಶೆ ಮಾಡಬೇಕಾಗಿದೆ. ಇನ್ನು ಕೆಲವು ಸ್ನೇಹಿತರು ತಾಲ್ಲೂಕ್ ಲೆವೆಲ್‌ನಲ್ಲೂ ಮತ್ತು ಡಿಸ್ಟ್ರಿಕ್ಟ್ ಲೆವೆಲ್ ನಲ್ಲೂ ಕಾಗದಪತ್ರಗಳ ವಿಲೇವಾರಿಯಲ್ಲಿ ತಡವಾಗು ತ್ತಿರುವುದರ ಬಗ್ಗೆ ತಾಲ್ಲೂಕು ಕಾಂಗ್ರೆಸ್ ಸಂಸ್ಥೆ ಮತ್ತು ಡಿಸ್ಟ್ರಿಕ್ಟ್ ಕಾಂಗ್ರೆಸ್ ಸಂಸ್ಥೆಗಳು ಕಾರಣ ವೆಂದು ಹೇಳಿರತಕ್ಕದ್ದು ಸತ್ಯಾಂಶಕ್ಕೆ ಬಹಳ ದೂರ ವಾದದ್ದು. ಈ ವಿಚಾರದಲ್ಲಿ ನಾವೂ ಸಹ ಅವರಂತೆ ಟೀಕೆ ಮಾಡುತ್ತಿದ್ದೇವೆ. ಆದ್ದರಿಂದ ಅವರು ಕಾಂಗ್ರೆಸ್ ಸಂಸ್ಥೆಯನ್ನು ದೂಷಣೆ ಮಾಡತಕ್ಕದ್ದು ಸರ್ವಥಾ ನ್ಯಾಯವಾದದ್ದಲ್ಲ; ಸತ್ಯಕ್ಕೆ ದೂರವಾದ ಅಂಶ. ಏನೋ ಅನ್ಯಾಯ ಮಾಡಿದ್ದಕ್ಕೆ ಆ ನೌಕರರಿಗೆ ವರ್ಗವಾದರೆ ಅದಕ್ಕಾಗಿ ಕಾಂಗ್ರೆಸ್ ಸಂಸ್ಥೆಯನ್ನು ದೂರುವುದು ಸರಿಯಾದದ್ದಲ್ಲವೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಚ್. ವಿ. ಕೌಜಲ್ಗಿ (ಸಂಪಗಾಂವ್ 1).—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಇಟ್ಟಿರತಕ್ಕ ಡಿಮ್ಯಾಂಡನ್ನು ನಾನು ಹೃತ್ಪೂರ್ವಕವಾಗಿ ಸ್ವೀಕರಿ ಸುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದಿಚ್ಛಿಸಿ ದ್ದೇನೆ. ಸಾಮಾನ್ಯವಾಗಿ ಈ ಹೊಸ ರಾಜ್ಯ ಜಾರಿಗೆ ಬಂದಮೇಲೆ ಆದ ಪ್ರಾಮುಖ್ಯವಾದ ಬದಲಾವಣೆ ಗಳಲ್ಲಿ ಒಂದು ಎಂದರೆ, ಈ ಡಿವಿಜನಲ್ ಕಮಿಷನರ್ ಅವರ ಆಫೀಸುಗಳ ನಿರ್ಮಾಣ. ಆದರೆ ಹೀಗೆ ಹೊಸ ದಾಗಿ ಸ್ಥಾಪನೆಯಾದ ಆಫೀಸುಗಳೇನಿವೆ ಇವುಗಳನ್ನು ತೆಗೆದುಹಾಕಿದರೆ ಅದರಿಂದ ಮಿತವ್ಯಯ ಆಗುತ್ತದೆ ಯೆಂದೂ, ಅಷ್ಟೇ ಅಲ್ಲದೆ ಈ ಆಫೀಸನ್ನು ವಜಾ ಮಾಡದೆ ಇಟ್ಟುಕೊಂಡರೆ ನಮ್ಮ ಕಾಗದಪತ್ರಗಳ ವ್ಯವಹಾರ ಬೇಗ ಇತ್ಯರ್ಥವಾಗುವುದಿಲ್ಲ, ಆದ್ದರಿಂದ ಇದನ್ನು ಕೂಡಲೇ ವಜಾ ಮಾಡತಕ್ಕದ್ದು ಸೂಕ್ತ ಎಂಬ ಅಭಿಪ್ರಾಯವನ್ನೂ ಕೆಲವು ಸದಸ್ಯರು ಹೊಂದಿರುತ್ತಾರೆ. ಈ ವಿಚಾರದಲ್ಲಿ ನನ್ನ ಅಭಿಪ್ರಾಯವೇ ಬೇರೆಯಿದೆ. ಈ ಡಿವಿಜನ್ ಆಫೀಸರುಗಳು ಇರತಕ್ಕದ್ದು ಅಗತ್ಯ. ನಮ್ಮ ಹೊಸ ರಾಜ್ಯವಾದನಂತರ ಐದು ಹೊಸ ಪ್ರಾಂತ್ಯಗಳ ಆಡಳಿತ ಒಂದು ಕಡೆ ಸೇರಿರುತ್ತದೆ. ಈ ಐದು ಬೇರೆ ಬೇರೆ ಪ್ರಾಂತ್ಯಗಳು ಎಲ್ಲ ವಿಧದಲ್ಲೂ ಭಿನ್ನ ಭಿನ್ನತೆ ಗಳಿಂದ ಕೂಡಿರುತ್ತವೆ. ಕಾನೂನು—ವಿಧ್ಯಾಭ್ಯಾಸ-ರಾಜಕೀಯ ಆಡಳಿತ, ಆಫೀಸು ಕಾರ್ಯಕ್ರಮ—ಸಂಬಳ ಸಾರಿಗೆ—ಹೀಗೆ ಪ್ರತಿಯೊಂದು ವಿಚಾರದಲ್ಲೂ ಭಿನ್ನತೆ ಗಳಿಂದ ಕೂಡಿರುತ್ತದೆ. ಈಗ ಈ ಭಿನ್ನತೆಗಳನ್ನೆಲ್ಲಾ ಸರಿಪಡಿಸಿ ಎಲ್ಲ ಕಡೆಗಳಲ್ಲೂ ಒಂದೇ ರೀತಿಯ ಆಡಳಿತವನ್ನು ಜಾರಿಗೆ ತರಬೇಕಾಗಿದೆ. ಆದುದರಿಂದ ಸರ್ಕಾರದವರು ಎಲ್ಲ ಅಂಶಗಳನ್ನೂ ಯೋಗ್ಯ ರೀತಿ ಯಲ್ಲಿ ಆಲೋಚನೆ ನಡೆಸಿ ಅನಂತರ ಈ ಡಿವಿಜನ್ ಆಫೀಸುಗಳು ಇರತಕ್ಕದ್ದು ಸೂಕ್ತ ಎಂಬ ತೀರ್ಮಾ ನಕ್ಕೆ ಬಂದುದರಿಂದಲೇ ಇವುಗಳನ್ನು ಜಾರಿಗೆ ತಂದಿದೆ ಎಂದು ಕಾಣುತ್ತಿದೆ. ಈಗ ಯಾರು ಈ ಡಿವಿಜನ್ ಗಳನ್ನು ತೆಗೆದುಹಾಕಬೇಕೆಂದು ಹೇಳುತ್ತಿದ್ದಾರೋ ಅವರು ನಿಜವಾಗಿಯೂ ಆಳವಾಗಿ ವಿಚಾರಮಾಡಿ ನೋಡಿದರೆ ಆಗ ಅವರಿಗೆ ಇದರ ಇರುವಿಕೆಯ ಉದ್ದೇಶ ಬಹಳ ಯೋಗ್ಯವಾದದ್ದು ಎನ್ನುವುದು ಅವರಿಗೇ ಗೊತ್ತಾಗುತ್ತದೆ. ಇದರಲ್ಲಿ ಅಧಿಕಾರವಿಕೇಂದ್ರೀ ಕರಣದತತ್ವ ಅಡಕವಾಗಿದೆ. ಇಲ್ಲಿಯವರೆಗೂ ಈ ಅಧಿಕಾರವೆಲ್ಲ ಕೆಲವು ಮಂತ್ರಿಗಳಲ್ಲಿ ಕೆಲವು ಸೆಕ್ರೆಟೆರಿ ಗಳಲ್ಲಿ ಕೇಂದ್ರೀಕೃತವಾಗಿರುತ್ತಿತ್ತು. ಈಗ ಅದನ್ನು ವಿಕೇಂದ್ರೀಕರಣ ಮಾಡಬೇಕೆಂಬ ಉದ್ದೇಶದಿಂದ ಈ ಡಿವಿಜನ್ ಆಫೀಸುಗಳನ್ನು ತೆರೆಯಲಾಗಿದೆ. ಇವರಿಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡಬೇಕೆಂಬ ವಿಚಾರ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಇನ್ನು ಎರಡನೆಯದು ಎಂದರೆ, ಎಷ್ಟೋ ಸ್ಥಾನಿಕ ವಿಚಾರಗಳು, ಎಂದರೆ local problems ಬರುತ್ತವೆ. ಅವುಗಳನ್ನು ತೀರ್ಮಾನಮಾಡಲಿಕ್ಕೆ ಈ ಸ್ಥಾನದ ಅವಶ್ಯಕತೆ ಇದೆ. ಸ್ಥಾನಿಕ ವಿಚಾರಗಳು ಸರ್ಕಾರಕ್ಕೆ ಬಂದು ಸೆಕ್ರೆಟರಿಯಟ್‌ನಲ್ಲಿ ತೀರ್ಮಾನವಾಗಬೇಕಾದರೆ ನಿಧಾನವಾಗಿ, ಅನ್ಯಾಯಗಳು ಆಗುವ ಸಂಭವವಿದೆ. ಆ ದೃಷ್ಟಿಯಿಂದಲೂ ಸಹ ಸ್ಥಾನಿಕ ವಿಚಾರಗಳನ್ನು ಪರಿಶೀಲನೆ ಮಾಡಲಿಕ್ಕೆ ಈ ಸ್ಥಾನದ ಅವಶ್ಯಕತೆ ಇದೆ.

ಮೂರನೆಯದು ಎಂದರೆ, ಆ ಭಾಗದ ಆಫೀಸು ಗಳನ್ನು—ತಾಲ್ಲೂಕು ಕಚೇರಿ ಆಗಲಿ, ಜಿಲ್ಲಾ ಕಚೇರಿ ಆಗಲಿ—ಇನ್ಸ್‌ಪೆಕ್ಷನ್ ಮಾಡುವುದು ವರ್ಷಕ್ಕೆ ಒಮ್ಮೆ ಯಾರು ಇನ್ಸ್‌ಪೆಕ್ಷನ್ ಮಾಡಬೇಕು ಎನ್ನುವ ಒಂದು ಪ್ರಶ್ನೆ ಇದೆ. ಅವುಗಳನ್ನು ಇನ್ಸ್‌ಪೆಕ್ಷನ್ ಮಾಡಲಿಕ್ಕೆ ಮತ್ತು ಅವರ ಕಡೆಯಿಂದ ಕೆಲಸ ತೆಗೆದುಕೊಳ್ಳಲಿಕ್ಕೆ ಈ ಡಿವಿಜನಲ್ ಕಚೇರಿಗಳು ಅತಿ ಜರೂರಾಗಿ ಬೇಕಾ ಗಿವೆ. ಮುಂಬೈನಲ್ಲಿ ಹಿಂದೆ ಕೆಳ ದರ್ಜೆಯ ಆಫೀಸು ಗಳನ್ನು ಇನ್ಸ್‌ಪೆಕ್ಷನ್ ಮಾಡಲಿಕ್ಕೆ ಸೆಕ್ರೆಟೆರಿಯಟ್‌ನಲ್ಲಿ ಇನ್ಸ್‌ಪೆಕ್ಷನ್ ಬ್ರಾಂಚ್ ಎಂದು ಹೇಳಿ ಒಂದು ಬ್ರಾಂಚ ನ್ನು ತೆಗೆದರು. ಅದರ ಅನುಭವ ನನಗೆ ವಿಶೇಷವಾಗಿ ಗೊತ್ತಿದೆ. ಯಾವ ರೀತಿ ಇನ್ಸ್‌ಪೆಕ್ಷನ್ ಆಗುತ್ತಿದೆ ಎನ್ನುವ ಪ್ರಶ್ನೆ ಒಂದು ಸರಿಯಾದ ರೀತಿಯಲ್ಲಿ ಕೆಳಗಿನ ಆಫೀಸುಗಳಿಂದ ಕೆಲಸವಾಗುತ್ತಿಲ್ಲ ಎಂದು ತಿಳಿದು ಬಂತು. ಈ ವಿಚಾರವಾಗಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಮುಂದೆ ಸಹಿತ ಕೆಲವು ಪ್ರಶ್ನೆಗಳು ಬಂದಿ

ದ್ದವು. ಈಗಿನ ಸರ್ಕಾರವೂ ಸಹಿತ ಅದನ್ನು ರಿವೈಸ್ ಮಾಡಬೇಕೆಂದು ಹೇಳಿ ರಿವೈಸ್ ಮಾಡಿದ್ದಾರೆ. ಶ್ರೀ ಪಿಂಟೋ ಅವರು ಹೇಳಿದ ವಿಷಯ ನಿಜ. ನಾವು ಬರೀ ನಾಲ್ಕು ಜಿಲ್ಲೆಗಳನ್ನು ಮಾತ್ರ ನೋಡಬಾರದು. ಜಿಲ್ಲಾ ಕ್ಷೇತ್ರ ಎಷ್ಟು, ಜನ ಸಂಖ್ಯೆ ಎಷ್ಟು ಎಂಬುದನ್ನು ನೋಡಿದರೆ ಬೆಳಗಾಂ ಜಿಲ್ಲೆಯಲ್ಲಿ ಕಾರವಾರ ಬಿಟ್ಟರೆ 15-20 ಲಕ್ಷ ಜನ ಸಂಖ್ಯೆ ಇರುವ ದೊಡ್ಡ ದೊಡ್ಡ ಪ್ರದೇಶಗಳು ಇವೆ. ಇದನ್ನೆಲ್ಲಾ ವಿಚಾರ ಮಾಡಿ ನೋಡಿದರೆ ಡಿವಿಜನಲ್ ಕಮಿಷನರ ಹುದ್ದೆಯ ಅವಶ್ಯಕತೆ ಇದೆ.

ಈ ಹೊಸ ಪ್ರಾಂತ್ಯದೊಳಗೆ ಇನ್ನೂ ನಿಯಮಗಳು, ಕಾಯಿದೆಗಳು ಕ್ರೋಡೀಕಾರವಾಗಿಲ್ಲ. ಇದೆಲ್ಲಾ ಆಗಿ ಒಂದು ಸ್ಥಿಮಿತಕ್ಕೆ ಬರುವವರೆಗೂ ಇದರ ಅವಶ್ಯಕತೆ ಇದೆ; ಮತ್ತು ಇದನ್ನು ಈಗ ತೆಗೆದುಹಾಕುವುದು premature ಎಂದು ಹೇಳುತ್ತೇನೆ.

ಸೆಕ್ರೆಟೇರಿಯಟ್‌ನಲ್ಲಿ ಬಹಳ ತಡವಾಗಿ ಕೆಲಸ ನಿಕಾಲಿ ಆಗುತ್ತದೆ. ಈ ಮಾತನ್ನು ಅನೇಕ ಸದಸ್ಯರು ಹೇಳಿದ್ದಾರೆ. ಅದೇ ಅಭಿಪ್ರಾಯವನ್ನು ನಾನು ಹೇಳುತ್ತಾ ಇದ್ದೇನೆ. ಇದುವರೆಗೂ ಸಾಮಾನ್ಯವಾಗಿ ಎಲ್ಲರಿಗೂ ಅನುಕೂಲವಾಗುವಂಥ ನಿಯಮ ಮಾಡಿಲ್ಲ. ಫೈನಾನ್ಸ್ ಮಿನಿಸ್ಟರವರೂ ಸಹಿತ ಅವರ ಬಡ್ಜೆಟ್ ಭಾಷಣದಲ್ಲಿ ಬೇರೆ ಬೇರೆ ಪ್ರಾಂತ್ಯಗಳಿಂದ ಬಂದಂಥ ಪ್ರಕರಣಗಳನ್ನು ಸರಿಯಾಗಿ ಹಂಚಿಲ್ಲ ಎಂದು ಹೇಳಿದ್ದಾರೆ. ಸರ್ಕಾರದವರು ಇದರ ಕಡೆಗೆ ಹೆಚ್ಚು ಲಕ್ಷ್ಯ ಕೊಟ್ಟು ದಯವಿಟ್ಟು ಅವನ್ನು ಜಾಗ್ರತೆ ತೀರ್ಮಾನ ಮಾಡಲಿಕ್ಕೆ ಬೇಕು, ಎರಡನೆಯದಾಗಿ ಬೇರೆ ಬೇರೆ ಪ್ರಾಂತ್ಯಗಳಿಂದ ಬಂದಿರುವವರನ್ನು ಅವರು ಯಾವ ಖಾತೆಯಲ್ಲಿ ಕೆಲಸಮಾಡುತ್ತಿದ್ದರೋ ಅಲ್ಲಿಗೆ ಹಾಕದೆ, ಶಿಕ್ಷಣ ಖಾತೆಯಲ್ಲಿ ಕೆಲಸಮಾಡಿದವರನ್ನು ಡೆವಲಪ್‌ಮೆಂಟ್ ಖಾತೆಗೂ, ಡೆವಲಪ್‌ಮೆಂಟ್ ಖಾತೆಯಲ್ಲಿ ಕೆಲಸಮಾಡಿದವರನ್ನು ರೆವಿನ್ಯೂ ಖಾತೆಗೂ ಹಾಕಿದ್ದಾರೆ. ಆಯಾಯಾ ಖಾತೆಯಲ್ಲಿ ಕೆಲಸ ಮಾಡಿದವರಿಗೆ 10-15 ವರ್ಷಗಳ ಅನುಭವ ಇದೆ. ನೀವು ಅವರಿಗೆ ಸರಿಯಾಗಿ ಅವರವರ ಖಾತೆಗಳಲ್ಲಿ ಅವರಿಗೆ ಕೆಲಸ ಕೊಡದೇ ಇರುವುದರಿಂದ ಪ್ರಕರಣಗಳು ನಿಕಾಲಿ ಆಗಲಿಕ್ಕೆ ತೊಂದರೆಯಾಗುತ್ತಿದೆ. ಆ ಬಗ್ಗೆ ಸರ್ಕಾರದವರು ಒಂದು ಕಮಿಟಿಯನ್ನೋ ಅಥವಾ ಸೆಕ್ರೆಟೇರಿಯಟ್‌ನಲ್ಲಿರುವ ಒಬ್ಬ ಸೆಕ್ರೆಟೆರಿಯವರನ್ನೋ ನೇಮಕ ಮಾಡಿ ಅವರವರ ಖಾತೆಯ ಕೆಲಸವನ್ನು ಅವರವರಿಗೆ ಕೊಡುವಂತೆ ಮಾಡಬೇಕು. 10–15 ವರ್ಷ ಒಂದು ಖಾತೆಯಲ್ಲಿ ಕೆಲಸಮಾಡಿದವರು ಈಗ ಇನ್ನಾವುದೋ ಒಂದು ಖಾತೆಯಲ್ಲಿ ಟೈಪಿಸ್ಟ್ ಆಗಿದ್ದಾರೆ ಎಂದು ಕೇಳಿದ್ದೇನೆ. ಆ ದೆಸೆಯಿಂದ ತಡ ಆಗಲಿಕ್ಕೆ ಕಾರಣವಾಗಿದೆ. ದಯವಿಟ್ಟು ಸೆಕ್ರೆಟೆರಿಯಟ್ ಲೆವಲ್‌ನಲ್ಲಿ ಪ್ರಕರಣಗಳು ಜಾಗ್ರತೆ ನಿಕಾಲಿ ಆಗುವ ಹಾಗೆ ಮಾಡಬೇಕು. ಅರ್ಜಿಗಳನ್ನು ಕೊಟ್ಟರೆ ಸರಿಯಾಗಿ ಉತ್ತರ ಕೊಡಬೇಕು. ಉತ್ತರ ಕೊಡಬೇಕಾದರೆ ಎರಡು ಆಣೆ ಸ್ಟ್ಯಾಂಪ್ ಇಡಬೇಕೆಂಬ ಧೋರಣೆ ಇರಬಾರದು. ಆ ರೀತಿ ಆದರೆ ಜನರಿಗೆ ನ್ಯಾಯದೊರಕಿಸಿ ಕೊಟ್ಟಂತೆ ಆಗುವುದಿಲ್ಲ. ಆ ಕಡೆಗೆ ಲಕ್ಷ್ಯಕೊಡದೆ, ಯಾವತ್ತು ಪ್ರಕರಣಗಳನ್ನೂ ಮುಂದುವರಿಸಬಾರದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ರಾಮಪ್ಪ (ಹರಿಹರ).—ಸ್ವಾಮಿ, ನಾನು ಈ ಸಂದರ್ಭದಲ್ಲಿ ಈಗಿನ ಮಂತ್ರಿಗಳ ವಿಚಾರವಾಗಿ ಮಾತನಾಡುತ್ತಾ ಅವರಲ್ಲಿ ಒಂದು ನೈತಿಕ ಬೆಂಬಲವಿದೆಯೋ ಎನ್ನುವ ವಿಚಾರವನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ಮಂತ್ರಿಗಳಲ್ಲಿ ಒಗ್ಗಟ್ಟು ಸೌಹಾರ್ದ ಇಲ್ಲ ಮತ್ತು ಪರಸ್ಪರ ಜವಾಬ್ದಾರಿ ಎನ್ನತಕ್ಕದ್ದು ಇಲ್ಲವೇ ಇಲ್ಲ ಎನ್ನುವ ವಿಷಯ ನಮಗೆಲ್ಲರಿಗೂ ಚೆನ್ನಾಗಿ ತಿಳಿದಿದೆ. ಉದಾಹರಣೆಗೆ ಮೊನ್ನೆ ತಾನೆ ಅಧ್ಯಕ್ಷರ ಚುನಾವಣೆಯಲ್ಲಿ ನಮಗೆಲ್ಲರಿಗೂ ಗೊತ್ತಿದ್ದ ಹಾಗೆ ಈ ಮಂತ್ರಿಮಂಡಲದಲ್ಲಿ ಒಗ್ಗಟ್ಟು ಇಲ್ಲದೆ ಒಂದು ಭಿನ್ನಾಭಿಪ್ರಾಯವುಂಟಾಗಿತ್ತು. ಒಂದು ದೇಶದ ಹಿತದೃಷ್ಟಿಯಿಂದ ಮಂತ್ರಿಮಂಡಲದಲ್ಲಿ ಒಗ್ಗಟ್ಟಿರುವುದು ಅತಿಮುಖ್ಯ.

[Mr. Speaker in the Chair.]

ಈರೀತಿ ಒಗ್ಗಟ್ಟು ಇಲ್ಲದೇ ಇರತಕ್ಕ ಒಂದು ಆಡಳಿತ ಪಕ್ಷದಿಂದ ನಮಗೆ ಒಂದು ಪ್ರಗತಿದಾಯಕವಾದಂಥ ಮತ್ತು ಸುವ್ಯವಸ್ಥಿತವಾದಂಥ ಸರ್ಕಾರ ನಡೆಸಲಿಕ್ಕೆ ಸಾಧ್ಯವೇ ಎನ್ನುವ ವಿಷಯವನ್ನು ನಾನು ಹೇಳಬಯಸುತ್ತೇನೆ. ಆಡಳಿತ ಪಕ್ಷದಲ್ಲಿ ಒಗ್ಗಟ್ಟು ಇಲ್ಲದೇ ಇದ್ದರೆ ವಿರೋಧ ಪಕ್ಷಕ್ಕೆ ತೊಂದರೆ ಆಗುವುದಿಲ್ಲ. ಆದರೆ ಈ ರೀತಿ ಒಗ್ಗಟ್ಟು ಇಲ್ಲದೇಇರುವುದರಿಂದ ಅಂಥ ಮಂತ್ರಿ ಮಂಡಳದವರಿಂದ ನಿಜವಾಗಿಯೂ ನಮ್ಮ ದೇಶದಲ್ಲಿ ಒಂದು ಒಳ್ಳೆಯ ಕೆಲಸ ನಡೆಯುತ್ತದೆಯೋ ಎನ್ನುವ ವಿಷಯವನ್ನು ನಾವು ನಿಜವಾಗಿಯೂ ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ಈ ಮಂತ್ರಿಮಂಡಲದಲ್ಲಿ ದಕ್ಷತೆ ಅಭಾವಕ್ಕಿಂತಲೂ ಹೆಚ್ಚಾಗಿ, ನನಗೆ ಎನ್ನಿಸುತ್ತದೆ, ಪ್ರಾಮಾಣಿಕತೆಯ ಅಭಾವ ಎದ್ದು ಕಾಣುತ್ತಾ ಇದೆ. ನಿಜವಾಗಿಯೂ ನಮ್ಮ ಭರತಖಂಡಕ್ಕೆ ಅತಿ ಮುಖ್ಯವಾಗಿ ಬೇಕಾಗಿರುವುದು ಪ್ರಮಾಣಿಕತೆ. ಪ್ರಮಾಣಿಕತೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇದ್ದರೆ ಯಾವ ಕೆಲಸವನ್ನಾದರೂ ಬಹಳ ಸುಲಲಿತವಾಗಿ ಬಹಳ ಸುಲಭವಾಗಿ ಎಲ್ಲಾ ಸಮಸ್ಯೆಗಳನ್ನೂ ಪರಿಹಾರ ಮಾಡಬಹುದು ಎಂದು ನಾನು ಬಹಳ ಧೈರ್ಯವಾಗಿ ಹೇಳಬಲ್ಲೆ. ಇವೊತ್ತಿನ ದಿವಸ ನಮ್ಮ ಸಮಸ್ಯೆಗಳು ಜಟಿಲವಾಗಿರುವುದಕ್ಕೆ ಕಾರಣ ಕೇವಲ ಆರ್ಥಿಕ ಸಮಸ್ಯೆ ಅಥವಾ ಇನ್ನಾವ ಸಮಸ್ಯೆಯೂ ಅಲ್ಲ. ನಿಜವಾಗಿಯೂ ನಮ್ಮ ಇಂಡಿಯಾ ದೇಶದಲ್ಲಿ ಅದರಲ್ಲೂ ಅನೇಕ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮುಖಂಡರಲ್ಲಿ ಮತ್ತು ಆಡಳಿತ ವರ್ಗದವರಲ್ಲಿ ಪ್ರಾಮಾಣಿಕತೆಯ ಅಭಾವವಿರುವುದರಿಂದ ನಮ್ಮ ಸಮಸ್ಯೆಗಳು ದಿನದಿನಕ್ಕೆ ಹೆಚ್ಚಾಗಿ ಬೆಳೆಯುತ್ತಾ ಬರುತ್ತದೆ. ನಾನು ಅವರನ್ನು ವೈಯಕ್ತಿಕವಾಗಿ ಟೀಕೆ ಮಾಡಬೇಕೆಂಬ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಇವೊತ್ತಿನ ದಿವಸ ಇದನ್ನು ನಾವು ಪ್ರತಿಯೊಂದು ಪ್ರಾಂತ್ಯದ ಪ್ರತಿಯೊಬ್ಬ ಮಂತ್ರಿಗಳಲ್ಲೂ ನೋಡುತ್ತಾ ಇದ್ದೇವೆ. ಇದನ್ನು ಇಷ್ಟಕ್ಕೆ ನಿಲ್ಲಿಸಿ, ಮಂತ್ರಿಗಳು, ನಾನು ಬಹಳ ದಕ್ಷ ಎಂದು ಹೆಸರು ತೆಗೆದುಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ನಾನು ಬಹಳ ಪ್ರಮಾಣಿಕ ಎಂದು ಹೇಳಿ ಜನರಲ್ಲಿ ಹೆಸರು ತೆಗೆದುಕೊಳ್ಳುವುದಕ್ಕೆ ಕೆಲಸ ಮಾಡಲಿ. ನಮಗೆ ನಿಜವಾಗಿಯೂ ದಕ್ಷರು ಬೇಕು. ಪ್ರಾಮಾಣಿಕತೆಗೆ ಹೆಚ್ಚು ಪಾಶಸ್ತ್ಯ ಕೊಡಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ.

ನಮ್ಮ ಮೈಸೂರಿನಲ್ಲಿ ಐ.ಎ.ಎಸ್. ಆಫೀಸರುಗಳು ತುಂಬಾ ಜಾಸ್ತಿ ಆಗುತ್ತಾ ಇದ್ದಾರೆ. ನಿಜವಾಗಿಯೂ ಇಷ್ಟು ಐ.ಎ.ಎಸ್. ಆಫೀಸರುಗಳ ಅವಶ್ಯಕತೆ ಇಲ್ಲ ಎಂದು ನನ್ನ ಅಭಿಪ್ರಾಯ.

4 P.M.

ಒಟ್ಟಿನಲ್ಲಿ ಚೀಫ್ ಸೆಕ್ರೆಟರಿಗಳು, ಡಿವಿಷನಲ್ ಕಮಿಷನರುಗಳು ಇವರನ್ನು ಮಾತ್ರ ಐ.ಎ.ಎಸ್.

(ಶ್ರೀ ಎಂ. ರಾಮಪ್ಪ).

ಅಧಿಕಾರಿಗಳನ್ನಿಟ್ಟುಕೊಂಡು ಉಳಿದ ಸ್ಥಾನಗಳಲ್ಲಿ ಹಿಂದಿನ ಮೈಸೂರು ಸಂಸ್ಥಾನದಲ್ಲಿದ್ದ ರೀತಿಯಲ್ಲಿ ಇತರ ಅಧಿಕಾರಿಗಳನ್ನಿಟ್ಟುಕೊಂಡು ಆಡಳಿತವನ್ನು ಸರಿಯಾಗಿ ನಡೆಸುವುದಕ್ಕೆ ಸಾಧ್ಯವೆಂದು ಹೇಳುತ್ತೇನೆ. ಇವೊತ್ತು ಹೊಸದಾಗಿ ನೇಮಕವಾಗುವ ಐ.ಎ.ಎಸ್. ಅಧಿಕಾರಿಗಳಿಗೆ 600-800 ರೂಪಾಯಿ ಸಂಬಳವನ್ನು ಕೊಡುತ್ತಿದ್ದಾರೆ. ನಿಜವಾಗಿಯೂ ಅವರಿಗೆ ಹಳ್ಳಿಯ ವಿಷಯ ಹೆಚ್ಚು ಗೊತ್ತಿರುವುದಿಲ್ಲ. ಅವರಿಗೆ ಯಾವ ಅನುಭವವೂ ಇರುವುದಿಲ್ಲ, ಆದರೆ ಇವರಿಗೆ ಕೊಡತಕ್ಕ ಸಂಬಳಗಳನ್ನು ನೋಡಿದರೆ ಇದು ಯಾರ ಯೋಜನೆ, ಏತಕ್ಕೋಸ್ಕರ ಹೀಗೆ ಹಾಕುತ್ತಾರೆ ಎಂಬುದು ಅರ್ಥವಾಗುತ್ತಿಲ್ಲ. ಕೇಂದ್ರ ಸರ್ಕಾರದವರು ಈ ಅಧಿಕಾರಿಗಳನ್ನು ಕಳುಹಿಸುತ್ತಾರೆ ಎಂಬುದು ಹೇಳಬಹುದು. ಆದರೆ ನಮ್ಮ ಮಂತ್ರಿಗಳು ಕೇಂದ್ರ ಸರ್ಕಾರದ ಮುಖಂಡರಿಗೆ ಹೇಳತಕ್ಕ ಧೈರ್ಯ ಮಾಡಿ, ಇವರುಗಳು ನಮ್ಮ ಸಂಸ್ಥಾನಕ್ಕೆ ಬೇಕಾಗಿಲ್ಲವೆಂದು ಹೇಳಬಹುದು. ಇಷ್ಟೊಂದು ಜನ ಐ.ಎ.ಎಸ್. ಅಧಿಕಾರಿಗಳು ಏಕೆ ಬೇಕು ? ಅವರುಗಳಿಲ್ಲದಿರುವ ಕಡೆ ಇನ್ನೂ ಕಡಮೆ ಸಂಬಳದಲ್ಲಿ ಬೇಕಾದಷ್ಟು ಜನ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಯಾವುದೋ ರೀತಿಯಲ್ಲಿ ಐ.ಎ.ಎಸ್. ಫಸ್ಟ್ ಕ್ಲಾಸಿನಲ್ಲಿ ಪಾಸ್ ಮಾಡಿ, 26-28 ವರ್ಷ ವಯಸ್ಸಿಗೆಲ್ಲ ಅಧಿಕಾರಕ್ಕೆ ಬಂದು, ಹಳ್ಳಿಯ ಅನುಭವವಿಲ್ಲದೆ ಇರುವುದರಿಂದ ನಮ್ಮ ಜನಗಳಿಗೆ ಯಾವ ರೀತಿಯಲ್ಲಿಯೂ ಉಪಕಾರವಾಗುತ್ತಿಲ್ಲವೆಂದು ಧೈರ್ಯವಾಗಿ ನನ್ನ ಅನುಭವದಿಂದ ಹೇಳಬಲ್ಲೆ. ಆದುದರಿಂದ ಈಗಿರುವ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆಯನ್ನು ಕಡಮೆ ಮಾಡಬೇಕು. ಇಲ್ಲದೆ ಇದ್ದರೆ ಸುಮ್ಮನೆ ಹಣ ವ್ಯಯವಾಗುತ್ತದೆ. ನಮ್ಮ ಮಂತ್ರಿಗಳು ಬಹಳ ಧೈರ್ಯದಿಂದ ಕೇಂದ್ರ ಸರ್ಕಾರದವರ ಮುಂದಿಟ್ಟು ಇವರ ಸಂಖ್ಯೆಯನ್ನು ಕಡಮೆ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಐ.ಎ.ಎಸ್. ಅಧಿಕಾರಿಗಳು ಮೈಸೂರು ಸರ್ಕಾರದಲ್ಲಿಯೇ ಇದ್ದರೆ ಏನು ಮಾಡಬೇಕು ?

ಶ್ರೀ ಎಂ. ರಾಮಪ್ಪ.—ಅವರ ಸಂಖ್ಯೆಯನ್ನು ಕಡಮೆ ಮಾಡಬೇಕು.

ಅಧ್ಯಕ್ಷರು.—ಮೈಸೂರು ಸರ್ವಿಸಿನಲ್ಲಿದ್ದವರನ್ನು ಐ.ಎ.ಎಸ್. ಅಧಿಕಾರಿಗಳಾಗಿ ನಾಮಿನೇಟ್ ಮಾಡಿದ್ದಾರೆ. ಅಂಥವರನ್ನು ಏನು ಮಾಡಬೇಕು ?

ಶ್ರೀ ಎಂ. ರಾಮಪ್ಪ. —ಅವರ ಸಂಬಳವನ್ನು ಕಡಮೆ ಮಾಡಬೇಕು, ಅಷ್ಟೆ.

ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರಕ್ಕೆ ಬರುತ್ತ ಅವರು ಮಾಡಿರತಕ್ಕ ನಿಯಮ ನಿಬಂಧನೆಗಳು ಬಹಳ ಹಿಂದೆ ಮಾಡಿದ್ದು. ಪಬ್ಲಿಕ್ ಸರ್ವಿಸ್ ಕಮಿಷನ್ನಿನ ವಿಷಯವನ್ನು ಮಂತ್ರಿಮಂಡಲವು ಬಹಳ ಸೀರಿಯಸ್ ಆಗಿ ಯೋಚನೆ ಮಾಡಬೇಕು. ಸೋಷಿಯಲಿಸಂ ಎಂದು ಹೇಳುತ್ತಿದ್ದಾರೆ. ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರು ಸಾವಿರಾರು ಜನರಿದ್ದಾರೆ. ಇವರಿಗೆ ಕೆಲಸವನ್ನು ಕೊಡುವ ವಿಚಾರದಲ್ಲಿ ನನ್ನ ಅಭಿಪ್ರಾಯವೇನು ಎಂದು ತಿಳಿಸುತ್ತೇನೆ. ಯಾರು ಜಮೀನಿಲ್ಲದೆ ಇದ್ದು (landless) ಎಸ್.ಎಸ್.ಎಲ್.ಸಿ. ಪಾಸ್ ಮಾಡಿರುತ್ತಾರೆಯೋ ಅಂಥವರಿಗೆ ಮೊದಲು ಕೆಲಸ ಕೊಟ್ಟು ಇತರರಿಗೆ ನಂತರ ಕೊಡಿ. ಈ ರೀತಿ ನಿಯಮ ನಿಬಂಧನೆಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡದೆ ಇದ್ದರೆ ನಿಜವಾಗಿಯೂ ಶ್ರೀಮಂತರಿಗೆ ಹೆಚ್ಚಿಗೆ ಕೆಲಸ ಸಿಕ್ಕುತ್ತದೆ. ಜಮೀನಿಲ್ಲದೆ ಇದ್ದು ಎಸ್.ಎಸ್.ಎಲ್.ಸಿ. ಪಾಸ್ ಆಗಿ ಐದಾರು ವರ್ಷಗಳಾಗಿದ್ದರೂ ಸಹ ಅಂಥವರಿಗೆ ಇನ್ನೂ ಕೆಲಸ ಸಿಕ್ಕಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಯಾವ ನೀತಿಯನ್ನು ಅನುಸರಿಸುತ್ತಿದ್ದಾರೆಂದು ಗೊತ್ತಾಗುವುದಿಲ್ಲ. 1950ನೆಯ ಇಸವಿಯಲ್ಲಿ ಎಸ್.ಎಸ್.ಎಲ್.ಸಿ. ಪಾಸ್ ಆಗಿ ಇನ್ನೂ ಕೆಲಸ ಸಿಕ್ಕದೆ ಇರುವವರು ಎಷ್ಟೋ ಜನರಿದ್ದಾರೆ. ಆದರೆ 1956ರಲ್ಲಿ ಪಾಸ್ ಮಾಡಿಕೊಂಡಿರುವ ಬೇಕಾದಷ್ಟು ಜನಕ್ಕೆ ಕೆಲಸ ಸಿಕ್ಕಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ನವರು ಯಾವ ನಿಯಮ ನಿಬಂಧನೆಗಳನ್ನು ಅನುಸರಿಸುತ್ತಿದ್ದಾರೆಯೋ ಅದೇ ರೀತಿ ನಿಬಂಧನೆಗಳನ್ನು local appointments ಮಾಡುವಾಗಲೂ ಸಹ ಅನುಸರಿಸಬೇಕಾಗಿದೆ. ಡೆಪ್ಯುಟಿ ಕಮಿಷನರುಗಳು, ಜಿಲ್ಲಾ ವಿದ್ಯಾಧಿಕಾರಿಗಳು, ಮುಂತಾದವರು ಪಬ್ಲಿಕ್ ಸರ್ವಿಸ್ ಕಮಿಷನ್ನವರು ಮಾಡಿರತಕ್ಕ ನಿಬಂಧನೆಗಳನ್ನು ಅನುಸರಿಸಬೇಕು. ಮುಂಚೆ ಪಬ್ಲಿಕ್ ಸರ್ವಿಸ್ ಕಮಿಷನ್ನವರು ತಾವು ಅನುಸರಿಸಬೇಕೆಂದು ತಾವೇ ಮಾಡಿರತಕ್ಕ ನಿಬಂಧನೆಗಳನ್ನು ಅನುಸರಿಸುತ್ತಿಲ್ಲ. ಇವರ ಕೆಳಗಿರತಕ್ಕ ಅಧಿಕಾರಿಗಳೂ ಕೂಡ ಈ ನಿಬಂಧನೆಗಳನ್ನು ಅನುಸರಿಸುತ್ತಿಲ್ಲ. ಇವರು ನಿಬಂಧನೆಗಳನ್ನು ಸರಿಯಾಗಿ ಅನುಸರಿಸುತ್ತಿದ್ದಾರೆಯೇ ಇಲ್ಲವೇ ಎಂದು ಸರ್ಕಾರದವರು ಬಹಳ ನಿಗಾ ಇಡಬೇಕು. ನಾನಾಗಲೇ ಹೇಳಿದ ಹಾಗೆ ಈ ನಿಬಂಧನೆಗಳನ್ನು ತಿದ್ದುಪಾಟು ಮಾಡಬೇಕು. ಯಾರಿಗೆ ಆಸ್ತಿ ಇಲ್ಲವೋ ಅಂಥವರಿಗೆ ಕೆಲಸಗಳನ್ನು ಕೊಡಲು ಮೊದಲು ಪ್ರಿಫರೆನ್ಸ್ ಕೊಟ್ಟು ಆಮೇಲೆ ಆಸ್ತಿ ಇರುವವರಿಗೆ ಕೊಡಬೇಕು. ಇದನ್ನು ನಾನು non-technical jobs ಏನಿವೆ ಅವುಗಳಿಗೆ ಮಾತ್ರ ಹೇಳುತ್ತಿದ್ದೇನೆ. Technical jobs ಸಂಬಂಧದಲ್ಲಿ ಮೆರಿಟ್ ಮುಂತಾದುವನ್ನೆಲ್ಲ ನೋಡಿ ಕೆಲಸಕ್ಕೆ ತೆಗೆದುಕೊಳ್ಳಬಹುದು. ನಮಗೆ ಈಗ ಇರತಕ್ಕ ತೊಂದರೆ ಕೆಳಮಟ್ಟದಲ್ಲಿ. ಈಗ communism ಬೆಳೆಯುತ್ತ ಬರುತ್ತಿರುವುದು educated unemployed ಯಾರಿದ್ದಾರೋ ಅವರಿಂದ. ಈ ನಿರುದ್ಯೋಗಿಗಳಿಗೆ ಜಮೀನು ಇದ್ದರೆ ಅವರು ಏನಾದರೂ ಒಂದು ಕೆಲಸ ಮಾಡುತ್ತಾರೆ. ಜಮೀನಿಲ್ಲದೆ ಇರುವವರಿಗೆ ಮೊದಲು ಉತ್ತೇಜನವನ್ನು ಕೊಡಬೇಕೆಂಬ ವಿಷಯವನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡದೆ ಇದ್ದರೆ ಕರ್ತವ್ಯ ಚ್ಯುತಿ ಮಾಡಿದಂತೆ ಆಗುತ್ತದೆ ಎಂದು ಒತ್ತಾಯದಿಂದ ಹೇಳುತ್ತಿದ್ದೇನೆ.

Palace gardens ಎಂದು ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಇದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. 'ಹೊಟ್ಟೆಗೆ ಹಿಟ್ಟಿಲ್ಲದೆ ಇದ್ದರೂ ಜುಟ್ಟಿಗೆ ಮಲ್ಲಿಗೆ ಹೂ' ಎಂದು ಹೇಳುವ ಗಾದೆಯಂತೆ ಇದೆ. ರಾಜ್ಯಪಾಲರ ಗಾರ್ಡನ್‌ಗಳಿಗೆ ಖರ್ಚು ಮಾಡುವುದನ್ನು ಯಾರು ಒಪ್ಪುತ್ತಾರೆ ಎಂದನ್ನಿಸುತ್ತದೆ. ಇದನ್ನು ನಾವು ಒಪ್ಪುವುದಿಲ್ಲ.

Hospitality. ಇದಕ್ಕೂ ಕೂಡ ಸ್ವಲ್ಪ ಹೆಚ್ಚು ಕಡಮೆ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಮಹಾತ್ಮ ಗಾಂಧಿಯವರಿಗೆ ಈ ಡಿಮಾಂಡುಗಳಿಗೆ ಓಟು ಮಾಡಿ ಎಂದು ಕೇಳಿದ್ದರೆ ಅವರು ಖಂಡಿತವಾಗಿಯೂ ಇವಕ್ಕೆ ವೋಟು ಮಾಡುತ್ತಿರಲಿಲ್ಲ. ಅವರೇನಾದರೂ ಇಲ್ಲಿ ಅಸೆಂಬ್ಲಿಯ ಸದಸ್ಯರಾಗಿದ್ದಿದ್ದರೆ ಅವರು ಇಂಥ ಡಿಮಾಂಡುಗಳಿಗೆ ವೋಟು ಮಾಡುತ್ತ ಇರಲಿಲ್ಲ. ಅವರು ಬಹಳವಾಗಿ ಟೀಕೆ ಮಾಡುತ್ತಿದ್ದರು. ಆದುದರಿಂದ ಈ ಡಿಮಾಂಡುಗಳಿಗೆ ವೋಟು ಮಾಡುವುದಕ್ಕೆ ನನಗೆ ಮನಸ್ಸಿಲ್ಲ ಎಂದು ಹೇಳಿ ನನ್ನ ಮಾತುಗಳನ್ನು ನಿಲ್ಲಿಸುತ್ತೇನೆ.

Mr. SPEAKER.—So far 27 members have taken part in the debate, out of which 14 come from the Opposition, and 13 from the Congress. Out of 14, 7 are independents and 7 belong to P.S.P. I think sufficient number of members have taken part in the House. We have to finish the Demands by 5 O'clock and we have to rise for the day. So I would like to call upon the Hon'ble the Chief Minister to give a reply. If there are any Hon'ble Members who have not taken part today, I will give them a chance tomorrow.

Sri B. K. PUTTARAMIYA.—We have submitted some names to the Speaker yesterday and even today in spite of that, the order of the names in that list has not been followed by the Deputy Speaker.

Mr. SPEAKER.—That is not so. I have looked into the whole list. He has also made a list of names who have spoken today. He has called 11 members and out of them, six are from the Opposition. I understand there are certain members who still want to take part in the debate. But I have to finish the debate by 5 O'clock and there is no question of sitting for longer hours today, because we have to go to the party. So, the Hon'ble Members will bear with me when I say that I have to call the Chief Minister. Otherwise, shall we sit till 6 O'clock today ?

Sri B. K. PUTTARAMIYA.—For that also, we agree in the interest of the State. We do not want any tiffin. State business is important..

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಅಧ್ಯಕ್ಷರು ಈಗತಾನೇ ಅಪ್ಪಣೆ ಕೊಡಿಸಿದ ಹಾಗೆ, ಈದಿನ ಮಾತನಾಡಿರುವ ಹನ್ನೊಂದು ಜನರ ಪೈಕಿ ಆರು ಜನ ಪ್ರತಿಪಕ್ಷದವರಿದ್ದೂ ಕೂಡ, ಅವರು ಮತ್ತೆ ಅವಕಾಶ ಕೊಡಬೇಕೆಂದು ಕೇಳುವುದು ಅಷ್ಟು ಸೂಕ್ತವಲ್ಲವೆಂದು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. 150 ಜನವಿರತಕ್ಕ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಪ್ರಮಾಣದಲ್ಲಿ ಅವಕಾಶ ಕೊಡಬೇಕಾಗಿತ್ತು. ಹಾಗಿದ್ದೂ ಕೂಡ ಉದಾರವಾಗಿ ಪ್ರತಿಪಕ್ಷದವರಿಗೆ ಹೆಚ್ಚು ಅವಕಾಶ ಕೊಟ್ಟಿರುವುದರಿಂದ ಅವರು ಇನ್ನೂ ಹೆಚ್ಚಿಗೆ ಅವಕಾಶ ಬೇಕೆಂದು ಒತ್ತಾಯ ಮಾಡಬಾರದಾಗಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾವು ಇಲ್ಲಿ ಬಂದಿರುವುದು ಔದಾರ್ಯ ಏನೂ ಅಲ್ಲ. ನಾವು ಇಲ್ಲಿಗೆ ನಮ್ಮನ್ನು ಚುನಾಯಿಸಿದ ಜನರ ಪರವಾಗಿ ಬಂದಿರುವುದು ಸರ್ಕಾರದ ಕಾರ್ಯಕಲಾಪಗಳನ್ನು ಚರ್ಚೆ ಮಾಡುವುದಕ್ಕೆ. ಆ ಕಡೆ ಬಹಳ ಜನ ಸದಸ್ಯರಿದ್ದರೂ, ಅವರ ಪರವಾಗಿ ಹನ್ನೊಂದು ಜನ ಮಂತ್ರಿಗಳಿದ್ದಾರೆ. ಅವರು ಎಲ್ಲ ವಿಷಯಗಳಿಗೂ ಉತ್ತರ ಕೊಡುತ್ತಾರೆ. ನಮ್ಮ ಪರವಾಗಿ ಯಾರೂ ಇಲ್ಲದೇ ಇರುವುದರಿರದ ನಾವೇ ಹೇಳಬೇಕು. ನಮ್ಮ ಪಾರ್ಟಿ ಅಧಿಕಾರದಲ್ಲಿದ್ದಿದ್ದರೆ ನಾವು ಹೀಗೆಲ್ಲ ಮಾಡುತ್ತಿರಲಿಲ್ಲ.

ಅಧ್ಯಕ್ಷರು.—ವಾದವನ್ನು ಒಪ್ಪಿಕೊಂಡರೆ ಯಾವುದೂ ಕೆಲಸವಾಗುವುದಿಲ್ಲ. ತಮ್ಮ ಪರವಾಗಿ ಸಹಾನುಭೂತಿಯುಂಟು. ಅದಕ್ಕೇ ನಿಮಗೆ ಬೇರೆ ಅವಕಾಶ ಕೊಡುತ್ತೇನೆಂದು ಹೇಳುತ್ತೇನೆ. ಈಗ ನಮ್ಮ ಮುಂದಿರುವ ವಿಷಯವನ್ನು ಮುಗಿಸೋಣ.

Sri J. H. SHAMSUDDIN.—Can the Chair have 'Sahanubhuthi' for one section of the House alone ?

ಅಧ್ಯಕ್ಷರು.—ಸಹಾನುಭೂತಿ ಎಲ್ಲ ಕಡೆಗೂ ಉಂಟು. ಆದರೆ ಆ ಕಡೆ ಸ್ವಲ್ಪ ಹೆಚ್ಚಿಗೆ ಇದೆ.

*ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಸ್ವಾಮಿ, ಕಳೆದ ಎರಡು ದಿನಗಳಿಂದ ಬೇಡಿಕೆಗಳ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅವರು ಮಾಡಿರತಕ್ಕಂಥ ಭಾಷಣಗಳಲ್ಲಿ ಕೆಲವು ಬಹಳ ಸ್ವಾರಸ್ಯವುಳ್ಳದ್ದಾಗಿವೆ. ಕೆಲವರು ಬಹಳ ಭಾವನಾ ಪೂರಿತವಾಗಿ ಮಾತನಾಡಿದ್ದಾರೆ. ಕೆಲವರು ಸಹಾನುಭೂತಿಯನ್ನು ಇಟ್ಟುಕೊಂಡು ಮಾತನಾಡಿದ್ದಾರೆ. ಇನ್ನು ಕೆಲವರು ತಮ್ಮ ಸ್ವಂತ ಅನುಭವದಿಂದ ಮಾತನಾಡಿದ್ದಾರೆ. ಕೆಲವು ಸದಸ್ಯರು ಮಾತ್ರ ಎಲ್ಲಿಯೋ ಹೇಳಿದ್ದನ್ನು ಕೇಳಿ ಊಹೆ ಮಾಡಿಕೊಂಡು ಮಾತನಾಡಿದ್ದಾರೆ. ಆದರೆ ಆರೀತಿ ಮಾತನಾಡಿದವರ ಸಂಖ್ಯೆ ಜಾಸ್ತಿಯಾಗಿದೆ ಎಂಬುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ಅವರು ಮಾತನಾಡಿದ್ದನ್ನು ನೋಡಿದರೆ ಅವರಲ್ಲಿ ಸಂಕುಚಿತ ಭಾವನೆಯು ಜಾಸ್ತಿಯಾಗಿದೆ ಎಂದು ಹೇಳಬೇಕಾಗಿದೆ. ಅದರೆ ಈರೀತಿ ಸ್ವಾರಸ್ಯ ಮಯವಾಗಿ ನಡೆದ ಚರ್ಚೆಗೆ ಈಗ ನಾನು ಉತ್ತರ ಕೊಡಬೇಕಾಗಿದೆ.

ಮೊಟ್ಟ ಮೊದಲನೆಯದಾಗಿ ಕೆಲವು ವಿಚಾರಗಳನ್ನು ಈ ಸಭೆಯ ಅವಗಾಹನೆಗೆ ತರಲು ನಾನು ಇಚ್ಛಿಸುತ್ತೇನೆ. ಈಗ ರಾಜ್ಯಾಂಗದ ಆಡಳಿತವು ಬದಲಾವಣೆಯಾಗಿದೆ, ನಾವು ನಿರ್ವಹಿಸಬೇಕಾಗಿರತಕ್ಕಂಥ ಕರ್ತವ್ಯ ಜಾಸ್ತಿಯಾಗಿದೆ, ಅದರ ಜೊತೆಗೆ ದೇಶದಲ್ಲಿ ನಾವು ಎದುರಿಸ ಬೇಕಾದ ಸಮಸ್ಯೆಗಳು ನಾನಾ ರೀತಿಯಾಗಿವೆ. ದೇಶದ ಮುಂದೆ ಇರತಕ್ಕಂಥ ಆರ್ಥಿಕ ಸಮಸ್ಯೆಗಳು ಏನೇನು ಇವೆ ಎಂಬುದನ್ನು ಅನೇಕ ಜನ ಸದಸ್ಯರು ಮರೆತಂತೆ ಕಾಣುತ್ತದೆ. ಸರ್ವ ಸಾಮಾನ್ಯವಾಗಿ ಜನ ಜೀವನ ಮಟ್ಟ ಜಾಸ್ತಿಯಾಗಬೇಕೆಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಂಡು ಈಗ ಉಂಟಾಗಿರುವ ಸಮಸ್ಯೆಗಳನ್ನು ಎದುರಿಸಿ ಸರ್ಕಾರ ಕೆಲಸ ಮಾಡುತ್ತಿದೆ ಎಂಬುದನ್ನು ಅನೇಕ ಸದಸ್ಯರು ಹೆಚ್ಚಾಗಿ ಮರೆತಂತೆ ಕಾಣುತ್ತದೆ. ಅನೇಕ ಸದಸ್ಯರು ಮಾಡಿರತಕ್ಕಂಥ ಟೀಕೆ ಟಿಪ್ಪಣಿಗಳನ್ನು ನೋಡಿದರೆ ಮೊದಲು ಯಾವರೀತಿ ಹಳೆಯ ಸಂಪ್ರದಾಯದ ರೀತಿಯಲ್ಲಿ ಟೀಕೆ ಮಾಡಿ ಹೇಳುತ್ತಿದ್ದರೋ ಅದೇ ಟೀಕೆ ಟಿಪ್ಪಣಿಗಳು ಈಗಲೂ ಬಹುಭಾಗ ಸಹ ನಡೆದಿವೆ. ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಿದ್ದಾರೆ. ಹೊಸದಾಗಿ ರಚನಾತ್ಮಕ ಸಲಹೆಗಳಿಂದ ಒಡಗೂಡಿದ್ದು ಏನೂ ಇದರಲ್ಲಿ ಇಲ್ಲ. ಮಂತ್ರಿಗಳ ಸಂಬಳದ ವಿಚಾರ, ಜಾತೀಯ ವಾದ, ಯಾರು ಯಾರಿಗೆ

(ಶ್ರೀ ಎಸ್. ನಿಜಲಿಂಗಪ್ಪ.)

ಕೆಲಸ ಕೊಡಲಿಲ್ಲ ಹೀಗೆ ಈ ತರಹದ ಟೀಕೆ ಮಾಡುವುದರಲ್ಲಿಯೇ ಅವರ ಹೆಚ್ಚಿನ ಕಾಲ ಖರ್ಚಾಗಿದೆ. ಅವಶ್ಯವಾಗಿ ಹೇಳತಕ್ಕಂಥ ಅನೇಕ ವಿಧಾಯಕ ಸೂಚನೆಗಳನ್ನು ಮಾಡಬಹುದಾಗಿತ್ತು, ಕೆಲವು ಸದಸ್ಯರು ಇಂತಹ ವಿಧಾಯಕ ಸಲಹೆಗಳನ್ನೂ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನ್ಯೂನತೆಗಳು ಏನು ಇವೆ, ಎಲ್ಲೆಲ್ಲಿ ಏನೇನು ಅನ್ಯಾಯ, ತೊಂದರೆಗಳು ಆಗಿವೆ, ಅಪ್ರಾಮಾಣಿಕತೆ ಎಷ್ಟು ನಡೆದಿದೆ ಎಂಬುದನ್ನು ತಿಳಿಸಿರುವುದಕ್ಕೆ ಅವುಗಳಿಗೆಲ್ಲಾ ಉತ್ತರ ಕೊಡದೇ ಹೋದರೆ ಸರಕಾರ ಎಷ್ಟರ ಮಟ್ಟಿಗೆ ತನ್ನ ಕರ್ತವ್ಯವನ್ನು ನ್ಯಾಯವಾಗಿ ನಿರ್ವಹಿಸಿದೆ, ಸೂಕ್ತ ಕ್ರಮಗಳನ್ನು ತೆಗೆದುಕೊಂಡಿವೆ ಎಂಬುದನ್ನು ತಿಳಿಸಿದಂತಾಗುವುದಿಲ್ಲ. ಎಲ್ಲೆಲ್ಲ ಅಯೋಗ್ಯ ವರ್ತನೆ, ಅಪ್ರಾಮಾಣಿಕತೆ ಕಂಡುಬಂದಿದೆಯೋ ಅಂಥವರಿಗೆಲ್ಲಾ ಶಿಕ್ಷೆ ಮಾಡಲಾಗಿದೆ. ಮುಂದೆಯಾದರೂ ಆ ರೀತಿಯಾಗಿ ಮಾಡಲಾಗುವುದು ಮತ್ತು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಒಂದು ವಿಚಾರವನ್ನು ಕೆಲವರು ನಮಗೆ ವಿಶೇಷವಾಗಿ ಬೋಧನೆ ಮಾಡಿದ್ದಾರೆ. ನಮ್ಮಲ್ಲಿ ಪ್ರಾಮಾಣಿಕತೆ ಇಲ್ಲ, ಜಾತೀಯತೆ ಹೆಚ್ಚಾಗಿ ಇದೆ, ಕೆಲಸದಲ್ಲಿ ದಕ್ಷತೆಯು ಇಲ್ಲ, ಕೆಲಸ ಮಾಡುತ್ತಿರುವವರಲ್ಲಿ ಸಾಕಷ್ಟು ಗಮನ ಕೊಡುತ್ತಿಲ್ಲ ಎಂದು ಮುಂತಾಗಿ ಹೇಳಿದರು. ಈ ರೀತಿಯಾಗಿ ಹೇಳುವ ಅಧಿಕಾರವು ಅವರಿಗೆ ಇದೆ. ಅವಕಾಶವೂ ಇದೆ. ನಮ್ಮಲ್ಲಿ ಪ್ರಾಮಾಣಿಕತೆಯಿಲ್ಲ, ಸರ್ಕಾರದ ಕೆಲಸದಲ್ಲಿ ದಕ್ಷತೆಯು ಇಲ್ಲ ಎಂಬುದನ್ನು ಕೆಲವರು ಸದಸ್ಯರು ಹೇಳಿದ್ದನ್ನು ಕೇಳಿ ನನಗೆ ಅತ್ಯಂತ ಆಶ್ಚರ್ಯವಾಯಿತು. ಕೆಲವು ಸದಸ್ಯರ ಬಾಯಿಂದ ಇಂಥ ಮಾತುಗಳು ಬಂದಾಗ ನನಗೆ ಬಹಳ ಆಶ್ಚರ್ಯವುಂಟಾಯಿತು. ಅವರಿಂದ ಈ ಪಾಠ ಕಲಿಯಬೇಕಾದದ್ದು ತೀರ ಅನಾವಶ್ಯಕವಾಗಿದೆ. ಆಡಳಿತದಲ್ಲಿ ನ್ಯೂನತೆಗಳೇ ಇಲ್ಲವೆಂದು ನಾನು ಹೇಳುವದಿಲ್ಲ. ಎಲ್ಲರೂ ಅಯೋಗ್ಯರು ಅಪ್ರಾಮಾಣಿಕರು ಎಂದು ಮಾತ್ರ ಹೇಳುವದಕ್ಕಾಗುವದಿಲ್ಲ. ನಾವು ಮಾಡುತ್ತಿರುವ ಕಾರ್ಯವನ್ನು ತಿಳಿದುಕೊಳ್ಳುವುದಕ್ಕೆ ಕೆಲವು ಕಾಲ ಬೇಕಾಗುತ್ತದೆ. ಪ್ರಜಾಪ್ರಭುತ್ವದ ಆಡಳಿತವು ನಮ್ಮ ದೇಶದಲ್ಲಿ ಪ್ರಾರಂಭವಾಗಿ ಹತ್ತು ವರ್ಷಗಳಾದವು. ನೂರಾರು ವರ್ಷಗಳಿಂದ ಪರದಾಸ್ಯಕ್ಕೊಳಗಾಗಿದ್ದ ಆಡಳಿತ ಯಂತ್ರದಲ್ಲಿ ಸ್ವಲ್ಪಮಟ್ಟಿಗೆ ದಕ್ಷತೆಯ ಅಭಾವ ಇದೆ, ಅಪ್ರಾಮಾಣಿಕತೆಯು ಇದೆ. ಪರದಾಸ್ಯ ಮನೋಭಾವದಲ್ಲಿ ಈ ಆಡಳಿತ ಯಂತ್ರ ಬೆಳೆದುಬಂದಿದೆ. ಅದು ಇಂದೇ ಹೋಗಬೇಕೆಂಬುದು ಮನುಷ್ಯ ಸ್ವಭಾವಕ್ಕೆ ವಿರೋಧವಾದುದು. ಈಗ ಉಂಟಾಗಿರುವ ಹೊಸ ಪರಿಸ್ಥಿತಿಗೆ ಅನುಗುಣವಾಗಿ ಹೊಸ ಮನೋಭಾವ ನಿರ್ಮಾಣವಾಗಬೇಕಾಗಿದೆ. ಮನುಷ್ಯನ ಸ್ವಭಾವದಲ್ಲಿ ಪರಿವರ್ತನೆಯಾಗುವದು ಬಹಳ ಕಠಿಣ. ಆದರೆ ಎಲ್ಲ ತೊಂದರೆಗಳನ್ನೂ ಪರಿಹಾರ ಮಾಡುವದಕ್ಕೆ ಅತ್ಯಂತ ನಿಷ್ಠೆಯಿಂದ ನಾವು ಪ್ರಯತ್ನ ಮಾಡುತ್ತಿದ್ದೇವೆಂದು ನಾನು ಹೇಳಬಲ್ಲೆ.

ಕೆಲವು ಸದಸ್ಯರ ಟೀಕೆಗಳನ್ನು ನೋಡಿದರೆ ಬಹುಶಃ ಅವರು ತಮ್ಮ ಕರ್ತವ್ಯ ಏನು ಎಂಬುದನ್ನು ತಿಳಿದುಕೊಳ್ಳದೆ ಟೀಕೆ ಮಾಡಿದರು ಎಂದು ಕಾಣುತ್ತದೆ. ಕಾಂಗ್ರೆಸ್ಸಿನಲ್ಲಿ ಒಡಕು ನ್ಯೂನತೆಗಳು ಇರುವದು ಸರಿಯಲ್ಲ ಮತ್ತು ಕಾಂಗ್ರೆಸ್ ಪಕ್ಷದಲ್ಲಿ ಒಮ್ಮತ ನಿರ್ಧಾರಗಳಿಲ್ಲದೆ ಚುನಾವಣೆಗಳು ನಡೆಯಲು ಅವಕಾಶವಾಗಿದೆ ಎಂದು ಟೀಕಿಸಿದರು. ಕಾಂಗ್ರೆಸ್ ಪಕ್ಷದಲ್ಲಿ ಚುನಾವಣೆ ನಡೆಯದೇ ಹೋದರೆ ಪಕ್ಷದಲ್ಲಿರುವ ಸದಸ್ಯರಿಗೆ ಸ್ವಾತಂತ್ರ ವಿಚಾರಕ್ಕೆ ಅವಕಾಶವಿಲ್ಲ. ನೀವೆಲ್ಲಾ ಒಂದೇ ರೀತಿಯಲ್ಲಿ ಮೆಷಿನರಿಯಹಾಗೆ ನಡೆಯುತ್ತೀರಿ ಎಂದೂ ಹೇಳುತ್ತಾರೆ; ಮತ್ತು ಚುನಾವಣೆ ನಡೆದರೆ ನಮ್ಮಲ್ಲಿ ಒಡಕು ಇದೆ ಎಂದೂ ಹೇಳುತ್ತಾರೆ. ಹೇಗೋ ಏನೋ ಕಾಂಗ್ರೆಸ್ ಪಕ್ಷವನ್ನೂ ಮತ್ತು ಸರಕಾರವನ್ನೂ ಬೈಯಬೇಕು, ಟೀಕಿಸಬೇಕು ಎಂಬ ಮನೋಭಾವನೆ ಅವರಲ್ಲಿ ಇದೆ. ಈ ರೀತಿಯಾಗಿ ಟೀಕಿಸುವುದಕ್ಕೆ ಬೈಯ್ಯುವುದಕ್ಕೆ ಅವರಿಗೊಂದು ಅವಕಾಶ ಈ ಸಭೆಯಲ್ಲಿ ಇದೆ, ನಾವು ಎಷ್ಟೇ ಒಳ್ಳೆಯ ಕೆಲಸಮಾಡಿದ್ದರೂ ಅದು ಅವರಿಗೆ ಕಾಣುವದಿಲ್ಲ. ಒಂದು ಗಾದೆಯ ಮಾತು ಇದೆ. ನಿಜವಾಗಿ ಮಲಗಿದಾತನನ್ನು ಕೂಗಿದರೆ ಎಬ್ಬಿಸಬಹುದು. ಆದರೆ ಬೇಕಾಗಿ ಕಣ್ಣುಮುಚ್ಚಿಕೊಂಡು ಮಲಗಿದ್ದರೆ ಉರುಳಾಡಿಸಿದರೂ ಏಳುವುದಿಲ್ಲ, ಕಣ್ಣು ಬಿಡುವುದಿಲ್ಲ. ಯಾವ ಯಾವ ಒಳ್ಳೆಯ ಕೆಲಸಗಳನ್ನು ಮಾಡಿದ್ದೇವೆಯೋ ಅವುಗಳನ್ನೆಲ್ಲಾ ನೋಡಬೇಕು. ನೋಡಿ ಹೇಳತಕ್ಕಂಥ ಮನೋಭಾವನೆ ಇರಬೇಕು. ಸುಮ್ಮನೆ ವಿರೋಧಿ ಪಕ್ಷದವರು ಕಣ್ಣು ಮುಚ್ಚಿಕೊಂಡು ಎಷ್ಟೇ ಹೇಳಿದರೂ ಅದನ್ನು ಒಪ್ಪಿಕೊಳ್ಳುವುದಿಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಇದು ತಮ್ಮ ಪಕ್ಷಕ್ಕೂ ಅನ್ವಯಿಸುವುದು.

ಶ್ರೀ ಎಸ್. ನಿಜಲಿಂಗಪ್ಪ.—ನೀವೇ ಯೋಚಿಸಿ. ನಿರೀಕ್ಷಣೆಯನ್ನು ಮಾಡಿರುವುದಕ್ಕಿಂತ ಹೆಚ್ಚು ಒಳ್ಳೆಯ ಕೆಲಸಗಳು ಆಗಿವೆ. ಬೇಕಾದಷ್ಟು ಕೆಲಸಗಳಾಗಿವೆ. ದೇಶದಲ್ಲಿ ಈಗ ಆಹಾರ ತಿನ್ನುವುದು ಹೆಚ್ಚಾಗಿದೆ. ದಿನವೊಂದಕ್ಕೆ 12 ಔನ್ಸು ಆಹಾರ ತಿನ್ನುತ್ತಿದ್ದವರು ಕಳೆದ ಆರೇಳು ವರ್ಷಗಳಿಂದ 14½ ಔನ್ಸು ಆಹಾರ ತಿನ್ನುತ್ತಿದ್ದಾರೆ. 12-13 ಗಜ ಬಟ್ಟೆ ಹಾಕುತ್ತಿದ್ದವರು ಈಗ ಸರಾಸರಿ 18 ಗಜ ಬಟ್ಟೆ ಉಪಯೋಗಿಸುತ್ತಿದ್ದಾರೆ. ಸಕ್ಕರೆ ಉತ್ಪತ್ತಿಯು ಒಂಬತ್ತು ಲಕ್ಷ ಟನ್ ಇದ್ದುದು ಇವತ್ತು 18 ಲಕ್ಷ ಟನ್ ಆಗಿದೆ. ಏಳು ಲಕ್ಷ ಟನ್ ಕಾಫಿ ಕುಡಿಯುತ್ತಿದ್ದ ಜನ ಈಗ 27 ಲಕ್ಷ ಟನ್ ಕಾಫಿ ಕುಡಿಯುತ್ತಿದ್ದಾರೆ.

Sri Y. VEERAPPA.—Bad habit.

ಶ್ರೀ ಎಸ್. ನಿಜಲಿಂಗಪ್ಪ.—ಇನ್ನೊಂದು ವಿಚಾರ. ಹಿಂದೆ ಅನ್ನ ಕಾಣದಿದ್ದವರು ನೂರಾರು ಜನರು ಈಗ ಅಕ್ಕಿಯ ಊಟ ಮಾಡುತ್ತಿದ್ದಾರೆ. ಇದು ಹೇಗೆ? ಜನಜೀವನಮಟ್ಟ ಏರಿ ಜನತೆಗೆ ಸುಖವಾಗುವಂತೆ ಅನುಕೂಲತೆಗಳು ಉಂಟಾಗಿವೆ. ಇದು ಸುಮ್ಮನೆ ಬರುವುದಿಲ್ಲ. ಹತ್ತು ವರ್ಷಗಳಿಂದ ಅತ್ಯಂತ ನಿಷ್ಠೆಯಿಂದ ನಾವು ಕೆಲಸ ಮಾಡಿದ್ದರ ಫಲವಾಗಿ ಈ ರೀತಿಯಾಗಿದೆ. ಸರಕಾರವು ಕರ್ತವ್ಯ ದೃಷ್ಟಿಯಿಂದ ದಕ್ಷತೆಯಿಂದ ಸೇವೆ ಸಲ್ಲಿಸಿದುದರ ಫಲವಾಗಿ ಜನತೆಗೆ ಅನುಕೂಲತೆಗಳು ಉಂಟಾಗಿವೆ.

ಶ್ರೀ ಕೆ. ಕೆಂಚಪ್ಪ.—ಉತ್ಪತ್ತಿ ಹೆಚ್ಚಾಗಿದ್ದರೆ ಆಹಾರ ಧಾನ್ಯಗಳ ಧಾರಣೆವಾಸಿ ಏಕೆ ಹೆಚ್ಚಾಗಿದೆ?

ಶ್ರೀ ಎಸ್. ನಿಜಲಿಂಗಪ್ಪ.—ಶೇಕಡಾ 15ರಷ್ಟು ಆಹಾರ ಹೆಚ್ಚಾಗಿದೆ. ರೈತ ಬೆಳೆಯುವ ಖರ್ಚು ಸಹ ಹೆಚ್ಚಿದೆ. ಧಾರಣೆವಾಸಿ ಜಾಸ್ತಿಯಾಗಿದೆ. ಊಟ ಮಾಡತಕ್ಕಂಥ ಧಾನ್ಯದ ಬೆಲೆ ಹೆಚ್ಚಾಗಬಾರದು. ಅಕ್ಕಿಯ ಅಭಾವ ಇಲ್ಲ. ಧಾನ್ಯದ ಪೂರೈಕೆ ಕಡಮೆಯಾಗಬಾರದು. ದೇಶದಲ್ಲಿ ಕಳೆದ ಐದು ವರ್ಷಗಳಲ್ಲಿ ಬೆಳೆದದ್ದನ್ನು ನೋಡಿದರೆ ಶೇಕಡಾ 14-15ರಷ್ಟು ಜಾಸ್ತಿ ಬೆಳೆದಿದ್ದಾರೆ. ಆದರೆ ತಿನ್ನುವವರ ಸಂಖ್ಯೆ ಜಾಸ್ತಿಯಾಗಿದೆ. ಅದರಿಂದ demand ಜಾಸ್ತಿ ಆಗಿದೆ. ಜನಸಂಖ್ಯೆ ಜಾಸ್ತಿಯಾದಂತೆ ಉತ್ಪತ್ತಿ ಏನೂ

ಕಡಮೆಯಾಗಿಲ್ಲ. ಜನಸಂಖ್ಯೆ ಹೆಚ್ಚುತ್ತಿದ್ದಂತೆ ಹೆಚ್ಚು ಆಹಾರ ಉತ್ಪಾದನೆಗೆ ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ರೈತರಿಗೆ ಅನುಕೂಲತೆಯನ್ನು ಒದಗಿಸ ಲಾಗುತ್ತಿದೆ. ಎಲೆಕ್ಟ್ರಿಸಿಟಿ ಒದಗಿಸುವುದರಿಂದ, ಕೆರೆಗಳನ್ನು ದುರಸ್ತು ಮಾಡುವುದರಿಂದ, ನೀರಾವರಿ ಸೌಲಭ್ಯಗಳು ದೊರೆಯುವಂತೆ ಮಾಡುವುದರಿಂದ, ಈಗ ಹಳ್ಳಿಗಳ ಪರಿಸ್ಥಿತಿಯನ್ನು ಸುಧಾರಿಸಲಾಗುತ್ತಿದೆ. ಆಹಾರ ಅಭಾವದ ಪರಿಸ್ಥಿತಿಯು ಉಂಟಾಗಿರುವುದು ಸ್ವಾಭಾವಿಕ. ಆಹಾರ ಅಭಾವವನ್ನು ತಪ್ಪಿಸಲು ಹತ್ತು-ಹದಿನೈದು ವರ್ಷಗಳ ಕಾಲ ಬೇಕು. ಆಹಾರ ಅಭಾವ ಪೂರ್ತಿಯಾಗಿ ಮಾಯವಾಗಲು ಇನ್ನೂ ಹತ್ತು-ಹದಿನೈದು ವರ್ಷಗಳು ಬೇಕಾಗುವುದು. ಪರಿಸ್ಥಿತಿಯು ಬದಲಾವಣೆ ಆಗುತ್ತಿರುವ ಕಾಲದಲ್ಲಿ, ನಿರ್ಮಾಣ ಕಾರ್ಯ ನಡೆಯುತ್ತಿರುವ ಕಾಲದಲ್ಲಿ ಬೆಲೆಗಳು ಏರುವುದು ಸ್ವಾಭಾವಿಕವಾದುದು. ಆದ್ದರಿಂದ ಈ ಒಂದು ಪ್ರಶ್ನೆ ನಮ್ಮಲ್ಲಿ ಹೆಚ್ಚಿಗೆ ಉದ್ಭವವಾಗಿದೆ. ರೈತರ ಹಿತರಕ್ಷಣೆಯಾಗಬೇಕು. ಉತ್ಪಾದನೆ ಮಾಡುವವರ ಹಿತರಕ್ಷಣೆಯಾಗಬೇಕು. ಹೀಗೆ ಎಲ್ಲಾ ಪಕ್ಷಗಳ ಹಿತರಕ್ಷಣೆಯಾಗಬೇಕಾಗಿದೆ. ನಮ್ಮ ಮೈಸೂರು ಸಂಸ್ಥಾನ ಒಂದು ಸಣ್ಣ ಪ್ರದೇಶವಲ್ಲ. ಅನೇಕ ರಾಜ್ಯಗಳನ್ನೆಲ್ಲಾ ಒಂದಾಗಿ ಮಾಡಿದ್ದರಿಂದ ಅನೇಕ ಪ್ರಶ್ನೆಗಳು ನಮ್ಮ ಮುಂದೆ ಬಂದಿವೆ. ಜನರ ಹತ್ತಿರ ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾದುವು. ನಮ್ಮ ಮುಂದಿರುವ ಈ ಪ್ರಶ್ನೆಗಳನ್ನು ಬಗೆಹರಿಸಬೇಕಾದರೆ ಒಂದು ಸಾವಿರ ವರ್ಷವಾದರೂ ಆಗುವುದಿಲ್ಲ. ಆದರೆ ರಸ್ತೆಗಳಿಗೆ ಎಷ್ಟು ಖರ್ಚಾಗಿದೆ, ಕೆರೆ ಕಟ್ಟೆಗಳಿಗೆ ಎಷ್ಟು ಖರ್ಚಾಗಿದೆ, ಸ್ಕೂಲುಗಳಿಗೆ ಎಷ್ಟು ಖರ್ಚಾಗಿದೆ, ಆಸ್ಪತ್ರೆಗಳಿಗೆ ಎಷ್ಟು ಖರ್ಚಾಗಿದೆ, ಎಂಬುದನ್ನು ನೋಡಬೇಕು.

ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಹಿಂದೆ ವರಮಾನ ಎಷ್ಟಿತ್ತು?

ಶ್ರೀ ಎಸ್. ನಿಜಲಿಂಗಪ್ಪ.—ಹಿಂದೆ ವರಮಾನ ಕಡಮೆಯಿತ್ತು; ಆದರೆ ಒದಗಿಸಿರುವುದು ಎಷ್ಟಿತ್ತು ಎಂಬುದನ್ನು ನೋಡಿದ್ದೇನೆ. ಈಗ ದೇಶದಲ್ಲಿ ನಾನಾ ರೀತಿಯಲ್ಲಿ ಉತ್ಪತ್ತಿಯಲ್ಲಿ ಜಾಸ್ತಿಯಾಗಬೇಕಾಗಿದೆ. ಆದ್ದರಿಂದ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನೇನು ಸೂಚನೆಗಳನ್ನು ಕೊಡಬೇಕೋ ಅವುಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅವನ್ನು ನಾನು ಅತ್ಯಂತ ಸಂತೋಷದಿಂದ, ನಮ್ರತೆಯಿಂದ ಒಪ್ಪಿಕೊಳ್ಳುತ್ತೇನೆ, ಮತ್ತು ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಕೆಲಸಗಳು ಆಗಬೇಕಾದರೆ ಸರ್ಕಾರದ ಯಂತ್ರ ಯೋಗ್ಯವಾಗಿರಬೇಕು. ಆ ಯಂತ್ರ ಇವೊತ್ತಿನದಲ್ಲ. ಆ ಯಂತ್ರ ಬಹುಕಾಲದಿಂದ ನಡೆದು ಬಂದಿದೆ. 200ವರ್ಷಗಳಿಂದ ಬಂದಿದೆ. ಕಮ್ಯುನಿಸ್ಟ್ ಪಕ್ಷದವರು ಕೇವಲ ಹಿಂಸಾ ಮಾರ್ಗದಿಂದ ಆಡಳಿತವನ್ನು ಬದಲಾಯಿಸುತ್ತೇವೆಂದು ಹೇಳುತ್ತಾರೆ. ಆದರೆ ಅದು ಸಾಧುವಾದ ಮಾರ್ಗವಲ್ಲ. ಅಹಿಂಸಾ ಮಾರ್ಗದಲ್ಲಿ ಸರ್ಕಾರದ ಯಂತ್ರವನ್ನು ಬದಲಾಯಿಸಬೇಕು, ಆಡಳಿತವನ್ನು ಬದಲಾಯಿಸಬೇಕು ಎಂಬ ದೃಷ್ಟಿಯಿಂದ ನಾವು ಕೆಲಸ ಮಾಡಬೇಕಾಗಿದೆ. ಅನೇಕ ಸಮಸ್ಯೆಗಳು ಉದ್ಭವಿಸಿರುವುದರಿಂದ ಅವನ್ನು ಬದಲಾಯಿಸಬೇಕಾಗಿದೆ. ಆದರೆ ಆಡಳಿತ ಯಂತ್ರವೇನೋ ಯೋಗ್ಯವಾಗಿದೆ. ಕಾಂಗ್ರೆಸ್ಸಿನ ಮೇಲೆ ಅನೇಕ ತರಹ ಟೀಕೆಟಿಪ್ಪಣಿಗಳನ್ನು ಮಾಡಿದ್ದಾರೆ. ಈ ಹನ್ನೊಂದು ಜನ ಮಂತ್ರಿಗಳಲ್ಲಿ ಏನೋ ವ್ಯತ್ಯಾಸ ಭಿನ್ನಾಭಿಪ್ರಾಯಗಳು ಇವೆಯೆಂದು ಊಹಿಸಿದ್ದಾರೆ. ಆದರೆ ಈಗ ನಮ್ಮ ಮಂತ್ರಿಮಂಡಲದಲ್ಲಿ ಅಂತಹ ಯಾವ ವಿಧವಾದ ಭಿನ್ನಾಭಿಪ್ರಾಯಗಳೂ ಇಲ್ಲವೆಂದು ನಾನು ಹೇಳಬಯಸುತ್ತೇನೆ.

ಶ್ರೀ ಎಂ. ರಾಮಪ್ಪ.—ಹಾಗೇನಾದರೂ ಭಿನ್ನಾಭಿಪ್ರಾಯಗಳು ಇಲ್ಲದಿದ್ದರೆ ಬಹಳ ಸಂತೋಷ.

ಶ್ರೀ ಎಸ್. ನಿಜಲಿಂಗಪ್ಪ.—ರಾಮಪ್ಪನವರು ಬಹಳ ಒಳ್ಳೆಯ ಹುಡುಗರು ಎಂದು ನನಗೆ ಗೊತ್ತು.

ಅಧ್ಯಕ್ಷರು.—ಅವರು ಅಷ್ಟು ಹುಡುಗರಾಗಿ ಕಾಣುವುದಿಲ್ಲವಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಹಾಗಾದರೆ ಅವರು ನನಗೆ ಸರಿಸಮಾನರು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಏನು ಸ್ವಾಮಿ ಈ ಸಭೆಯಲ್ಲಿ ಹುಡುಗರು ಎಂದು ಹೇಳುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಅವರನ್ನು ಎತ್ತಿಕ್ಕುವುದಕ್ಕೆ ಹೋಗಬೇಡಿ. ಕೆಲವರು ಭಾಷಣಗಳನ್ನು ಮಾಡುವ ಸಂದರ್ಭದಲ್ಲಿ ಹೇಳಿದರು, ಗುಮಾಸ್ತರಿಗೆ ಬಹಳ ಅನ್ಯಾಯವಾಗಿದೆ, ಕೆಲವು ಅಧಿಕಾರಿಗೆ ಅನ್ಯಾಯವಾಗಿದೆ, ಕೂಲಿಗಾರರಿಗೆ ಅನ್ಯಾಯವಾಗಿದೆ ಮತ್ತು ಕೂಲಿಗಾರರ ಮೇಲಿರುವ ಆಫೀಸರುಗಳಿಗೆ ಅನ್ಯಾಯವಾಗಿದೆ ಎಂದು. ಹಾಗೆ ಅವರು ರಾಜಕೀಯ ದೃಷ್ಟಿಯಿಂದ ಮಾತನಾಡಿದ್ದಾರೆ. ಅದರಿಂದ ನಮಗೇನೂ ತೊಂದರೆಯಿಲ್ಲ. ಸರ್ಕಾರದವರು ಏನೇನು ಮಾಡುತ್ತಿದ್ದಾರೆ ಎಂಬುದು ಕೂಲಿಗಾರರಿಗೇ ಗೊತ್ತಿದೆ. ಈಗ ಐದು ಭಾಗಗಳು ಎಂದರೆ ಬೊಂಬಾಯಿನ ಕೆಲವು ಭಾಗಗಳು, ಮದರಾಸಿನ ಕೆಲವು ಭಾಗಗಳು, ಕೊಡಗಿನ ಕೆಲವು ಭಾಗಗಳು, ಹಳೆಯ ಮೈಸೂರಿನ ಕೆಲವು ಭಾಗಗಳು ಇವೆಲ್ಲವೂ ಸೇರಿ ಒಂದು ಪ್ರಾಂತ್ಯವಾಗಿದೆ. ಈ ಪ್ರಾಂತ್ಯ ಆಗುವ ಸಂದರ್ಭದಲ್ಲಿ ಅಧಿಕಾರಿಗಳ ಸಂಬಳದ ಮಟ್ಟ ಮತ್ತು ಅವರಿಗೆ ದೊರೆಯುವ ಅಲೋಯನ್ಸ್ ವಗೈರೆಯಲ್ಲಿ ಭಿನ್ನತೆ ಇದೆ. ಬೊಂಬಾಯಿನಲ್ಲಿ ಹೆಚ್ಚಾಗಿದೆ. ಅಲ್ಲಿಂದ ಬಂದ ಅನೇಕ ನೌಕರರಿಗೆ ಅಸಮಾಧಾನ ಉಂಟಾಗಿದೆ. ಬೊಂಬಾಯಿನಿಂದ ಬಂದಿರುವವರಿಗೆ ತಮಗೆ ಸಂಬಳಸಾರಿಗೆಯಲ್ಲಿ ಎಲ್ಲಿ ಕಡಮೆ ಮಾಡುತ್ತಾರೋ ಎಂದು ಭಯವಿದೆ. ಮೈಸೂರಿನವರಿಗೂ ಬೊಂಬಾಯಿನವರ ಸಂಬಳದ ದರ್ಜೆಗೆ ಜಾಸ್ತಿ ಮಾಡುತ್ತಾರೋ ಇಲ್ಲವೋ ಎಂಬ ಒಂದು ರೀತಿಯ ಭಯ ಇದೆ. ಈ ವಿಚಾರವನ್ನು ಹೋದಸಾರಿಯೇ ಸ್ಪಷ್ಟಪಡಿಸಿದ್ದೇನೆ. ಯಾರುಯಾರಿಗೆ ಎಷ್ಟೆಷ್ಟು ಸಂಬಳ ಬರುತ್ತಿತ್ತೋ ಅದರಲ್ಲಿ ಏನೂ ತೊಂದರೆಯಾಗದಂತೆ ನೋಡಿಕೊಳ್ಳುತ್ತೇನೆಂದು ಹೇಳಿದ್ದೆ. ಆ ರೀತಿ ಅವರ ಸಂಬಳಸಾರಿಗೆಗಳನ್ನು ಕಡಮೆ ಮಾಡುವುದಿಲ್ಲ. ಯಾರಿಗೆ ಕಡಮೆ ಇದೆಯೋ ಅವರಿಗೆ ಜಾಸ್ತಿ ಮಾಡಿದ್ದೇವೆ. ನಮ್ಮ ಸ್ನೇಹಿತರು ಹೇಳಿದರು, ನಮ್ಮ ಸರ್ಕಾರದವರು ಬರೀ ಹೆಚ್ಚಿನದರ್ಜೆಯ ನೌಕರರಿಗೇ ಸಂಬಳಕ್ಕಾಗಿ ಹೆಚ್ಚು ಖರ್ಚಾಗುತ್ತದೆ ಎಂದು ಸಾಮಾನ್ಯವಾಗಿ ನೋಡುವುದಾದರೆ ಕೆಳದರ್ಜೆ ನೌಕರರ ಸಂಬಳಕ್ಕೇ ಜಾಸ್ತಿ ಖರ್ಚಾಗುತ್ತದೆ. ಸ್ಕೂಲು ಮಾಸ್ತರುಗಳಿಗೆ ಹೆಚ್ಚಿಗೆ ಹಣ ಹೋಗುತ್ತದೆ. ಸಣ್ಣಸಣ್ಣ ಗುಮಾಸ್ತರಿಗೆ ಹೋಗುತ್ತದೆ. ಹೀಗೆ ನಾಲ್ಕು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದೇವೆ. ಆ ರೀತಿ ಖರ್ಚುಗಳನ್ನು ಮಾಡಬೇಡವೇ? ಮೇಲಿನ ದರ್ಜೆಯವರು ಸಾಮಾನ್ಯವಾಗಿ ಕಣ್ಣಿಗೆ ಕಾಣಿಸುತ್ತಾರೆ. ಅದಕ್ಕೆ ಒಂದು ಹೋಲಿಕೆಯನ್ನು ಕೊಡುತ್ತೇನೆ. ದೇವಸ್ಥಾನದ ಗೋಪುರವನ್ನು ನೋಡುತ್ತಾರೆಯೇ ವಿನಾ ಭಾರವನ್ನು ಹೊತ್ತಿರುವ ಕಂಬಗಳನ್ನು ನೋಡುವುದಿಲ್ಲ. ನಮ್ಮ ದೇಶದಲ್ಲಿ ಕೆಳದರ್ಜೆ ಸಂಬಳದ ನೌಕ

(ಶ್ರೀ ಎಸ್. ನಿಜಲಿಂಗಪ್ಪ.)

ರರು ಸಣ್ಣಸಣ್ಣ ಸಂಬಳ ಪಡೆಯುವವರು ಹೆಚ್ಚಿಗೆ ಇದ್ದಾರೆ. ಅವರ ಜೀವನ ಅನುಕೂಲವಾಗಬೇಕು, ಅವರು ಸುಖವಾಗಿರಬೇಕು. ಅದಕ್ಕೆ ಅವರಿಗೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಪೋಲೀಸಿನವರು ಬೇಡವೆ? ಸ್ಕೂಲ್‌ಮಾಸ್ಟರುಗಳು ಬೇಡವೆ? ಗುಮಾಸ್ತರುಗಳು ಬೇಡವೆ? ಡಾಕ್ಟರುಗಳು ಬೇಡವೆ? ಸುಮ್ಮನೆ ಸಂಬಳಕ್ಕಾಗಿ ಜಾಸ್ತಿ ಖರ್ಚಾಗುತ್ತದೆ ಎನ್ನುವ ಧೋರಣೆ ಅಥವಾ ಟೀಕೆಗೆ ಅರ್ಥವಿಲ್ಲ. ಅವರಿಗೆ ಜಾಸ್ತಿ ಮಾಡಬೇಕೆನ್ನುವ ಉದ್ದೇಶದಿಂದಲೇ ಜಾಸ್ತಿ ಮಾಡಿದ್ದೇವೆ. ನನ್ನ ವೈಯಕ್ತಿಕ ದೃಷ್ಟಿಯಿಂದ ಹೇಳುವುದಾದರೆ ಯಾವ ಒಬ್ಬ ನೌಕರನಿಗೂ ಇನ್ನು ಕೆಲವೇ ವರ್ಷಗಳೊಳಗೆ 100 ರೂಪಾಯಿಗಳಿಗಿಂತಲೂ ಕಡಮೆ ಸಂಬಳ ಇರಬಾರದು ಎಂದು ನನ್ನ ಅಭಿಪ್ರಾಯ. ಬಹುಶಃ ಆ ಸ್ಥಿತಿಯು ಜನರು ನಿರೀಕ್ಷಣೆ ಮಾಡುವ ಕಾಲಕ್ಕಿಂತಲೂ ಬೇಗನೆ ಬರಬಹುದೆಂದು ನನಗನ್ನಿಸುತ್ತದೆ. ಇವೊತ್ತು ಮಂತ್ರಿಗಳಿಗೆ 800-900 ರೂಪಾಯಿಗಳ ಸಂಬಳ ಜಾಸ್ತಿ ಎಂದು ಸಣ್ಣಪುಟ್ಟ ಯೋಚನೆಯಿಂದ ಹೇಳತಕ್ಕದ್ದು ಹಳೆಯ ಕಾಲದ ಮಾತು. ಇವೊತ್ತು ನಾವು ದೊಡ್ಡ ಜನಾಂಗವಾಗಿದ್ದೇವೆ. ನಮ್ಮ ದೇಶದ ಆದಾಯ 60 ಕೋಟಿ ರೂಪಾಯಿಗಳಷ್ಟು ಆಗಿದೆ. ಅದಕ್ಕೆ ತಕ್ಕಹಾಗೆ ಖರ್ಚು ಮಾಡಿದ್ದೇವೆ. ನಮ್ಮ ಕೈಗಾರಿಕೆಗಳು ಹೆಚ್ಚಿಗೆ ಬೆಳೆಯಬೇಕು. ತೋಟತುಡಿಕೆಗಳು ಅಭಿವೃದ್ಧಿಯಾಗಬೇಕು. ಜಮೀನಿರುವವರಿಗೆ ರೈತರಿಗೆ ಸಾಲದ ರೂಪವಾಗಿ ಹಣ ಸಹಾಯ ಮಾಡುವುದು ನಮ್ಮ ಕರ್ತವ್ಯ. ಆ ದೃಷ್ಟಿಯಿಂದ ಖರ್ಚು ಮಾಡಿದ್ದೇವೆ. ಯಾವ ಮನುಷ್ಯ ಸಂಪಾದನೆ ಮಾಡಲಾರ, ಯಾರು ದುಡಿಯಲಾರ, ಯಾರು ದಕ್ಷತೆಯಿಂದ ಕೆಲಸ ಮಾಡಲಾರ, ಯಾರು ಹೊಟ್ಟೆಗೆ ಇಲ್ಲ ಎಂದು ಹೇಳುತ್ತಾನೋ ಅಂತಹವರನ್ನು ಸಲಹುವಂತಹ ಮತ್ತು ಅವರಲ್ಲಿ ಒಂದು ಹೊಸ ಮನೋಭಾವವನ್ನು ಉಂಟುಮಾಡುವಂತಹ ಸಮಾಜವನ್ನು ಕಟ್ಟಲು ಹೊರಟಿದ್ದೇವೆ. ಹೇಗೆ ಒಬ್ಬ ಕೂಲಿಗಾರ ತನ್ನ ಕೈಲಾಗದ ಮಗನನ್ನು ಸಾಕಿ ಸಲಹಿಕೊಂಡು ಹೋಗುತ್ತಾನೋ ಅದೇ ರೀತಿ ಕೈಲಾಗದ ಜನರನ್ನೂ ಸಲಹಿಕೊಂಡು ಹೋಗುವಂಥ ಸಮಾಜ ಮತ್ತು ಸರ್ಕಾರವನ್ನು ಬೆಳೆಸಿಕೊಂಡು ಮತ್ತು ಉಳಿಸಿಕೊಂಡು ಬರುವುದು ನಮ್ಮ ಕರ್ತವ್ಯ. ಈ ಮೊದಲೇ ಅರಿಕೆ ಮಾಡಿಕೊಂಡಂತೆ ಮಂತ್ರಿಗಳ ಸಂಬಳದ ವಿಚಾರದಲ್ಲಿ ಅನೇಕವಾಗಿ ಮಾತನಾಡಿದ್ದಾರೆ. ಬಹುಶಃ ಈ ಸಭೆಯಲ್ಲಿ ಮಾತನಾಡುವ ಕಾಲದ ಬೆಲೆಯನ್ನು ತೆಗೆದುಕೊಂಡರೆ ಒಂದುಗಂಟೆಗೆ ಸುಮಾರು 100-150 ರೂಪಾಯಿಗಳ ಖರ್ಚಾಗುತ್ತದೆ. ಮಂತ್ರಿಗಳ ಸಂಬಳ ಇದರಲ್ಲಿ ಸೇರಿಹೋಗುತ್ತದೆ. ನಾವು ಇವೊತ್ತು ಒಂದು ಹೆಮ್ಮೆಯಿಂದ ಹೇಳಿಕೊಳ್ಳುವುದಾದರೆ ಯಾರೂ ಹೇಳಿ ಕೇಳುವುದಕ್ಕಿಂತ ಮೊದಲೇ ನಮ್ಮ ಮಂತ್ರಿಗಳ ಸಂಬಳವನ್ನು 1,000 ರೂಪಾಯಿ ಇದ್ದದ್ದನ್ನು 900 ರೂಪಾಯಿಗೆ ಇಳಿಸಿದ್ದೇವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹಿಂದೆ ಮಂತ್ರಿಗಳು 500 ರೂಪಾಯಿ ಮಾತ್ರ ಸಂಬಳ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಿರಲ್ಲಾ ಅದು ಜ್ಞಾಪಕವಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಹಿಂದೆ ರೂಪಾಯಿಗೆ ಐದು ಸೇರು ಅಕ್ಕಿಯಿತ್ತು, ಈಗ ಎರಡು ಸೇರು ಆಗಿದೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಹಿಂದೆ ಅಸೆಂಬ್ಲಿ ಮೆಂಬರುಗಳಿಗೆ ದಿನ ಒಂದಕ್ಕೆ ಐದು ರೂಪಾಯಿಗಳ ಭತ್ಯ ಇತ್ತು, ಈಗ 16 ರೂಪಾಯಿಗಳನ್ನು ಮಾಡಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಹೌದು ಆದ್ದರಿಂದ ಇದು ಜಾಸ್ತಿಯೇನು ಅಲ್ಲ. ಇದನ್ನು ಯೋಚನೆ ಮಾಡಿ ನೋಡಿದರೆ, ದುಡ್ಡಿಲ್ಲ, ಸಂಬಳ ಕಡಮೆಮಾಡಬೇಕು ಎಂದು ನಾವು ಯಾರಿಂದಲೂ ಹೇಳಿಸಿಕೊಂಡು ಸಂಬಳ ಕಡಮೆ ಮಾಡಿಕೊಳ್ಳಲಿಲ್ಲ. ಇವತ್ತಿನ ದಿವಸ ನೂರು-ಐನೂರು-ಸಾವಿರ ಎಂದು ನಾವು ಲೆಖ್ಖ ಹಾಕುವ ಹಾಗಿಲ್ಲ.

ಮತ್ತೊಂದು ವಿಚಾರ ಮಿನಿಸ್ಟರುಗಳು ಆಗಾಗ ಅಲ್ಲಿಗೆ ಇಲ್ಲಿಗೆ ಪದೇಪದೇ ಟೂರ್ ಹೋಗುತ್ತಾರೆ, ಇದರಿಂದ ಎಷ್ಟೋ ಹಣ ಖರ್ಚಾಗುತ್ತದೆ ಎಂದು ಹೇಳಿದರು. ಈಗ ಮಂತ್ರಿಮಂಡಳದಲ್ಲಿ ಹನ್ನೊಂದು ಜನರಿದ್ದಾರೆ. ಇವರುಗಳು ಒಂದೇ ಭಾಗದಿಂದ ಬಂದಿಲ್ಲ, ನಾನಾ ಭಾಗಗಳಿಂದ ಬಂದಿದ್ದಾರೆ. ಕೊಡಗಿನಿಂದ ಬಂದವರಿಗೆ ಗುಲ್ಬರ್ಗದ ವಿಷಯ ಗೊತ್ತಿಲ್ಲ; ಗುಲ್ಬರ್ಗದವರಿಗೆ ಮಂಗಳೂರಿನ ವಿಷಯ ಗೊತ್ತಿಲ್ಲ; ಮಂಗಳೂರಿನಲ್ಲಿರುವವರಿಗೆ ಕಾರವಾರದ ವಿಷಯ ಗೊತ್ತಿಲ್ಲ. ಹೀಗೆ ರಾಜ್ಯದ ನಾನಾ ಭಾಗಗಳಿಂದ ಬಂದಿರತಕ್ಕವರು ಮಂತ್ರಿಗಳಾಗಿದ್ದಾರೆ. ಮೇಲಾಗಿ ಅವರು ಹೆಚ್ಚಿಗೆ ಟೂರ್ ಹೋಗುವುದಿಲ್ಲ.

4 30 P.M.

ಯಾವ ಯಾವ ಪ್ರದೇಶದಲ್ಲಿ ಏನೇನು ಪ್ರಶ್ನೆಗಳಿವೆ, ಸಮಸ್ಯೆಗಳಿವೆ, ಕಷ್ಟಗಳಿವೆ, ಅಲ್ಲಿನ ಜನರ ಆಕಾಂಕ್ಷೆಗಳೇನು, ಅಲ್ಲಿ ಯಾವ ಯಾವ ಕೆಲಸಗಳು ನಡೆಯಬೇಕಾಗಿವೆ, ಎಲ್ಲೆಲ್ಲಿ ಕಾರ್ಖಾನೆಗಳಾಗಬೇಕು, ಎಲ್ಲೆಲ್ಲಿ ಹಡಗುಗಳನ್ನು ಕಟ್ಟಲು ಅನುಕೂಲ ಮಾಡಬಹುದು, ಎಲ್ಲೆಲ್ಲಿ ವ್ಯವಸಾಯ ವ್ಯಾಪಾರ ಅಭಿವೃದ್ಧಿಯಾಗಬೇಕು ಎಂಬುದನ್ನೆಲ್ಲಾ ತಿಳಿದುಕೊಳ್ಳಬೇಕಾದುದು ಮಂತ್ರಿಗಳ ಕರ್ತವ್ಯ. ಅನೇಕಸಾರಿ ಮಂತ್ರಿಗಳಲ್ಲಿ ನಾನು ಸಿಟ್ಟು ಮಾಡಿದ್ದೇನೆ; ಏಕೆ ಪ್ರವಾಸ ಹೋಗಿ ನೋಡಿಕೊಂಡು ಬರಲಿಲ್ಲವೆಂದು ಕೇಳಿದ್ದೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸಿಟ್ಟು ಎನ್ನುವುದೇ ನಮಗೆ ಗೊತ್ತಿಲ್ಲ, ಅದೇ ನಮ್ಮ ಕಷ್ಟ. ನೀವು ಸಿಟ್ಟಾಗಿದ್ದಿದ್ದರೆ ನಮಗೆ ಸಂತೋಷವಾಗುತ್ತಿತ್ತು. (ನಗು!)

ಶ್ರೀ ಎಸ್. ನಿಜಲಿಂಗಪ್ಪ.—ಕೆಲವು ಸಂದರ್ಭಗಳಲ್ಲಿ ಬರುತ್ತದೆ. ಹೀಗೆ ಅನೇಕ ವಿಷಯಗಳನ್ನು ಮಂತ್ರಿಗಳು ತಿಳಿದುಕೊಳ್ಳಬೇಕಾಗಿದೆ. ಒಂದು ವಿಷಯವನ್ನು ಹೆಮ್ಮೆಯಿಂದ ಹೇಳುತ್ತೇನೆ. Coastal Mysore ಎಂದು ಪತ್ರಿಕೆಗಳಲ್ಲಿ ಬಂದಾಗ ನನಗೊಂದು ಹೆಮ್ಮೆ, ಸಮುದ್ರತೀರ ನಮಗೆ ಬಂತಲ್ಲಾ ಎಂದು. ಟಿಪ್ಪುಸುಲ್ತಾನ್ ಕಾಲದಿಂದ ನಮಗೆ ಸಮುದ್ರ ತೀರವಿರಲಿಲ್ಲ. ಈಗ ನಮಗೆ ಸುಮಾರು ಇನ್ನೂರು ಮೈಲಿ ಸಮುದ್ರತೀರ ದೊರಕಿದೆ. ಸುಮಾರು ಒಂದುಕೋಟಿ ರೂಪಾಯಿ ಖರ್ಚು ಮಾಡಿ ಮೀನಿನ ಕೈಗಾರಿಕೆಯನ್ನಭಿವೃದ್ಧಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಹಡಗುಗಳನ್ನು ಕಟ್ಟಬೇಕೆಂದು ಯೋಚನೆ ಮಾಡಿದ್ದೇವೆ. ಇಷ್ಟರಲ್ಲೇ ಒಂದು ತಜ್ಞರ ಸಮಿತಿ ಬರುತ್ತದೆ. ಈ ಕಾರ್ಯವನ್ನು ಕಾರ್ಯಗತ ಮಾಡುವುದಕ್ಕೇನೇನು ಬೇಕೋ, ಯಾರ್ಯಾರಿಗೆ ಹೇಳಬೇಕೋ ಅದನ್ನು ಹೇಳಲು ಏರ್ಪಾಡು ಮಾಡಿದ್ದೇವೆ. ತಜ್ಞರನ್ನು ಕರೆದುಕೊಂಡು ಹೋಗಿ ಆ ಸಮಿತಿಯ ಮುಂದೆ ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. Casuarina plantations, Coffee plantations ಅಭಿವೃದ್ಧಿ ಮಾಡಬೇಕೆಂದು ಮಾಡಿದ್ದೇವೆ. . . .

Sri M. C. NARASIMHAN.—On a point of order, Sir, The Hon'ble Chief Minister is referring to subjects which should not be obviously referred to in the course of this discussion.

Mr. SPEAKER.—Hon'ble Member will remember that he is just now referring to the point of activities of the Ministry. To that extent it is relevant. I am watching whether he goes beyond the scope.

ಶ್ರೀ ಕೆ. ಕೆಂಚಪ್ಪ.—ಮೀನಿನ ವಿಷಯ outside the scope ಅಲ್ಲವೆ, ಸ್ವಾಮಿ ?

ಅಧ್ಯಕ್ಷರು.—ಯಾವುದು within the scope, ಯಾವುದು ಅಲ್ಲ ಎನ್ನುವುದನ್ನು ನೋಡಬೇಕು. ಮಂತ್ರಿಗಳು ಏನು ಕೆಲಸ ಮಾಡುತ್ತಿದ್ದಾರೆಂಬುದನ್ನು ಅವರು ಹೇಳುತ್ತಿದ್ದಾರೆ ಅದು ಹೇಳುವ ರೀತಿಯಲ್ಲಿದೆ; ಬೇರೆ ರೀತಿಯಲ್ಲಿ ಹೇಳಿದ್ದಿದ್ದರೆ out side the scope ಆಗುತ್ತಿತ್ತು.

ಶ್ರೀ ಎಸ್. ನಿಜಲಿಂಗಪ್ಪ.—ಇದನ್ನೆಲ್ಲಾ ನಾನು ಏಕೆ ಹೇಳುವುದೆಂದರೆ, ಮಂತ್ರಿಗಳಿಗೆ ಎಲ್ಲ ಪ್ರದೇಶಗಳ ಪರಿಚಯವಿರಬೇಕು. ಶ್ರೀ ರುದ್ರಪ್ಪನವರಿಗೆ ಸಮುದ್ರತೀರ ಎನ್ನುವುದೇ ಗೊತ್ತಿರಲಿಲ್ಲ; ಅವರು ಎಲ್ಲೋ ಹುಡುಗರಾಗಿದ್ದಾಗ 'ಟೂರ್' ಹೋಗಿ ನೋಡಿದ್ದರೋ ಏನೋ. ಈಗ ಮಂತ್ರಿಗಳಾಗಿ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಂಡು ಬಂದರು, ಪಶ್ಚಿಮ ಸಮುದ್ರತೀರಕ್ಕೆ ಹೋಗಿ ಅಲ್ಲಿನ ಆವಶ್ಯಕತೆಗಳೇನೆಂಬುದನ್ನು ತಿಳಿದುಕೊಂಡು ಬಂದರು. ನಾವು ಮಲೆನಾಡು ಸಮ್ಮೇಳನಕ್ಕೆ ಹೋದೆವು. ಅಲ್ಲಿನ ಸ್ಥಿತಿಗತಿಗಳೇನು, ಅವಶ್ಯಕತೆಗಳೇನು ಎಂಬುದನ್ನು ತಿಳಿದುಕೊಂಡು ಬಂದೆವು. ಕೊಡಗಿಗೆ ಹೋದನಂತರ ಅಲ್ಲಿ ಸೇತುವೆಗಳ ಮತ್ತು ರಸ್ತೆಗಳ ಅವಶ್ಯಕತೆ ಎಷ್ಟೆಂಬುದು ಗೊತ್ತಾಯಿತು.

ಶ್ರೀ ಕೆ. ಕೆಂಚಪ್ಪ,—ಎಲ್ಲರೂ ಏಕಕಾಲದಲ್ಲಿ ಏಕೆ ಹೋಗಬೇಕು ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲರೂ ಹೋಗುವುದಿಲ್ಲ. ದೊಡ್ಡದೊಡ್ಡ ವಿಚಾರದಲ್ಲಿ ನ್ಯೂನತೆಗಳಿದ್ದರೆ ಟೀಕೆ ಮಾಡಲಿ, ಬೇಡವೆನ್ನುವುದಿಲ್ಲ. ಟೀಕೆ ಮಾಡುವ ಸಂದರ್ಭದಲ್ಲಿ ಕೆಲವು ಹರಿಜನ ಸದಸ್ಯರು, ಸಾಕಷ್ಟು ಜನ ಹರಿಜನ ಮಂತ್ರಿಗಳಿಲ್ಲ ಮತ್ತೆ ಹರಿಜನರೇ ಮುಖ್ಯ ಮಂತ್ರಿ ಯಾಗಬೇಕೆಂದು ಹೇಳಿದರು. ಇದನ್ನು ತತ್ವಶಃ ನಾನು ಒಪ್ಪಿಕೊಳ್ಳುವ ಮನುಷ್ಯ. ಆದರೆ ಪ್ರಜಾಪ್ರಭುತ್ವದಲ್ಲಿ ಯಾರನ್ನು ಚುನಾಯಿಸುತ್ತಾರೋ ಅದರ ಮೇಲೆ ಹೋಗುತ್ತದೆ. ನನ್ನ ಅಂತಃಕರಣವೇನೆಂಬುದು ಕೆಲವರಿಗೆ ಗೊತ್ತಿದೆ. ಹರಿಜನರು ಹೆಚ್ಚು ಪ್ರಮಾಣದಲ್ಲಿ ಮುಂದೆ ಬರಬೇಕೆಂದು ಹಿಂದಿನಿಂದಲೂ ಹೇಳುತ್ತಿದ್ದೇನೆ. ಅವರ ಸ್ಥಿತಿ ಇನ್ನೂ ಉತ್ತಮವಾಗಬೇಕೆಂದು ಒಪ್ಪಿಕೊಳ್ಳಲು ಈಗಲೂ ನಾನು ಹಿಂಜರಿಯುವುದಿಲ್ಲ. ಇವರನ್ನು ಸಾವಿರಾರು ವರ್ಷಗಳಿಂದ ತುಳಿದಿಟ್ಟಿದ್ದೇವೆ. ಇದರಿಂದ ಇವರು ನಮ್ಮನ್ನು ಬಯ್ಯುವುದು ಸರಿ. ಇವರು ನಮ್ಮನ್ನು ಹಿಡಿದುಕೊಂಡು ಹೊಡೆದರೂ ಚಿಂತೆಯಿಲ್ಲ. ಆದರೆ ಅವರು ಹಾಗೆ ಮಾಡುವುದಿಲ್ಲ. ಅವರ ಸ್ಥಿತಿ ಹೀಗಿರುವಾಗ ಅವರು ಹೇಳುವುದನ್ನೆಲ್ಲಾ ನಾವು ಕೇಳಬೇಕು.

ಶ್ರೀ ಜಿ. ಎಚ್. ಪುಟ್ಟಣ್ಣ.—ಹರಿಜನರೂ ಬೇರೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರೂ ಒಂದೇ ರೀತಿಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅವರಲ್ಲಿ ಬೇರೆಬೇರೆ ಮಾಡುವುದಕ್ಕೆ ಹೋಗಬೇಡಿ.

ಇನ್ನು ಬೇರೆ ವಿಚಾರಗಳಿಗೆ ಉತ್ತರ ಹೇಳುತ್ತೇನೆ. ಸೆಕ್ರೆಟೇರಿಯಟ್ ಮತ್ತು ತಾಲ್ಲೂಕು ಕಚೇರಿಗಳಲ್ಲಿ ಕೆಲಸಕಾರ್ಯಗಳು ಸಾಮಾನ್ಯವಾಗಿ ಎಷ್ಟು ಜಾಗ್ರತೆ ನಡೆಯಬೇಕೋ ಅಷ್ಟು ಜಾಗ್ರತೆ ನಡೆಯುತ್ತಿಲ್ಲವೆಂದು ಈ ಸಭೆಯ ಎರಡು ಕಡೆಗಳಿಂದಲೂ ಸದಸ್ಯರಿಂದ ಕೇಳಿ ಬರುತ್ತಿದೆ. ಈ ಟೀಕೆಗೆ ಕೆಲ ಮಟ್ಟಿಗಾದರೂ ತಳಹದಿ ಇದೆ ಎಂದು ನನಗನ್ನಿಸುತ್ತದೆ. ಇದಕ್ಕೆ ನಾನಾ ಕಾರಣಗಳಿರಬಹುದು. ಹೊಸದಾಗಿ ಬಂದಿರತಕ್ಕ ಗುಮಾಸ್ತರು ನಾನಾ ಕಡೆಗಳಿಂದ ಬಂದು ಸೇರಿದ್ದಾರೆ. ಇದೊಂದು ಕಾರಣ. ಇನ್ನೊಬ್ಬ ಸದಸ್ಯರು ಈ ಸೆಕ್ರೆಟೇರಿಯಟ್‌ನಲ್ಲಿ ಬರಿ ಹಳೆಯ ಮೈಸೂರಿನವರೇ ಇದ್ದಾರೆಂದು ಹೇಳಿದರು. ಹಾಗಲ್ಲ: ಬೇರೆಕಡೆಗಳಿಂದ ಬಂದವರೂ ಇದ್ದಾರೆ. ಅವರೂ ಕೆಲಸ ಮಾಡುತ್ತಾರೆ; ಆದರೆ ಕೆಲವರು ಈ ಕೆಲಸಕ್ಕೆ ಹೊಂದಿಕೊಳ್ಳಬೇಕು. ಕೆಲವು ಹಳೆಯ ರೋಗಗಳು ಬೆಳೆದು ಬಂದಿವೆ. ಆದುದರಿಂದ ಕೆಲಸ ಎಷ್ಟು ಜಾಗ್ರತೆ ನಡೆಯಬೇಕೋ ಅಷ್ಟು ಜಾಗ್ರತೆ ನಡೆಯುತ್ತಿಲ್ಲವೆನ್ನುವುದು ಸ್ವಲ್ಪಮಟ್ಟಿಗೆ ನಿಜ. ಮಂತ್ರಿಗಳು ತಮಗೆ ಬರುವ ಕಾಗದಪತ್ರಗಳನ್ನು ಬೇಗ ತೀರ್ಮಾನಮಾಡಿ ಕಳುಹಿಸಬೇಕೆಂದು ಹೇಳಿದರು. ಎಲ್ಲೋ ಎರಡು ಮೂರು ಉಳಿದಿರಬಹುದೇ ವಿನಾ ಯಾವ ಫೈಲುಗಳೂ ನಮ್ಮಲ್ಲಿ ನಾಲ್ಕೈದು ದಿವಸಗಳಿಗಿಂತ ಹೆಚ್ಚುಕಾಲ ಉಳಿಯುವುದಿಲ್ಲ. ತಾಲ್ಲೂಕು ಕಚೇರಿಗಳಲ್ಲಿ ಬೇಕಾದಷ್ಟು ಜಮೀನು ದರಖಾಸ್ತುಗಳು ಬರುತ್ತವೆ. ಇದನ್ನು ಹೇಳತೀರದು. ಇದೊಂದು ದೊಡ್ಡ ಸಮಸ್ಯೆ. ಇದನ್ನು ಬಗೆಹರಿಸಬೇಕೆಂದು ಮಾಡಿದ್ದೇವೆ. ಎಲ್ಲೆಲ್ಲಿ ಜಮೀನಿದೆ, ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ತೀರ್ಮಾನ ಮಾಡಿ ಈ ದೊಡ್ಡ ಸಮಸ್ಯೆಯನ್ನು ಬಗೆಹರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ದರಖಾಸ್ತು ಸಂಬಂಧವಾಗಿ ಈ ದಿವಸ ಒಬ್ಬ ಒಂದು ಅರ್ಜಿಯನ್ನು ಕೊಟ್ಟರೆ, ಅದು ತೀರ್ಮಾನವಾಗದೆ ಎರಡು ಮೂರು ವರ್ಷ ಉಳಿಯುತ್ತದೆ. ಒಬ್ಬನೇ ಮನುಷ್ಯ ನಾಲ್ಕಾರು ಅರ್ಜಿಗಳನ್ನು ಕೊಡುತ್ತಾನೆ. ಇದಕ್ಕೆ ಬೇರೆ ಒಂದು ಸಿಬ್ಬಂದಿಯನ್ನೇರ್ಪಾಡುಮಾಡಿ ಕೆಲಸವನ್ನು ನಿರ್ವಹಿಸಿದರೆ ಬೇಗ ಆಗಬಹುದೋ ಎನಿಸುತ್ತದೆ. ಹೀಗೆ ಮಾಡುವುದನ್ನು ಯೋಚನೆ ಮಾಡುತ್ತೇವೆ.

ಡಿವಿಜನಲ್ ಕಮಿಷನರ ವಿಚಾರದಲ್ಲಿ ಕೆಲವರು ಮಾತನಾಡಿದರು. ಹೊಸ ಮೈಸೂರಾದಾಗ ಐದು ಭಾಗಗಳ ಪ್ರತಿನಿಧಿಗಳೂ ಅಲ್ಲಿನ ಮಂತ್ರಿಗಳೂ ಸೇರಿ, ಹೊಸ ರಾಜ್ಯಕ್ಕೆ ಬೇರೆ ಬೇರೆ ಪ್ರದೇಶಗಳ ಜನರು ಬರುತ್ತಾರೆ, ಒಂದೊಂದು ಪ್ರದೇಶದ ಸಮಸ್ಯೆಗಳು ಒಂದೊಂದು ರೀತಿ ಇರುತ್ತವೆ, ಈ ದೃಷ್ಟಿಯಿಂದ ಕೆಲವು ದಿನವಾದರೂ ಈ ಪ್ರದೇಶಗಳನ್ನು ಒಟ್ಟಾಗಿ ಸೇರಿಸಿ ಆಡಳಿತವನ್ನು ನೋಡಿಕೊಳ್ಳುವುದಕ್ಕೆ ದಕ್ಷರಾದ ಸೀನಿಯರ್ ಅಧಿಕಾರಿಗಳು ಬೇಕೆಂಬ ದೃಷ್ಟಿಯಿಂದ ತೀರ್ಮಾನಿಸಿ, ಆ ಮಂತ್ರಿಮಂಡಲದಲ್ಲಿ ಒಪ್ಪಿಕೊಂಡಿದ್ದಾರೆ. ಹೋದ ವರ್ಷ ಅಕ್ಟೋಬರ್ ತಿಂಗಳಿಗೆ ಮುಂಚೆ ಒಂದು ಸಭೆ ಸೇರಿ ಇದನ್ನು ತೀರ್ಮಾನಮಾಡಿದರು. ಆದರೆ ಈಗ ಆರು ತಿಂಗಳ ಅನುಭವದಲ್ಲಿ ನೋಡಿದರೆ, ಅವರಿಂದ ಹೆಚ್ಚು ಕೆಲಸವಾಗಿಲ್ಲ. ಈ ಬಗ್ಗೆ ಕೂಲಂಕಷವಾಗಿ ಪುನರ್ವಿಮರ್ಶೆ ಮಾಡುವುದು ಅವಶ್ಯಕವೆಂದು ಯೋಚನೆ ಮಾಡುತ್ತಿದ್ದೇವೆ. ಒಂದು ವರ್ಷದಲ್ಲಿ, ಈ ಎಲ್ಲ ವ್ಯತ್ಯಾಸಗಳು ಹೋಗುವವರೆಗೂ, ಅವರನ್ನಿಡು

(ಶ್ರೀ ಎಸ್. ನಿಜಲಿಂಗಪ್ಪ)

ವುದು ಅವಶ್ಯಕವೆಂದು ಕಂಡುಬರುತ್ತದೆ. ಬಹುಶಃ ಇನ್ನೊಂದು ವರ್ಷ ಅಥವಾ ಆರುತಿಂಗಳು ನೋಡಿ ಅಮೇಲೆ ಈ ಹುದ್ದೆಗಳನ್ನು ತೆಗೆಯಬೇಕಾಗುತ್ತದೆ. ಆ ಸಲಹೆ ಈಗ ಸರ್ಕಾರದ ಮನದಲ್ಲಿದೆ.

ಸಬ್‌ಡಿವಿಜನ್ ಆಫೀಸರನ್ನು ತೆಗೆಯಬೇಕು, ಇನ್ನೂ ಕೆಲವರನ್ನು ತೆಗೆಯಬೇಕು, ಕಾರ್ಯ ಅನಾವಶ್ಯಕವಾಗಿ ಜಾಸ್ತಿಯಾಗುತ್ತಿದೆ ಎಂದು ಅನೇಕ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ; ಅದು ನನಗೂ ಸರಿಯೆಂದು ಕಾಣುತ್ತದೆ. ಅದಕ್ಕೆ ಸರ್ಕಾರದ ಕೆಲಸ, ಆಡಳಿತ ಅನೇಕ ದರ್ಜೆಗಳಲ್ಲಿ ಹೇಗೆ ಮಾಡಿದರೆ ಸುಲಲಿತವಾಗಿ, ಸುಲಭವಾಗಿ, ಜಾಗ್ರತೆಯಾಗಿ ಆದೀತು, ದಕ್ಷತೆಯಿಂದ ನಡೆಯಬಹುದು ಎಂದು ಆಲೋಚಿಸಿ ಒಬ್ಬ ಯೋಗ್ಯರಾದ ಅಧಿಕಾರಿಗಳನ್ನು ಅದರ ಉಸ್ತುವಾರಿಗೆ ಹಾಕಬೇಕಾದದ್ದು ಅವಶ್ಯಕವಾಗಿದೆ; ಅದಷ್ಟು ಜಾಗ್ರತೆ ಇದನ್ನು ಕಾರ್ಯರೂಪಕ್ಕೆ ತರಬೇಕೆಂದಿದೆ. ಮಾನ್ಯ ಸದಸ್ಯರು ಹೆಸರು—ಜ್ಞಾಪಕವಿಲ್ಲ—ಸರಿಯಾದ ತಿಳಿವಳಿಕೆಯಿಲ್ಲದವರನ್ನೇಕೆ ಮಂತ್ರಿಗಳನ್ನಾಗಿ ನಿಯಮಿಸಬೇಕು, ಅವರಿಗೇಕೆ ಅನೇಕ ಅಧಿಕಾರಿಗಳ ಸಹಾಯ ಬೇಕು ಎಂದು ಕೇಳಿದರು; ಅದು ಬಹಳ ಸ್ವಾರಸ್ಯವಾದ ಮಾತು; ಅದನ್ನು ನೋಡಿ ನಗಲೂಬೇಕು, ಅಳಲೂಬೇಕು. ರಾಜ್ಯಭಾರ ಪ್ರಜಾಪ್ರಭುತ್ವತತ್ವಕ್ಕೆ ಅನುಸಾರವಾಗಿ ನಡೆಯಬೇಕು, ಹೀಗೆ ನಡೆಯಬೇಕು, ಇದರಂತೆ ಸರ್ಕಾರ ಮಾಡಬೇಕು ಎಂದು ಹೇಳುತ್ತಾರೆ. ಆದರೆ ಸೇತುವೆ ಕಟ್ಟಬೇಕಾದರೆ ಅದು ಮಂತ್ರಿಗಳ ಕೆಲಸವಲ್ಲ, ರಸ್ತೆಮಾಡುವುದು ಮಂತ್ರಿಗಳ ಕೆಲಸವಲ್ಲ, ಮಂತ್ರಿಗಳು ಕರಣೆ ತೆಗೆದುಕೊಂಡು ಸೇತುವೆ ಕಟ್ಟುವುದಿಲ್ಲ, ಟೇಪು ತೆಗೆದುಕೊಂಡು ಅಳೆಯುವುದಿಲ್ಲ. ಅದನ್ನು ಮಾಡುವುದಕ್ಕೆ ಇಂಜನಿಯರಿದ್ದಾರೆ. ಅದು ಅವರ ಕೆಲಸ. ಹಾಗಿರುವಾಗ ಆ ಕೆಲಸ ಮಂತ್ರಿಗಳಿಗೆ ತಿಳಿಯದೆಂದು ಹೇಳುವುದು ಸರಿಯಲ್ಲ. ಅದಕ್ಕೆಲ್ಲಾ ಬಹಳ ದಕ್ಷರೂ, ಬುದ್ಧಿವಂತರೂ ಬೇಕಾಗುತ್ತದೆ. ಹಣಕಾಸಿನ ವಿಚಾರ ನೋಡಿಕೊಳ್ಳಲು ಅತ್ಯಂತ ಬುದ್ಧಿವಂತರು ಬೇಕು, ಅವರ ಕಡೆಯಿಂದ ಆ ಕೆಲಸಗಳಾಗಬೇಕು. ಅಂಥವರು ಬೇಕೇಬೇಕು, ಅವರಿಲ್ಲದಿದ್ದರೆ ಸರ್ಕಾರದ ಆಡಳಿತ ಯಶಸ್ವಿಯಾಗಿ ನಡೆಯುವುದಕ್ಕಾಗುವುದಿಲ್ಲ. ಸರ್ಕಾರದ ಯೋಚನೆಗಳು ಕಾರ್ಯರೂಪಕ್ಕೆ ಬರಬೇಕಾದರೆ ತಜ್ಞರೂ, ಬುದ್ಧಿವಂತರೂ, ಅನುಭವಶಾಲಿಗಳೂ ಆಡಳಿತದಲ್ಲಿ ಭಾಗವಹಿಸಬೇಕಾದದ್ದು ಅತ್ಯಾವಶ್ಯಕ, ಅಂಥ ಅಧಿಕಾರಿಗಳು ಬೇಕೇಬೇಕು, ಯೋಗ್ಯರಾದವರು ಬೇಕಾಗುತ್ತದೆ. ಈ ಸಂದರ್ಭದಲ್ಲಿ ಐ.ಎ.ಎಸ್. ಅಧಿಕಾರಿ ಬೇಕಾಗಿಲ್ಲವೆಂದು ಹೇಳುತ್ತಾರೆ, ಆ ಅಧಿಕಾರಿಗಳಿಗೆ ಸಂಬಳ ಹೆಚ್ಚು ಎಂದು ಹೇಳುತ್ತಾರೆ; ಅದು ಬೇರೆ ವಿಷಯ. ಸೆಂಟ್ರಲ್ ಸ್ಕೇಲಿಗೂ ಮತ್ತು ಸ್ಟೇಟ್ ಸ್ಕೇಲಿಗೂ ವ್ಯತ್ಯಾಸವಿದೆ. ಅನೇಕರಿಗೆ ಅದು ಸರಿಯೆಂದು ಕಾಣುವುದಿಲ್ಲ; ಅದು ಬೇರೆ ವಿಚಾರ. ಸಾಧಾರಣವಾಗಿ ಈ ವಿಚಾರವನ್ನು ಎಲ್ಲಾ ಜನರೂ ಚೆನ್ನಾಗಿ ಆಲೋಚಿಸಬೇಕಾಗಿದೆ. ಐ.ಎ.ಎಸ್. ಆಫೀಸರುಗಳು ಬೇಕಾಗಿಲ್ಲವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಶ್ರೀ ರಾಮಪ್ಪನವರು ಒಂದು ಮಾತು ಹೇಳಿದರು, ಐ.ಎ.ಎಸ್. ಆಫೀಸರು ಚೀಫ್ ಸೆಕ್ರೆಟರಿಯಾಗಿರಬಹುದು, ಚೀಫ್ ಕಮಿಷನರಾಗಿರಬಹುದು, ಬಾಕಿ ಕಡೆ ಅವರು ಬೇಕಾಗಿಲ್ಲ ಎಂದು ಹೇಳಿದರು. ಆದರೆ ಅಷ್ಟೇ ಹೆಚ್ಚು ಜವಾಬ್ದಾರಿಯಿರುವ ಕಡೆಗೆ ಆ ಅಧಿಕಾರಿಗಳು ಇರಬೇಕಾಗುತ್ತದೆ. ಈ ದಿವಸ ದೇಶದ ಕೆಲಸ ನಾನಾ ರೀತಿಯಲ್ಲಿ ಜಾಸ್ತಿಯಾಗಿರುವುದರಿಂದ ದಕ್ಷರಾದ ಅಧಿಕಾರಿಗಳು ಕೆಲವರು ಬೇಕಾಗಿದ್ದಾರೆ. ಈ ದಿವಸ ಐ.ಎ.ಎಸ್. ಮತ್ತು ಐ.ಪಿ.ಎಸ್. ಹುದ್ದೆಗಳು ಒಟ್ಟು ದೇಶಕ್ಕೆಲ್ಲಾ ಅನ್ವಯಿಸುವಂಥಾದ್ದಾಗಿದೆ. ನಾವು ಹೊರಗಡೆಯಿಂದ ಬೇಕಾದರೆ ಕೆಲವರನ್ನು ಕರೆಸುತ್ತೇವೆ. ಐ.ಎ.ಎಸ್, ಐ.ಪಿ.ಎಸ್. ಮತ್ತು ಐ.ಸಿ.ಎಸ್. ಅಧಿಕಾರಿಗಳಲ್ಲೇ ಇದ್ದರೂ ಬುದ್ಧಿವಂತರ ಅವಶ್ಯಕತೆ ಬಿದ್ದಾಗ ಅವರನ್ನು ಕರೆಸಿ ಕೆಲಸಮಾಡಿಸಬೇಕಾಗುತ್ತದೆ. ಈ ದಿವಸ ಆಡಳಿತ ದೃಷ್ಟಿಯಿಂದ ಬೇರೆ ಬೇರೆ ರಾಜ್ಯಾಂಗವಿಲ್ಲ, ರಾಜ್ಯವೆಲ್ಲಾ ಒಂದೇ ಆಗಿದೆ. ಇದರ ವಿಚಾರಗಳನ್ನು ಆಲೋಚಿಸಬೇಕಾಗುತ್ತದೆ.

ಅಮಲ್ದಾರರುಗಳಿಗೆ ಕೆಲಸ ಹೆಚ್ಚು ಎಂದು ಹೇಳಿದ್ದಾರೆ; ಕೆಲಸ ಜಾಸ್ತಿಯಿರುವುದು ನಿಜ. ಎಷ್ಟು ಮಟ್ಟಿಗೆ ಅವರ ಕೆಲಸವನ್ನು ಯೋಗ್ಯರೀತಿಯಿಂದ ಹಂಚಿದರೆ ಆಡಳಿತದಲ್ಲಿ ದಕ್ಷತೆ ಜಾಸ್ತಿಯಾಗಬಹುದೆಂದು ನೋಡಿ ವ್ಯವಸ್ಥೆಮಾಡಬೇಕಾಗುತ್ತದೆ.

ಇನ್ನೊಂದು ವಿಚಾರವಾಗಿ ಯಾರೋ ಬಹುಶಃ ಸರಿಯಾಗಿ ತಿಳಿಯದೆಯೋ ಏನೋ ಬಹಳ ಸ್ವಾರಸ್ಯವಾಗಿ ಮಾತನಾಡಿದರು. ತಾಲ್ಲೂಕು ಅಮಲ್ದಾರರು ತಾಲ್ಲೂಕು ಕಾಂಗ್ರೆಸ್ ಕಮಿಟಿಗೆ ಸಂಬಂಧಪಟ್ಟಹಾಗೆ, ಡೆಪ್ಯುಟಿ ಕಮಿಷನರು ಅಥವಾ ಕಲೆಕ್ಟರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಗೆ ಸಂಬಂಧಪಟ್ಟಹಾಗೆ, ಬಾಕಿ ಎಲ್ಲಾ ಅಧಿಕಾರಿಗಳೂ ಪ್ರಾದೇಶಿಕ ಕಾಂಗ್ರೆಸ್ ಕಮಿಟಿಗೆ ಸಂಬಂಧಪಟ್ಟಹಾಗೆ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು. ಅದು ಅತ್ಯಂತ ಆಶ್ಚರ್ಯಕರವಾಗಿ ಕಾಣುತ್ತದೆ; ಅದು ಸಾಕಷ್ಟು ಹೊಣೆಗಾರಿಕೆಯಿಂದ ಹೇಳಿದ ಮಾತಲ್ಲ, ವಿಚಾರ ಸರಿಯಾಗಿ ತಿಳಿಯದೆ ಹೇಳಿದಂತೆ ಕಾಣುತ್ತದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ತಾಲ್ಲೂಕುಗಳಲ್ಲಿ ಆ ರೀತಿ ನಡೆಯುತ್ತಿಲ್ಲವೆಂದು ಹೇಳುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ಗೊತ್ತಿದೆ, ಅದು ಬಹಳಮಟ್ಟಿಗೆ ನಿಜವಲ್ಲ, ಎಲ್ಲಾದರೂ ಆ ರೀತಿ ಲೋಪವಿದ್ದರೆ ಅದನ್ನುಗಮನಕ್ಕೆ ತಂದರೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ಚುನಾವಣೆ ವಿಚಾರದಲ್ಲಿ ಅನೇಕ ಟೀಕೆಗಳು ಕೇಳಿಬರುತ್ತಿವೆ.

ಶ್ರೀ ಕೆ. ಕೆಂಚಪ್ಪ.—ಹೊಸದುರ್ಗಕ್ಕೆ ಚುನಾವಣೆ ಕಾಲದಲ್ಲಿ ತಾವು ಬಂದಿದ್ದಾಗ ಟಿ. ಬ. ಬಳಿ ಜಿಲ್ಲಾಧಿಕಾರಿಗಳು 12 ಗಂಟೆ ಸಮಯದಲ್ಲಿ ಬಂದು ನಿಂತಿದ್ದರು. ಆಗ ಅಲ್ಲಿಗೆ ಅವರು ಬರುವುದಕ್ಕೆ ಕಾರಣವೇನು? ಅವರಿಗೇನು ಕೆಲಸವಿತ್ತು?

ಶ್ರೀ ಎಸ್. ನಿಜಲಿಂಗಪ್ಪ.—ನಾನು ಮುಖ್ಯಮಂತ್ರಿಯಾಗಿ ಬಂದಿದ್ದೆ.

ಶ್ರೀ ಕೆ. ಕೆಂಚಪ್ಪ.—ಆ ದಿವಸ ಅಲ್ಲಿ ಚುನಾವಣೆಯಿದ್ದುದರಿಂದ ತಾವು ಮುಖ್ಯ ಮಂತ್ರಿಗಳಾಗಿ ಬಂದಿರಲಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಡೆಪ್ಯುಟಿ ಕಮಿಷನರು ಸರ್ಕಾರಿ ಕೆಲಸದ ಮೇಲೆ ನನ್ನನ್ನು ನೋಡುವುದಕ್ಕೆ ಬಂದಿದ್ದರೆ, ಅಂಥ ಆವಶ್ಯಕತೆಯಿದ್ದರೆ ಅವರಿಗೆ "ಸ್ವಲ್ಪ ತಾಳಿ, ನಾನು ಕೋಟು ಬದಲಾಯಿಸಿಕೊಂಡು ಮುಖ್ಯಮಂತ್ರಿಯಾಗಿ ಬರುತ್ತೇನೆ" ಎಂದು ಹೇಳುವುದಕ್ಕಾಗುವುದಿಲ್ಲ.

(ಶ್ರೀ ಕೆ. ಕೆಂಚಪ್ಪನವರು ಮಾತನಾಡಲು ಎದ್ದರು.)

Sri S. NIJALINGAPPA.—Please sit down. ನಾನು ಹಾಗೆ ಹೇಳಿದ್ದಕ್ಕೆ ವಿಷಾದಿಸುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಆ ರೀತಿ ಹೇಳುವುದು ಸರಿಯೇ?

ಶ್ರೀ ಎಸ್ ನಿಜಲಿಂಗಪ್ಪ.—ಅದು ಸರಿಯಲ್ಲವೆಂದೇ ನಾನು ವಿಷಾದಿಸುತ್ತೇನೆಂದು ಆಗಲೇ ಹೇಳಿದೆ. ಕುಳಿತುಕೊಳ್ಳಿ ಎಂದು ಹೇಳುವುದು ನನ್ನ ಕೆಲಸವಲ್ಲ. ಅದು

ಅಧ್ಯಕ್ಷರ ಕೆಲಸ. ಚುನಾವಣೆ ಕಾಲವಾದರೂ ಸಹ ಅವಶ್ಯಕವಾದ ಕೆಲಸವನ್ನು ಮಾಡಲೇಬೇಕು. ನಾವು ಯಾವವಿಧವಾಗಿಯೂ ಜವಾಬ್ದಾರಿಯಿರುವ ಅಧಿಕಾರಿಗಳನ್ನು ನಮ್ಮ ಚುನಾವಣೆ ಕೆಲಸಗಳಿಗೆ ಉಪಯೋಗಿಸಿಕೊಂಡಿಲ್ಲ. ಅಧಿಕಾರಿಗಳು ಅನೇಕ ಕಡೆ ಕಾಂಗ್ರೆಸ್ಸಿಗೆ ವಿರೋಧವಾಗಿ ನಡೆದುಕೊಂಡಿದ್ದಾರೆಂದು ಕೇಳಿಬರುತ್ತಿದೆ. ಆದರೆ ನಾವು ಯಾವುದಕ್ಕೂ ಎಲ್ಲೆ ಮೀರಿ ಕೈಹಾಕಿಲ್ಲವೆಂದು ಮುಖ್ಯವಾಗಿ ಹೇಳುತ್ತೇನೆ. ಕಾಂಗ್ರೆಸ್ ಪರವಾಗಿ ಕೆಲಸವನ್ನು ಅಧಿಕಾರಿಗಳು ಎಷ್ಟು ಮಾಡಿದ್ದಾರೋ ಅದಕ್ಕೆ ಹತ್ತರಷ್ಟು ವಿರೋಧವಾಗಿ ಮಾಡಿದ್ದಾರೆಂದು ಪುಕಾರಿದೆ. ಕಾಂಗ್ರೆಸ್ ಪರವಾಗಿಯೇ ಕೆಲಸ ಮಾಡಿದರೂ ಹಾಗೆ ಮಾಡಿದ ಅಧಿಕಾರಿಗಳು ಶಿಕ್ಷೆಗೆ ಅರ್ಹರು, ಅಷ್ಟೇ ಕೆಲಸ ಕಾಂಗ್ರೆಸ್ಸಿಗೆ ವಿರೋಧವಾಗಿ ಮಾಡಿದರೂ ಶಿಕ್ಷೆಗೆ ಅರ್ಹರು. ಆ ರೀತಿ ಚುನಾವಣೆಗಳಲ್ಲಿ ಕೈಹಾಕಿದ್ದರೆಂದು ಗೊತ್ತಾದರೆ ಸೂಕ್ತ ಕ್ರಮ ಕೈಕೊಳ್ಳುತ್ತೇವೆ. ಅಧಿಕಾರಿಗಳ ವಿಚಾರದಲ್ಲಿ ಆ ರೀತಿ ಕೆಲವು ಕಡೆ ಪುಕಾರಿದೆ. ಅದನ್ನು ಪರಿಶೀಲಿಸಿ ಶಿಕ್ಷೆಗೆ ಅರ್ಹರಾದವರಿಗೆ, ತಪ್ಪಿತಸ್ಥರಿಗೆ ಸೂಕ್ತ ಶಿಕ್ಷೆಯನ್ನು ವಿಧಿಸುತ್ತೇವೆ. ಕಾಂಗ್ರೆಸ್ ಪರವಾಗಿಯಾಗಲಿ ಅಥವಾ ವಿರೋಧವಾಗಿಯಾಗಲಿ ಅಧಿಕಾರಿಗಳು ಏನೂ ಮಾಡಕೂಡದು, ಹಾಗೆ ಮಾಡುವುದು ಸರಿಯಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಚುನಾವಣಾ ಕಾಲದಲ್ಲಿ ಯಾವ ಮಂತ್ರಿಗಳೂ ಕೂಡ ಪ್ರವಾಸ ಮಾಡದಿರುವುದು ಒಳ್ಳೆಯದಲ್ಲವೇ ? ಬೇಕಾದರೆ ಆಗ ಒಂದು ತಿಂಗಳು ರಜ ತೆಗೆದುಕೊಳ್ಳಬಹುದು. ಪ್ರವಾಸ ಮಾಡಿದರೆ ಕ್ಯಾನ್ವಾಸ್ ಮಾಡಿದಹಾಗಾಗುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ಶ್ರೀ ರೇವಣಸಿದ್ದಪ್ಪನವರು ಬಹುಶಃ ಅನುಭವದಿಂದ ಆ ಮಾತು ಹೇಳುತ್ತಾರೆ. ಆದರೆ ಪ್ರಜಾಪ್ರಭುತ್ವವಿರುವ ಯಾವ ದೇಶದಲ್ಲೂ ಚುನಾವಣೆ ನಡೆಯುವಾಗ ಸುಮ್ಮನಿರುವುದಕ್ಕಾಗುದಿಲ್ಲ; ಅದು ಸಾಧ್ಯವಿಲ್ಲ ಎಂದು ಅಷ್ಟು ಮಾತ್ರ ನಾನು ಅರಿಕೆಮಾಡಿಕೊಳ್ಳುತ್ತೇನೆ.

Sri U. M. MADAPPA (Chamarajanagar).—Can they travel during elections as Ministers ?

Sri S. NIJALINGAPPA.—Not at all. They travel in their own capacity. ದಸರ ಉತ್ಸವದ ವಿಚಾರದಲ್ಲಿ ಬಹಳ ಹಣ ಖರ್ಚಾಗುತ್ತದೆಂದು ಹೇಳಿದರು. ಅರಮನೆ ದೀಪ ಹಚ್ಚುವುದಕ್ಕೆ ಎರಡು ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದರು. ಮೈಸೂರಿನಲ್ಲಿ ದಸರ ಬರಿ ಹಬ್ಬದ ದೃಷ್ಟಿಯಿಂದ ನಡೆಯುತ್ತಿಲ್ಲ. ಅದನ್ನು ನಾಡಹಬ್ಬವೆಂದು ಕರೆಯಬಹುದು. ಕೆಲಕೆಲವು ಕಡೆ ಅದು ಆಚರಣೆಯಲ್ಲಿದೆ. ಮೈಸೂರಿನಲ್ಲಿ ನಡೆಯುವ ದಸರ ಉತ್ಸವವನ್ನು ನೋಡಲು ಲಕ್ಷಾಂತರ ಜನರು ಹೊರಗಿನಿಂದ ಬರುತ್ತಾರೆ ; ನೋಡಬೇಕೆಂದು ಬಂದು ನಮ್ಮ ದೇಶದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಹೊರಗಿನಿಂದ ತಂದು ಖರ್ಚು ಮಾಡುತ್ತಾರೆ ; ನಮ್ಮ ದೇಶದಲ್ಲಿರುವ ಟ್ಯಾಕ್ಸಿಯವರಿಗೆ, ರೈಲ್ವೆಗೆ, ಹೋಟಲಿನವರಿಗೆ, ಟಾಂಗಾದವರಿಗೆ, ವ್ಯಾಪಾರಸ್ಥರಿಗೆ, ಕ್ಷೌರಿಕರಿಗೆ, ಅಗಸರಿಗೆ ಹಣ ಬರುತ್ತದೆ; ಹೀಗೆ ಕೋಟ್ಯಾಂತರ ರೂಪಾಯಿಗಳು ನಮ್ಮಲ್ಲಿಗೆ ಬಂದು ಖರ್ಚಾಗುತ್ತವೆ. ಎಲ್ಲದಕ್ಕಿಂತ ಹೆಚ್ಚಾಗಿ ಮೈಸೂರಿನಲ್ಲಿ ದಸರ ಕಾಲದಲ್ಲಿ ಎಗ್ಜಿಬಿಷನ್ ಇರುತ್ತದೆ, ಇದು ಅತ್ಯಂತ ಮುಖ್ಯವಾದುದು. ದಕ್ಷಿಣ ಹಿಂದೂಸ್ಥಾನದಲ್ಲಿ ಅತ್ಯಂತ ಪ್ರಾಮುಖ್ಯವಾದ ಎಗ್ಜಿಬಿಷನ್ ಮೈಸೂರಿನಲ್ಲಿ ನಡೆಯುವುದು. ದೇಶದ ನಾನಾ ಭಾಗಗಳಿಂದ ಅಲ್ಲಿಗೆ ಅನೇಕ ವಸ್ತುಗಳು ಬಂದು ಪ್ರದರ್ಶಿಸಲ್ಪಡುತ್ತವೆ. ಇದರಿಂದ ಸರ್ಕಾರಕ್ಕೆ ಇನ್ನೂ ಉತ್ಪತ್ತಿ ಜಾಸ್ತಿ ಬರುತ್ತದೆ. ಈ ಉತ್ಸವಕ್ಕೆ ಲಕ್ಷಾಂತರ ಜನರು ದೂರ ದೇಶಗಳಿಂದ ಬಂದು ಸೇರುತ್ತಾರೆ. ಉತ್ಸವದ ವೈಭವವನ್ನು ನೋಡಿ ಅನೇಕ ತರಹವಾದ ಅಂಶಗಳನ್ನು ಸಂಗ್ರಹಣೆ ಮಾಡುತ್ತಾರೆ. ಈಗ ವಿಶಾಲ ಮೈಸೂರು ಆಗಿರುವುದರಿಂದ, ವಿಶಾಲ ದೃಷ್ಟಿಯಿಂದ ಈ ಉತ್ಸವವನ್ನು ಇನ್ನೂ ಹೆಚ್ಚಿನ ವಿಜೃಂಭಣೆಯಿಂದ ನಡೆಸಬೇಕೆಂದು ಇದ್ದಾರೆ. ಹಿಂದೆ ಇದು ಸಣ್ಣ ಮೈಸೂರಿಗೆ ಮಾತ್ರ ಅನ್ವಯಿಸುತ್ತಿತ್ತು. ಈಗ ಅದರ ವ್ಯಾಪ್ತಿ ಜಾಸ್ತಿಯಾಗಿದೆ. ಕೋಟ್ಯಾಂತರ ರೂಪಾಯಿ ನಮ್ಮ ಜನಗಳಿಗೆ ಅದರಿಂದ ಉತ್ಪತ್ತಿಯಾಗುತ್ತದೆ. ಅದಕ್ಕಾಗಿ ಒಂದು ಕಮಿಟಿಯನ್ನು ರಚನೆ ಮಾಡಿದ್ದೇವು. ಆ ಕಮಿಟಿಯವರ ಶಿಫಾರ್ಸುಗಳ ಮೇಲೆ ಅದನ್ನು ಮುಂದುವರಿಸಿಕೊಂಡು ಬರಬೇಕು ಎಂದು ನಿರ್ಧಾರ ಮಾಡಿದ್ದೇವೆ. ದಸರಾ ಉತ್ಸವದ ಸಂದರ್ಭದಲ್ಲಿ ಅರಮನೆಯನ್ನು ವಿದ್ಯುದ್ದೀಪಗಳಿಂದ ಅಲಂಕರಿಸಿದ್ದಾಗ ಅದನ್ನು ನೋಡಲು ಅಸಂಖ್ಯಾತ ಜನ ಬಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ನರಸಿಂಹನ್‌ರವರು ಮೈಸೂರಿಗೆ ಹೋಗಿ ಈ ಉತ್ಸವದ ವೈಭವವನ್ನು ಇನ್ನೂ ನೋಡದೆ ಇದ್ದರೆ, ಖಂಡಿತವಾಗಿ ಈ ವರ್ಷ ಹೋಗಿ ನೋಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ. ಸಿ. ನರಸಿಂಹನ್.—ಹಿಂದೆ ಮೂರು ವರ್ಷಕ್ಕೊಮ್ಮೆ ಈ ಉತ್ಸವವನ್ನು ಮಾಡಬೇಕೆಂದು ಹಣಕಾಸಿನ ಪರಿಶೀಲನಾ ಕಮಿಟಿಯವರು ಶಿಫಾರ್ಸು ಮಾಡಿರುವುದು ಸರ್ಕಾರಕ್ಕೆ ಗೊತ್ತಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ. ಅವರು ಏನು ಹೇಳಿದ್ದರೂ, ಸರ್ಕಾರದವರು ಪ್ರತಿ ವರ್ಷವೂ ದಸರಾ ಉತ್ಸವ ನಡೆಸಬೇಕೆಂದು ತೀರ್ಮಾನ ಮಾಡಿದ್ದಾರೆ.

ಶ್ರೀ ಎಂ. ಸಿ. ನರಸಿಂಹನ್.—ಹಾಗಾದರೆ ತಾವು ಆ ಕಮಿಟಿಯ ವರದಿಯನ್ನು ಚೆನ್ನಾಗಿ ಓದಿಲ್ಲವೆಂದು ಅರ್ಥವಾಗುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ಅದರ ವಿವರಗಳನ್ನು ಬೇಕಾದರೆ, ನಾಳೆ ತಮಗೆ ತಿಳಿಸುತ್ತೇನೆ. ದಸರಾ ಹಬ್ಬದಲ್ಲಿ ವಸ್ತು ಪ್ರದರ್ಶನವನ್ನು ನಡೆಸುವುದು ಅತ್ಯಾವಶ್ಯಕ. ಅದು ಅನೇಕ ಸ್ಪೋರ್ಟ್ಸ್ ಮತ್ತು ಕಲೆಗಳ ಕೇಂದ್ರವಾಗಿದೆ. ಇಂತಹ ಒಂದು ಅವಕಾಶವನ್ನು ಎರಡು ಲಕ್ಷ ರೂಪಾಯಿಗಳ ಖರ್ಚಿನಿಂದ ಕಲ್ಪಿಸಿ ಕೊಡುತ್ತೇವೆ. ಇದರಿಂದ ನಮ್ಮ ದೇಶದ ಅನೇಕ ಜನರಿಗೆ ಹೆಚ್ಚಿನ ಅನುಕೂಲಗಳಿವೆ.

ಒಬ್ಬ ಸದಸ್ಯರು.—ಜಂಬೂಸವಾರಿ ವಿಷಯ ಹೇಳಲಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಅವಶ್ಯವಿದ್ದರೆ, ಅದರ ತಪ್ಸೀಲನ್ನೂ ಕೂಡ ಕೊಡುತ್ತೇನೆ.

ಇನ್ನು ಸೀನಿಯಾರಿಟಿ ಲಿಸ್ಟಿನ ವಿಚಾರವಾಗಿ ಕೆಲವರು ಮಾತನಾಡಿದ್ದಾರೆ. ಇದನ್ನು ತಯಾರು ಮಾಡುವುದರಲ್ಲಿ ಬಹಳ ಅನ್ಯಾಯಗಳಾಗುತ್ತವೆ ಎಂದು ಅನೇಕ ಕಡೆಗಳಿಂದ ನನಗೆ ಪುಕಾರುಗಳು ಬರುತ್ತಿವೆ. ಈಗ ಏನಾಗಿದೆ ಎಂದರೆ, ಹೊರಗಡೆ ಪ್ರದೇಶಗಳು ಮೈಸೂರಿಗೆ ಸೇರಿದುದರಿಂದ, ಮೈಸೂರಿನ ಅಧಿಕಾರಿಗಳು ಎಲ್ಲಿ ತಮ್ಮ ಸೀನಿಯಾರಿಟಿ ಹೋಗುತ್ತದೋ ಎಂದು ಹೆದರಿದ್ದಾರೆ. ಹೈದರಾಬಾದ್ ಮತ್ತು ಬೊಂಬಾಯಿನವರಿಗೆ ವಿಪರೀತವಾಗಿ

(ಶ್ರೀ ಎಸ್. ನಿಜಲಿಂಗಪ್ಪ.)

ಸಂಬಳವಿರುವುದರಿಂದ ಎಲ್ಲಿ ತಮ್ಮ ಸಂಬಳ ಕಡಮೆಯಾಗುತ್ತದೋ ಎಂಬ ಹೆದರಿಕೆ ಇದೆ. ಬೊಂಬಾಯಿನಲ್ಲಿ ಪ್ರಾಂತ ಆಫೀಸರ ಆಗಿದ್ದವರು ಅಲ್ಲಿಯೇ ಇದ್ದಿದ್ದರೆ ತಾವು ಡೆಪ್ಯುಟಿ ಕಲೆಕ್ಟರ್ ಆಗುತ್ತಿದ್ದರೆಂದೂ. ಕಲೆಕ್ಟರ್ ಆಗುತ್ತಿದ್ದರೆಂದೂ ತಿಳಿದುಕೊಂಡಿದ್ದರು. ಅವರು ಮೈಸೂರಿಗೆ ಬಂದು ಸೇರಿದ ಮೇಲೆ ತಮ್ಮ ಗತಿ ಏನಾಗುತ್ತದೋ ಎಂದು ಯೋಚಿಸುತ್ತಿದ್ದಾರೆ. ಆದರೆ ಕೊಡಗಿನವರದು ಜಾಸ್ತಿ ಗಲಾಟೆ ಇಲ್ಲ; ಅವರದು ಒಳಗೊಳಗೇ ಗಲಾಟೆ. ಏಕೆಂದರೆ ಅವರ ಸಂಖ್ಯೆ ಕಡಮೆ. ಮೈಸೂರಿನಲ್ಲಿ ಈಗ ಐದು ಭಾಗಗಳಿಂದ ಬಂದಿರುವವರ ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡುವುದು ಬಹಳ ಕಠಿಣವಾದ ಸಮಸ್ಯೆ ; ಮತ್ತು ಹೆಚ್ಚು ಜವಾಬ್ದಾರಿಯುತವಾದುದು. ಆದ್ದರಿಂದ ಈಗ ಒಂದು ಕಮಿಟಿಮಾಡಿ ಕೇಂದ್ರ ಸರ್ಕಾರದವರು ಕಳುಹಿಸಿರತಕ್ಕ ರೂಲ್ಸ್ ಪ್ರಕಾರ ಸೀನಿಯಾರಿಟಿಗಳನ್ನು ನಿಗದಿಮಾಡಬೇಕೆಂದು ವ್ಯವಸ್ಥೆಮಾಡಿದ್ದರ ಮೇಲೆ ಅವರು ತಯಾರುಮಾಡಿರತಕ್ಕ ಸೀನಿಯಾರಿಟಿ ಪಟ್ಟಿಯ ಮೇಲೆ ಏನಾದರೂ ಪ್ರೊಟೆಸ್ಟ್ ಇದ್ದರೆ ಒಂದು ತಿಂಗಳೊಳಗಾಗಿ ಮಾಡಬಹುದು ಎಂದು ಹೇಳಿದ್ದೆವು. ಕೆಲವರು ಈ ಬಗ್ಗೆ ಎರಡು ತಿಂಗಳು, ಮೂರು ತಿಂಗಳು ಕಾಲ ಟೈಮ್ ಕೇಳಿದ್ದಾರೆ. ಆ ರೀತಿ ಅವರಿಗೆ ಕೊಟ್ಟಿದ್ದೇವೆ. ಪೂರ್ತಿಯಾಗಿ ವರದಿ ಬಂದನಂತರ ಅವುಗಳನ್ನು ಪುನಃ ಪರಿಶೀಲನೆಮಾಡಿ ಯಾರಿಗೂ ಅನ್ಯಾಯವಾಗದಂತೆ, ಸರ್ಕಾರದವರು ಸೀನಿಯಾರಿಟಿ ಪಟ್ಟಿಯನ್ನು ನಿಗದಿ ಮಾಡಬೇಕೆಂದು ಇದ್ದಾರೆ. ಆದ್ದರಿಂದ ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದು.

ಇನ್ನು ಡಿಸ್ಟ್ರಿಕ್ಟುಗಳನ್ನು ಕಡಮೆ ಮಾಡಬೇಕೆಂದು ಕೆಲವರು ಹೇಳಿದ್ದಾರೆ. ಈಗ ಸುಮಾರು 15-16-17 ಲಕ್ಷ ಜನಗಳು ಇರುವ ಜಿಲ್ಲೆಗಳೂ ಇವೆ. ಇನ್ನೂ ಬಹಳ ಕಡಮೆ ಜನಸಂಖ್ಯೆ ಇರುವ ಜಿಲ್ಲೆಗಳೂ ಇವೆ. ಇದನ್ನು ಕೂಡಲೇ ಮಾಡತಕ್ಕದ್ದು ಸರಿಯಲ್ಲವೆಂದು ನನಗನ್ನಿಸುತ್ತದೆ. ಇದಕ್ಕೆ ಇನ್ನೂ ಕೊಂಚಕಾಲ ಬೇಕಾಗುತ್ತದೆ· ಚೆನ್ನಾಗಿ ಆಡಳಿತದ ಅನುಭವ ಬಂದ ಮೇಲೆ, ಯೋಚನೆ ಮಾಡಬೇಕಾದ ವಿಚಾರ ವಿದು.

ಶ್ರೀ ಜಿ. ಎಚ್. ಪುಟ್ಟಣ್ಣ.—ಸಣ್ಣ ಸಣ್ಣ ಜಿಲ್ಲೆಗಳು ವಿಪರೀತವಾಗಿವೆ. ಅವುಗಳನ್ನಾದರೂ ಈಗ ಕಡಮೆ ಮಾಡಬಹುದಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅವೆಲ್ಲವನ್ನೂ ಒಂದೇ ಸಾರಿ ಮಾಡೋಣವೆಂದು ಇದ್ದೇವೆ.

ಇನ್ನು ಹಾಸ್ಪಿಟಾಲಿಟಿ ಆರ್ಗನೈಜೇಷನ್ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇದನ್ನು ಬಹಳ ದೊಡ್ಡದಾಗಿ ಸದಸ್ಯರು ಯೋಚನೆ ಮಾಡುತ್ತಿದ್ದಾರೆ. ಈಗ ಕೇಂದ್ರದವರಿಗೂ ನಮಗೂ ಎಷ್ಟೋ ಸಂಬಂಧಗಳಿವೆ. ಅವರಿಂದ ನಮಗೆ ಎಷ್ಟೆಷ್ಟೋ ಸಹಾಯಬೇಕಾಗಿದೆ. ಅನೇಕ ವಿಧಗಳಲ್ಲಿ ನಾನಾ ವಿಷಯಗಳ ಮೇಲೆ ಅವರಿಂದ ನಮಗೆ ಸಲಹೆಗಳು ಬೇಕಾಗಿವೆ. ನಮ್ಮ ದೇಶಕ್ಕೆ ಆಗಾಗ್ಗೆ ಕೇಂದ್ರದ ಸಚಿವರೂ, ಸೆಕ್ರೆಟರಿಗಳೂ, ತಜ್ಞರೂ ಮತ್ತು ಪ್ಲಾನಿಂಗ್ ಕಮಿಷನ್ನಿನವರೂ ಬರುವುದರಿಂದ, ನಮಗೆ ಹೆಚ್ಚಿನ ಅನುಕೂಲಗಳುಂಟಾಗುತ್ತಿವೆ. ಮತ್ತೊಂದು ಸಂತೋಷದ ವಿಚಾರವೇನೆಂದರೆ, ಹೊರದೇಶಗಳಿಂದ ಅನೇಕರು ಬೆಂಗಳೂರಿಗೆ ಬಂದರೆ, ನಮ್ಮ ದೇಶದ ಪ್ರಕೃತಿ ಸೌಂದರ್ಯವನ್ನು ನೋಡಿ, ಇಲ್ಲಿಯೇ ಸುಖ ಜೀವನವನ್ನು ಮಾಡಲು ಇರುತ್ತಾರೆ. ಇಲ್ಲಿ ಅನೇಕ ಸಮ್ಮೇಳನಗಳು ನಡೆಯುತ್ತವೆ. ಈಚೆಗೆ ಇಂಜನಿಯರುಗಳ ಸಮ್ಮೇಳನ, ಹೆಲ್ತ್ ಮಿನಿಸ್ಟರುಗಳ ಸಮ್ಮೇಳನ—ಇನ್ನೂ ಇತರ ಸಮ್ಮೇಳನಗಳು ಇಲ್ಲಿಯೇ ನಡೆದಿವೆ. ಇದರಿಂದ ಬೇಕಾದಷ್ಟು ಅನುಕೂಲತೆಗಳು ನಮ್ಮ ದೇಶಕ್ಕೆ ಆಗುತ್ತವೆ. ಒಂದು ಸಲ ಇಲ್ಲಿ ಮೆಡಿಕಲ್ ಕಾನ್ಫರೆನ್ಸ್ ನಡೆಯಿತು. ಆ ಸಂದರ್ಭದಲ್ಲಿ ಕೇಂದ್ರದ ಆರೋಗ್ಯ ಮಂತ್ರಿಗಳು ಬಂದಿದ್ದರು. ಅವರು ನಮ್ಮ ದೇಶದ ಅಭಿವೃದ್ಧಿಗೋಸ್ಕರ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದಾರೆ. ತಮ್ಮ ವಾದ ನೋಡಿದರೆ penny wise pound foolish ಎಂದು ಹೇಳಬಹುದು. ಹೊರಪ್ರದೇಶಗಳಿಂದ ಬಂದವರನ್ನು ರೆಸಿಡೆನ್ಸಿಯಲ್ಲಿಟ್ಟು ಸುಮ್ಮನೆ 50—100 ರೂಪಾಯಿಗಳನ್ನು ಅನಾವಶ್ಯಕವಾಗಿ ಖರ್ಚು ಮಾಡುತ್ತಾರೆಂದು ವಾದಮಾಡುವುದು ಸರಿಯಲ್ಲ. ನಮ್ಮ ಅಭಿಪ್ರಾಯ ನಿಷ್ಕಾರಣವಾಗಿ ಖರ್ಚು ಮಾಡಬೇಕೆಂದಲ್ಲ. ಅವರು ಇಲ್ಲಿಗೆ ಬಂದು ಹೋಗುವುದರಿಂದ ಎಷ್ಟೋ ಪ್ರಯೋಜನವುಂಟು. ಆದ್ದರಿಂದ ಅವರನ್ನು ಇಲ್ಲಿಗೆ ಕರೆಸಿ ಒಂದು ತಿಂಗಳಾದರೂ ಇಟ್ಟುಕೊಂಡು ನಮ್ಮಲ್ಲಿ ಏನೇನು ನ್ಯೂನತೆಗಳಿವೆಯೋ ಅವುಗಳನ್ನು ಸರಿಪಡಿಸಲು ತಯಾರಿದ್ದೇವೆ. ನಮ್ಮಲ್ಲಿ ಎಷ್ಟೋ ಕಚ್ಚಾಪದಾರ್ಥಗಳಿವೆ. ಅವುಗಳನ್ನು ಉತ್ತಮಪಡಿಸಲು ಹಣವನ್ನು ಸಾಲಮಾಡಿಯಾದರೂ ತಂದು ಲಕಾಂತರ ರೂಪಾಯಿಗಳು ಖರ್ಚಾದರೂ ಚಿಂತೆಯಿಲ್ಲ, ಅವರ ಅಭಿಪ್ರಾಯವನ್ನು ಪಡೆದು ಹೆಚ್ಚಿನ ಅನುಕೂಲಗಳನ್ನು ಹೊಂದುವುದು ಉತ್ತಮ. ಕೆಲವು ಮಾನ್ಯಸದಸ್ಯರು ಗೆಸ್ಟ್‌ಹೌಸ್‌ಗಳಲ್ಲಿ ದೊಡ್ಡ ಅನ್ಯಾಯವಾಗುತ್ತಿದೆ ಎಂದು ಹೇಳಿದರು. ಅದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ, "ಅನ್ನ ಆಗಿದೆ ಎನ್ನುವುದಕ್ಕೆ ಒಂದು ಅಗಳು ನೋಡಿದರೆ ಸಾಕು" ಎಂಬಂತೆ, ಈಗ ಹೊಟೇಲ್ ಮೆಟ್ರೊಪೋಲಿನ ವಿಚಾರವನ್ನು ತೆಗೆದುಕೊಳ್ಳೋಣ. ಈ ಹೊಟೇಲಿನ ಆಡಳಿತವನ್ನು ಬೇರೆಯವರಿಗೆ ವಹಿಸಿಕೊಟ್ಟಿದ್ದೇವೆ. ಈ ಕಟ್ಟಡದ ಮೇಂಟೆನೆನ್ಸಿಗಾಗಿ ಒಂದು ವರ್ಷಕ್ಕೆ ಹನ್ನೊಂದು ಸಾವಿರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಸಿವಿಲ್ ಹೆಡ್‌ನಲ್ಲಿ ಮಿಸಿಲೇನಿಯಸ್ ಐಟಂನಲ್ಲಿ ಈ ಖರ್ಚು ಬರುವುದಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಬರುವುದಿಲ್ಲ.

ನಾವು ಈ ಹೋಟೇಲಿಗೋಸ್ಕರ ಖರ್ಚು ಮಾಡುವುದು ಹನ್ನೊಂದುಸಾವಿರ ರೂಪಾಯಿಗಳು. ಅದರಿಂದ ನಮಗೆ ಬರತಕ್ಕ ಆದಾಯ 30,500 ರೂಪಾಯಿಗಳು. ಕ್ಯಾಕರಿಯಿಂದ ಐದು ಸಾವಿರ ರೂಪಾಯಿಗಳ ಆದಾಯ ಬರುತ್ತಿದೆ. ಒಟ್ಟಿಗೆ 35,500 ರೂಪಾಯಿಗಳ ಆದಾಯ ಬರುತ್ತಿದೆ. ಈ ರೀತಿ ಹೊಟೇಲನ್ನು ಬಾಡಿಗೆಗೆ ಕೊಟ್ಟಿರುವುದರಿಂದ ಇಷ್ಟು ಲಾಭ ಬರುತ್ತಿದೆ. ರಿಪೇರಿಗೆಂದು ಮಾತ್ರ 11,000 ರೂಪಾಯಿಗಳು ಖರ್ಚನ್ನು ಇಟ್ಟಿದ್ದೇವೆ. ಆದರೆ ಕೃಷ್ಣರಾಜಸಾಗರದ ಹೊಟೇಲನ್ನು ಬೇರೆಯವರಿಗೆ ಯಾರಿಗೂ ಕೊಡದೆ ನಾವೇ ನಡೆಸಿಕೊಂಡು ಬರುತ್ತಿದ್ದೇವೆ. ಅದರಿಂದ ಖರ್ಚು ವಗೈರೆ ಎಲ್ಲಾ ಕಳೆದು ಸುಮಾರು 14,763 ರೂಪಾಯಿಗಳ ವರಮಾನವಿದೆ. ಆದರೆ ಲಕ್ಷಾಂತರ ರೂಪಾಯಿಗಳು ಇದರಿಂದ ಉತ್ಪತ್ತಿಯಾಗುವುದಕ್ಕೆ ಸಾಧ್ಯವಿದೆ. ಅದು ಬಹಳ ಸುಂದರವಾದ ಪ್ರದೇಶ. ಅಸಂಖ್ಯಾತ ಜನರು ಇಲ್ಲಿನ ಪ್ರಕೃತಿ ಸೌಂದರ್ಯವನ್ನು ನೋಡಲು ಬರುವುದಕ್ಕೆ ಅಪೇಕ್ಷೆಪಡುತ್ತಾರೆ. ಹೊರಗಿನವರಂತೂ ಇಲ್ಲಿಗೆ ಬಂದರೆ ಯಾವ ಯಾವ ತರಹ ಊಟಗಳನ್ನು ಕೇಳುತ್ತಾರೋ ಅವೆಲ್ಲವನ್ನೂ ಒದಗಿಸಿಕೊಟ್ಟರೆ, ಇನ್ನೂ ಹೆಚ್ಚಿನ

ಆದಾಯ ಈ ಹೋಟೇಲ್ ಒಂದರಿಂದಲೇ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಮ್ಯಾನೇಜ್‌ಮೆಂಟ ನಲ್ಲಿ ಡಿಫೆಕ್ಟ್ಸ್ ಇರುವುದರಿಂದ ನಷ್ಟವಾಗುತ್ತಿದೆ ಯಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಇರಬಹುದು. The Hon'ble Member may bring it to my notice. I will certainly rectify the defects, because we want to earn more money out of it.

ಇನ್ನು ಬೆಳಗಾಂನಲ್ಲಿ ನೀರು ಸರಬರಾಯಿಯ ವಿಷಯದಲ್ಲಿ ಕೆಲವರು ಮಾತನಾಡಿದ್ದಾರೆ. ಬೆಳಗಾಮಿನಲ್ಲಿ ವಾಟರ್ ಸಪ್ಲೈ ಸೌಕರ್ಯವನ್ನು ಆದಷ್ಟು ಜಾಗ್ರತೆ ಒದಗಿಸಬೇಕೆಂದಿದ್ದೇವೆ. ಅದು ಮಂಜೂರಾಗಿದೆ. ಅದಕ್ಕೆ ಬೇಕಾದ ಹಣವೂ ಇದೆ. ಆದರೆ ಅದಕ್ಕೆ ಸಂಬಂಧಪಟ್ಟ ರಿಕಾರ್ಡ್ಸ್ ವಗ್ಯೆರೆ ಬರುವುದಕ್ಕೆ ಸ್ವಲ್ಪ ತಡವಾಗಿದೆ. ಬೆಳಗಾಂ ಮತ್ತು ಬಳ್ಳಾರಿಯಲ್ಲಿ ನೀರಿನ ಅಭಾವ ಜಾಸ್ತಿ ಇದೆ. ಆದ್ದರಿಂದ ನೀರು ಸರಬರಾಯಿಯ ಕಾರ್ಯವನ್ನು ಕೂಡಲೆ ತೆಗೆದುಕೊಳ್ಳಲಾಗುತ್ತದೆ.

ಇನ್ನು ಒಂದು ವಿಚಾರ. ನಮ್ಮಲ್ಲಿ ಐದು ಲಕ್ಷ ಜನ ಮಹಾರಾಷ್ಟ್ರ ಜನರಿದ್ದಾರೆ. ಇದು ರಾವಣ ರಾಜ್ಯ, ನಮಗೆ ಇಷ್ಟವಿಲ್ಲದಿದ್ದರೂ ಇಟ್ಟುಕೊಂಡಿದ್ದಾರೆಂದು ಕೆಲವರು ವಾದಿಸಿದ್ದಾರೆ. ಒಂದು ವಿಚಾರವನ್ನು ಜ್ಞಾಪಕದಲ್ಲಿಡಬೇಕು. Water-tight compartment ಹಾಗೆ ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ. ಹಿಂದೂಸ್ಥಾನದಲ್ಲಿ ಬಹುಶಃ ಉತ್ತರ ಪ್ರದೇಶ ವಿನಾ ಬಾಕಿ ರಾಜ್ಯಗಳನ್ನು ತೆಗೆದುಕೊಂಡರೆ ಶೇಕಡ 10 ರಂತೆ ಶೇಕಡ 15 ರಂತೆ ಮೈನಾರಿಟೀಸ್ ಎಲ್ಲಾ ಕಡೆಯೂ ಇದ್ದಾರೆ. ಆಡಳಿತ ದೃಷ್ಟಿಯಿಂದ ಈ ರೀತಿ ಮಾಡಿದ್ದೇವೆಯೇ ವಿನಾ, ಒತ್ತಾಯಮಾಡಿ ಯಾರನ್ನೂ ನಮ್ಮಲ್ಲಿಯೇ ಉಳಿಸಿಕೊಳ್ಳಬೇಕೆಂದು ಮಾಡಲಿಲ್ಲ.

5 P.M.

ಇದನ್ನು ಆಡಳಿತದ ದೃಷ್ಟಿಯಿಂದ ಮಾಡಿದೆ. ಅವರನ್ನು ಒತ್ತಾಯ ಮಾಡಿ ಉಳಿಸಿಕೊಳ್ಳಬೇಕೆಂದು ಮಾಡಿದ್ದೇವೆಂದು ಹೇಳಿದರೆ ಚೆನ್ನಾಗಿ ಕಾಣುವುದಿಲ್ಲ. ಬೇರೆ ಪ್ರಾಂತಗಳಲ್ಲಿ ಕನ್ನಡ ಮಾತನಾಡುವ ಹನ್ನೆರಡು ಲಕ್ಷ ಜನರಿದ್ದಾರೆ. ಪುನಃ ಅವರನ್ನು ನಮ್ಮೊಡನೆ ಸೇರಿಸಬೇಕು ಎಂದು ಹೇಳಿ, ಅಸಮಾಧಾನ ಪರಿಸ್ಥಿತಿ ಉಂಟು ಮಾಡುವುದು ಸರಿಯಾದುದಲ್ಲ. ಹಿಂದೆ ಈ ವಿಚಾರದಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮಹಾರಾಷ್ಟ್ರದ ಜನಗಳಿಗೆ ನಾನು ಒಂದು ಆಶ್ವಾಸನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅವರ ಭಾಷೆಗೆ ಯಾವ ಕುಂದಕವೂ ಬರದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ಆ ಬಗ್ಗೆ ಲಿಂಗ್ವಿಸ್ಟಿಕ್ ಮೈನಾರಿಟೀಸ್ ಗಳಿಗಾಗಿ ಏನೇನು ಅನುಕೂಲಗಳನ್ನು ಒದಗಿಸಿಕೊಡಬೇಕೋ ಅವನ್ನೆಲ್ಲ ಒದಗಿಸಿ ಕೊಡುವುದು ನಮ್ಮ ಕರ್ತವ್ಯ. ಇದೇ ರೀತಿ ಮದರಾಸು, ಒರಿಸ್ಸಾ, ಕೇರಳ, ಆಂಧ್ರ, ಬಂಗಾಳ ಮತ್ತು ಇತರ ದೇಶಗಳ ಸರಕಾರಗಳು ಈ ತತ್ವವನ್ನು ಒಪ್ಪಿಕೊಂಡು ಭಾಷಾವಾರು ಅಲ್ಪ ಸಂಖ್ಯಾತರಿಗೆ ಏನೇನು ರಕ್ಷಣೆಗಳನ್ನು ಕೊಡಬೇಕೋ ಅವನ್ನೆಲ್ಲ ಕೊಡುತ್ತಾರೆ. ಅದೇ ರೀತಿ ಕೇಂದ್ರ ಸರಕಾರವೂ ಇನ್‌ಸ್ಟ್ರಕ್ಷನ್ನುಗಳನ್ನು ನಮಗೆ ಕಳುಹಿಸಿದ್ದಾರೆ. ಅದರಂತೆ ಕ್ರಮಗಳನ್ನು ಕೈಗೊಳ್ಳುತ್ತೇವೆ. ಹೀಗಿದ್ದರೂ ಕೂಡ ಇದನ್ನೇ ದೊಡ್ಡದು ಮಾಡಿಕೊಂಡು ಇಲ್ಲಿ ರಕ್ಷಣೆ ಕೊಡಬೇಕೆಂದು ಹೇಳುವುದು ಸಾಧುವಲ್ಲ.

India is one Unit. It is only for the purpose of administrative convenience that we have divided it on language basis because it helps better development. But the basic idea must be 'one Nation and one Country.' ಆದುದರಿಂದ ಯಾರೂ ಇದರ ವಿಚಾರವಾಗಿ ಅನುಮಾನ ಪಡಬೇಕಾಗಿಲ್ಲ,

ನಮ್ಮ ಸ್ನೇಹಿತರಾದ ಶ್ರೀಮಾನ್ ಸಿದ್ದಯ್ಯನವರು ಒಂದು ವಿಷಯ ಹೇಳಿದರು. ನಾವು ಅಧಿಕಾರಕ್ಕೆ ಬಂದ ಮೇಲೆ ಈಗ ಮರ್ಯಾದೆಗಾಗಿ ಇದ್ದ ಬೆಳ್ಳಿ ಕಟ್ಟಿಗೆ ಮುಂತಾದುವನ್ನೆಲ್ಲ ತೆಗೆದು ಹಾಕಿದರು, ಇದರಿಂದಾಗಿ ನಮ್ಮ ದರ್ಪ ಕಡಿಮೆಯಾಗುತ್ತದೆ ಎಂದು ತಿಳಿಸಿದರು. ಹಾಗೇನೂ ಆಗುವುದಿಲ್ಲ. ಅಲ್ಲದೆ ನಾವೀಗ ಕಾರುಗಳ ಮೇಲೆ ಹಾಕುವ ಧ್ವಜಗಳನ್ನೂ ಕೂಡ ತೆಗೆದು ಹಾಕಿದ್ದೇವೆ. ಅದರಿಂದ ನಮ್ಮ ದರ್ಪವೇನೂ ಕಡಮೆಯಾಗಿಲ್ಲ ಮತ್ತು ನಮ್ಮ ದರ್ಪ ಇನ್ನೂ ಚೆನ್ನಾಗಿಯೇ ಇದೆ ಎಂದು ಹೇಳಬಹುದು.

ಅಲ್ಲದೆ ಶ್ರೀಮಾನ್ ಸಿದ್ದಯ್ಯನವರು ಪಬ್ಲಿಕ್ ಸರ್ವಿಸು ಕಮಿಷನ್ನಿನಲ್ಲಿ ಒಬ್ಬ ಹರಿಜನ ಸದಸ್ಯರನ್ನು ನೇಮಕ ಮಾಡುತ್ತೇವೆಂದು ವಾಗ್ದಾನ ಕೊಟ್ಟಿದ್ದೆವು ಎಂದು ಹೇಳಿದರು. ಬಹುಶಃ ಅವರು ನಾನು ಕೊಟ್ಟಿರತಕ್ಕ ಉತ್ತರವನ್ನು ಸರಿಯಾಗಿ ಓದಿದ್ದರೆ ಆ ರೀತಿ ಹೇಳುತ್ತಿರಲಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಸಾಧ್ಯವಾದಷ್ಟು ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆಂದು ಹೇಳಿದ್ದೇನೆ. ಕೊಡುತ್ತೇವೆಂದು ಹೇಳಲಿಲ್ಲ. ಆದರೆ ಅವರಿಗೆ ಏನೇನು ಸೌಲಭ್ಯಗಳನ್ನು ಕೊಡುವುದು ಸಾಧ್ಯವೋ ಅವೆಲ್ಲವನ್ನೂ ಕೊಡುತ್ತಿದ್ದೇವೆ. ಅವರ ವಿಷಯದಲ್ಲಿ ನಿಮಗೆ ಎಷ್ಟರಮಟ್ಟಿಗೆ ಸಹಾನುಭೂತಿಯಿದೆಯೋ ಅಷ್ಟರಮಟ್ಟಿನ ಸಹಾನುಭೂತಿ ನಮಗೂ ಇದೆ. ಅದರಲ್ಲೇನೂ ಅನುಮಾನ ಪಡಬೇಕಾದ ಅಗತ್ಯವಿಲ್ಲ.

ಆಮೇಲೆ ಲೆಜಿಸ್ಲೇಚರ್ ಸೆಕ್ರೆಟೇರಿಯೆಟ್ಟಿನ ವಿಷಯದಲ್ಲಿ ನಾವು ಕೈಹಾಕಿದ್ದೇವೆಂದು ಕೆಲವು ಸದಸ್ಯರು ಹೇಳಿದರು. ಅಂತಹದೇನೂ ನಾವು ಮಾಡಿಲ್ಲ. ಅದು ಸ್ಪೀಕರಿಗೆ ಮತ್ತು ಚೇರ್ಮನ್ನರಿಗೆ ಸೇರಿದುದು ಆಗಿದೆ. ಅವರಿಗೆ ಬೇಕಾದ ಅಧಿಕಾರಿಗಳನ್ನು ಅವರೇ ನೇಮಕ ಮಾಡಬಹುದು ಮತ್ತು ಅವರುಗಳು ಯಾರು ಯಾರಿಗೆ ಎಷ್ಟೆಷ್ಟು ಸಂಬಳಗಳು ಇರಬೇಕು ಎಂಬುದನ್ನು ಅವರೇ ನಿರ್ಧರಿಸುತ್ತಾರೆ. ಸರಕಾರ ಅವರಿಗೆ ಎಷ್ಟು ಹಣ ಬೇಕೋ ಅದನ್ನು ಮಾತ್ರ ಒದಗಿಸುತ್ತದೆ. ಅವರ ಸೆಕ್ರಿಟೇರಿಯಟ್ಟಿನ ವಿಚಾರವಾಗಿ ಕೈ ಹಾಕುವುದಕ್ಕೆ ಖಂಡಿತ ನಾವು ಇಷ್ಟಪಡುವುದಿಲ್ಲ. ಇನ್ನು ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವೆಲ್ಲವನ್ನೂ ವಿಚಾರ ಮಾಡಿ ಎಷ್ಟರ ಮಟ್ಟಿಗೆ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ಕೊಟ್ಟು ಕೆಲಸ ಮಾಡಬೇಕೆಂದು ಹೇಳಿದ್ದಾರೋ ಅವನ್ನೆಲ್ಲ ಪರಿಶೀಲಿಸಿ ಸಾಧ್ಯವಾದಷ್ಟು ಗಮನ ಕೊಡುತ್ತೇನೆ. ಅವಕ್ಕೆಲ್ಲ ಉತ್ತರ ಕೊಡಲು ಈಗ ಕಾಲಾವಕಾಶವಿಲ್ಲ.

ಆದುದರಿಂದ ಡಿಮ್ಯಾಂಡುಗಳು ಯಾವರೀತಿ ಮಂಡಿಸಲ್ಪಟ್ಟಿದೆಯೋ ಅವನ್ನು ಎಲ್ಲರೂ ಒಪ್ಪಬೇಕೆಂದು ಕೋರುತ್ತೇನೆ.

Mr. SPEAKER.—The que tion is:

"That a sum not exceeding Rs. 2,20,52,900 be granted to the Government to defray the charges which will come in the course of payment during the year ending 31st March 1958 in respect of 'General Administration (Except the sub-major heads B and C)'."

The motion was adopted.

Mr. SPEAKER.—The question is:

"That a sum not exceeding Rs. 37,88,300 be granted to the Government to defray the charges which will come in the course of payment during the year ending 31st March 1958 in respect of 'General Administration—State Legislature and Election Charges'."

The motion was adopted.

Mr. SPEAKER.—The House will now adjourn and meet tomorrow at 8-30 A.M.

The House adjourned at Ten Minutes past Five of the Clock to meet again at Thirty Minutes past Eight of the Clock on Saturday, the 20th July 1957.

WD 3618—GPB—900—2-12-57.